ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

'ಪೇಪರ್ ಸಿಂಹ'ನನ್ನು ಗುಹೆಗಟ್ಟಿದ
ಎಸ್‌ಪಿ ರವಿ ಚೆನ್ನಣ್ಣನವರ್



ಸಂಪುಟ 11 | ಸಂಚಿಕೆ 51 | ಪುಟ 16 | ಡಿಸೆಂಬರ್ 11-17, 2017 | ರೂ. 10/- web: www.janashakthi.co.in | e-mail : js_weekly@yahoo.com

ಬಿಜೆಪಿಯ ಶಾ ಪ್ರಣೀತ 'ಟಿಯರ್ ಗ್ಯಾಸ್ ಲಾರಿ ಚಾರ್ಜ್' ಹೊಸ ರಾಜಕಾರಣ









ಹುಣಸೂರಿನಲ್ಲಿ ಕೋಮುಗಲಭೆಗೆ ಯತ್ನ


ಉತ್ತರ ಪ್ರದೇಶದಲ್ಲಿ ಬಿಜೆಪಿ ಪರಾಭವ

18% ವಾರ್ಡುಗಳಲ್ಲಿ ಜಯ, 45% ಠೇವಣಿ ನಷ್ಟ



ಡಿಸೆಂಬರ್ 6 ಕರಾಳ ದಿನಾಚರಣೆ

ಗುಜರಾತ್: 'ಮೋದಿ ಮ್ಯಾಜಿಕ್'ನ ಸತ್ವಪರೀಕ್ಷೆ



ಬಂಗಾಳಿ ಮುಸ್ಲಿಂ ವಲಸೆ ಕಾರ್ಮಿಕನ ಬರ್ಬರ ಕೊಲೆ





ಕಾರ್ಪೋರೆಟ್ ಸಾಲಮನ್ನಾ ಮಾಡಲು ನಮ್ಮ ಠೇವಣಿಗೆ ಕನ್ನಕ್ಕೆ ಕಾನೂನು

ರೈತ-ವಿರೋಧಿ ಬಿಜೆಪಿಯನ್ನು ಸೋಲಿಸಿ-ಗುಜರಾತಿನ ರೈತರಿಗೆ ಭೂಮಿ ಅಧಿಕಾರ್ ಆಂದೋಲನ್ ಮನವಿ

ಉತ್ತರಪ್ರದೇಶದ ರೈತರು ಮತ್ತು ಗ್ರಾಮೀಣ ಕಾರ್ಮಿಕರಿಗೆ ಅಭಿನಂದನೆ

ದೇಶದ ಹಲವಾರು ರೈತ ಸಂಘಟನೆಗಳ ಜಂಟಿ ವೇದಿಕೆಯಾದ 'ಭೂಮಿ ಅಧಿಕಾರ್ ಆಂದೋಲನ್' (ಬಿಎಎ) ರೈತಾಪಿ ಜನಗಳಿಗೆ ವಿಶ್ವಾಸಘಾತ ಮಾಡಿರುವ, ಗುಜರಾತಿನಲ್ಲೂ, ದೇಶದಲ್ಲೂ ರೈತ-ವಿರೋಧಿ ನವ-ಉದಾರವಾದಿ ಧೋರಣೆಗಳನ್ನು ತೀವ್ರಗೊಳಿಸಿರುವ ಬಿಜೆಪಿಯನ್ನು ಡಿಸೆಂಬರ್ 9 ಮತ್ತು 14ರಂದು ನಡೆಯಲಿರುವ ವಿಧಾನಸಭಾ ಚುನಾವಣೆಗಳಲ್ಲಿ ಸೋಲಿಸಬೇಕು ಎಂದು ಗುಜರಾತಿನ ಜನತೆಗೆ, ನಿರ್ದಿಷ್ಟವಾಗಿ ರೈತರು, ಆದಿವಾಸಿಗಳು, ದಲಿತರು, ಅಲ್ಪಸಂಖ್ಯಾತರು, ಮೀನು ಕೆಲಗಾರರು ಮತ್ತು ಅರಣ್ಯವಾಸಿಗಳಿಗೆ ಕರೆ ನೀಡಿದೆ.

ಹಣಕಾಸು ಮಂತ್ರಿ ಜೇಟ್ಲಿಯವರು ರೈತರ ಸಾಲಮನ್ನಾಕ್ಕೆ ಒಂದು ಪೈಸೆಯನ್ನೂ ಕೊಡುವುದಿಲ್ಲ ಎಂದಿದ್ದಾರೆ. ಜಾನುವಾರು ಮಾರಾಟವನ್ನು ನಿಷೇಧಿಸ ಹೊರಟು ಸಣ್ಣ ಮತ್ತು ಮಧ್ಯಮ ರೈತರ ಅಲ್ಪ ಆದಾಯಗಳಿಗೂ ಕನ್ನ ಹಾಕಿದ್ದಾರೆ. ನೋಟುರದ್ಧತಿ ಮತ್ತು ಜಿಎಸ್‌ಟಿಯಂತೂ ಕೃಷಿ ಆರ್ಥಿಕವನ್ನು ಹಾಳುಗೆಡವಿವೆ.

ಮೋದಿ ನೇತೃತ್ವದ ಬಿಜೆಪಿ ಸರಕಾರ ಅನುಸರಿಸುತ್ತಿರುವ ಧೋರಣೆಗಳಿಂದಾಗಿ ಕೊನೆಗೆ ರೈತರು ತಮ್ಮ ಬೆಳೆಗಳಿಗೆ ಫಲದಾಯಕ ಬೆಲೆಗಳನ್ನು ಕಳಕೊಳ್ಳುವುದು ಮಾತ್ರವಲ್ಲ, ತಮ್ಮ ಭೂಮಿಯನ್ನೂ ಕಳಕೊಂಡು ದೈತ್ಯ ಕೃಷಿ ಕಾರ್ಪೊರೇಟ್‌ಗಳ ಕಾಂಟ್ರಾಕ್ಟ್ ಕಾರ್ಮಿಕರಾಗಿ ಬಿಡುತ್ತಾರೆ ಎಂದು ಬಿಎಎ ಆತಂಕ ವ್ಯಕ್ತಪಡಿಸಿದೆ.

ಬಿಜೆಪಿಯನ್ನು ಸೋಲಿಸದೆ ರೈತರ ಹಿತಗಳ ರಕ್ಷಣೆ ಸಾಧ್ಯವಿಲ್ಲ. ಆದ್ದರಿಂದ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಇತರ ರೈತ-ವಿರೋಧಿ ಶಕ್ತಿಗಳನ್ನು ಸೋಲಿಸಬೇಕಾಗಿದೆ. ಕೃಷಿಯನ್ನು ತೀವ್ರವಾಗಿ ಬಾಧಿಸುತ್ತಿರುವ ಬಿಕ್ಕಟ್ಟು ಎದುರಿಸಬೇಕಾದರೆ ರೈತರು ಒಂದು ಸ್ವತಂತ್ರ ಶಕ್ತಿಯಾಗಿ ಮೂಡಿ ಬಂದು ದೇಶದ ರಾಜಕೀಯ ಪ್ರಕ್ರಿಯೆಯ ಮೇಲೆ ನಿರ್ಣಾಯಕ ಪ್ರಭಾವ ಬೀರುವಂತಾಗಬೇಕು ಭೂಮಿ ಅಧಿಕಾರ್ ಆಂದೋಲನ್ ಹೇಳಿದೆ.

ಗುಜರಾತಿನಲ್ಲಿ ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹೆಚ್ಚಿನ ನಗರಸಭೆಗಳಲ್ಲಿ ಮತ್ತು ಗ್ರಾಮೀಣ ಪಟ್ಟಣಗಳಲ್ಲಿ ಬಿಜೆಪಿ ಸೋಲುಣ್ಣುವಂತೆ ಮಾಡಿದ್ದಕ್ಕಾಗಿ ಅಲ್ಲಿನ ರೈತರು, ಗ್ರಾಮೀಣ ಕೆಲಸಗಾರರು, ಆದಿವಾಸಿಗಳು, ದಲಿತರು ಮತ್ತು ಅಲ್ಪಸಂಖ್ಯಾತರನ್ನು ಭೂಮಿ ಅಧಿಕಾರ್ ಆಂದೋಲನ್ ಅಭಿನಂದಿಸಿದೆ.

16 ಮಹಾನಗರಸಭೆಗಳಲ್ಲಿ 14ರಲ್ಲಿ ಮೇಯರ್ ಹುದ್ದೆಗಳನ್ನು ಪಡೆದದ್ದು ಬಿಟ್ಟರೆ, ಈ ಚುನಾವಣೆಗಳಲ್ಲಿ ಬಿಜೆಪಿ ಭಾರೀ ಮುಖಭಂಗ ಅನುಭವಿಸಿರುವುದು ಈಗ ಸ್ಪಷ್ಟವಾಗಿದೆ. ಕಾರ್ಪೊರೇಟ್ ಮಾಧ್ಯಮಗಳು ಪಕ್ಷಪಾತದಿಂದ ಇದನ್ನು ಮರೆಮಾಚಲು ಮತ್ತು ಇದಕ್ಕೆ ಮೊದಲು ಕಾರ್ಮಿಕರು ಮತ್ತು ರೈತರ ಹೋರಾಟಗಳನ್ನು ಮುಚ್ಚಿ ಹಾಕಲು ಪ್ರಯತ್ನಿಸಿದರೂ ಬಿಜೆಪಿ ಬುಡಮಟ್ಟದಲ್ಲಿ ತನ್ನ ಧೋರಣೆಗಳ ವಿರುದ್ಧ ಆಕ್ರೋಶ ತೀವ್ರಗೊಳ್ಳುತ್ತಿದೆ ಎಂಬ ವಾಸ್ತವತೆಯಿಂದ ತಪ್ಪಿಸಿಕೊಳ್ಳಲಾಗುತ್ತಿಲ್ಲ ಎಂದು ಭೂಮಿ ಅಧಿಕಾರ್ ಆಂದೋಲನ್ ಮುಖಂಮಡರಾದ ಹನ್ನನ್ ಮೊಲ್ಲ, ಅತುಲ್ ಅಂಜನ್, ಮೇಧಾ ಪಾಟ್ಕರ್. ಡಾ. ಸುನೀಲಂ, ಸುನೀತ್ ಚೋಪ್ರಾ ಮತ್ತಿತರ ಮುಖಂಡರು ಒಂದು ಜಂಟಿ ಹೇಳಿಕೆಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ಶರದ್ ಯಾದವ್ ಅನರ್ಹತೆಯ ನಿರ್ಧಾರವನ್ನು ಮರುಪರಿಶೀಲಿಸಿ- ರಾಜ್ಯಸಭಾಧ್ಯಕ್ಷರಿಗೆ ಯೆಚುರಿ ಆಗ್ರಹ

ರಾಜ್ಯಸಭಾ ಸದಸ್ಯರಾದ ಶರದ್ ಯಾದವ್ ಮತ್ತು ಅನ್ವರ್ ಅಲಿಯವರನ್ನು ರಾಜ್ಯಸಭಾಧ್ಯಕ್ಷರು ಪಕ್ಷಾಂತರದ ಆಧಾರದಲ್ಲಿ ಅನರ್ಹಗೊಳಿಸಿದ್ದಾರೆ. ಜೆಡಿ(ಯು) ಸಪ್ಟಂಬರ್ 2ಕ್ಕೆ ಈ ಕುರಿತು ಅರ್ಜಿ ಸಲ್ಲಿಸಿತ್ತು. ಡಿಸೆಂಬರ್ 4ರಂದು ರಾಜ್ಯಸಭಾಧ್ಯಕ್ಷರು(ಉಪರಾಷ್ಟ್ರಪತಿಗಳು) ತೀರ್ಪು ನೀಡಿಬಿಟ್ಟಿದ್ದಾರೆ. ಲೋಕಸಭೆಯಲ್ಲಿ ಇಂತಹ ಅರ್ಜಿಗಳು ಬಹಳ ಸಮಯದಿಂದ ಕಾದಿರುವಾಗ ಶರದ್ ಯಾದವ್‌ರನ್ನು ಅನರ್ಹಗೊಳಿಸುವ ತರಾತುರಿ ಆಶ್ಚರ್ಯ ಉಂಟುಮಾಡಿದೆ, ಇದು ನಿಜಕ್ಕೂ ದುರದೃಷ್ಟಕರ ಎಂದು ಇತ್ತೀಚಿನ ವರೆಗೂ ರಾಜ್ಯಸಭಾ ಸದಸ್ಯರಾಗಿದ್ದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಹೇಳಿದ್ದಾರೆ.

ನಿಜ, ರಾಜ್ಯಸಭಾಧ್ಯಕ್ಷರಿಗೆ ಈ ಅಧಿಕಾರ ಇದೆ. ಅವರ ಈ ಅಧಿಕಾರವನ್ನು ಪ್ರಶ್ನಿಸದೆ ರಾಜ್ಯಸಭೆಯ ಕಲಾಪಗಳನ್ನು ನಡೆಸುವ ಬಗ್ಗೆ ನಿಯಮಗಳನ್ನು ರೂಪಿಸಲಾಗಿದೆ. ಪಕ್ಷಾಂತರದ ನೆಲೆಯಲ್ಲಿ ಅನರ್ಹತೆ ಕುರಿತಾದ ನಿಯಮ 7ನೇ ಪರಿಚ್ಛೇದದಲ್ಲಿದೆ. ಸಭಾಧ್ಯಕ್ಷರು ಅರ್ಜಿ ಪಡೆದ ಮೇಲೆ ತಾವೇ ಅದನ್ನು ನಿರ್ಧರಿಸಬಹುದು, ಅಥವ ಸಂದರ್ಭಕ್ಕೆ ಅನುಗುಣವಾಗಿ ಅಗತ್ಯವೆನಿಸಿದಲ್ಲಿ ಪ್ರಾಥಮಿಕ ತನಿಖೆಗೆ ವಿಶೇಷಾಧಿಕಾರ ಸಮಿತಿಗೆ ಕಳಿಸಬಹುದು.

ಒಂದು ದಶಕಕ್ಕೂ ಹೆಚ್ಚು ಕಾಲ ಈ ಸಮಿತಿಯಲ್ಲಿ ಕೆಲಸ ಮಾಡಿದ ಅನುಭವವಿರುವ ಯೆಚುರಿಯವರ ಪ್ರಕಾರ ಶರದ್ ಯಾದವ್ ವಿರುದ್ಧ ಬಂದ ಅರ್ಜಿಯ ಸಂದರ್ಭ ಮತ್ತು ಸ್ವರೂಪದ ಹಿನ್ನೆಲೆಯಲ್ಲಿ ಅದನ್ನು ಈ ಸಮಿತಿಗೆ ಕಳಿಸುವ ಅಗತ್ಯವಿತ್ತು. ಅದರ ವರದಿಯ ಆಧಾರದಲ್ಲಿ ರಾಜ್ಯಸಭಾಧ್ಯಕ್ಷರು ನಿರ್ಣಯ ಕೈಗೊಳ್ಳಬೇಕಾಗಿತ್ತು.

ಶರದ್ ಯಾದವ್ ದೇಶದ ಒಬ್ಬ ಅತ್ಯಂತ ಹಿರಿಯ ರಾಜಕಾರಣಿ. ಸಂಸತ್ತಿನ ಎರಡೂ ಸದನಗಳಲ್ಲಿ ಅವರು ಹನ್ನೊಂದು ಬಾರಿ ಸದಸ್ಯನಾಗಿ ಪ್ರತಿಜ್ಞೆ ಸ್ವೀಕರಿಸಿರುವವರು. ಅವರ ಹಿರಿತನವನ್ನು ಪರಿಗಣಿಸಿ ಈ ವಿಷಯದಲ್ಲಿ ಅವರು ಏನು ಹೇಳಬಯಸುತ್ತಾರೆ ಎಂಬುದನ್ನು ಅಧ್ಯಯನ ಮಾಡಬೆಕು, ಅದರ ಪ್ರಕಾರ ಈ ನಿರ್ಧಾರವನ್ನು ಮರುಪರಿಶೀಲಸಬೇಕು ಎಂದು ಸೀತಾರಾಮ್ ಯೆಚುರಿಯವರು ರಾಜ್ಯಸಭಾಧ್ಯಕ್ಷರೂ ಆಗಿರುವ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡುರವರನ್ನು ಆಗ್ರಹಿಸಿದ್ದಾರೆ.

ಕಾರ್ಮಿಕ ಸಂಘಗಳೊಂದಿಗೆ ಹಣಕಾಸು ಮಂತ್ರಿಗಳ ಬಜೆಟ್-ಪೂರ್ವ ಸಮಾಲೋಚನೆ

'ಉದ್ದಿಮೆ-ಸ್ನೇಹಿ' ಗೀಳು ಬಿಟ್ಟು ಹಸಿವು ಸೂಚ್ಯಂಕ ಮುಂತಾದವನ್ನು ಉತ್ತಮ ಪಡಿಸಲು ಗಮನ ಕೇಂದ್ರೀಕರಿಸಿ-ಸಿಐಟಿಯು

ಕೇಂದ್ರ ಹಣಕಾಸು ಮಂತ್ರಿಗಳು ವಾಡಿಕೆಯಂತೆ ಕಾರ್ಮಿಕ ಸಂಘಟನೆಗಳನ್ನು ಡಿಸೆಂಬರ್ 5 ರಂದು ಬಜೆಟ್-ಪೂರ್ವ ಸಮಾಲೋಚನೆಗಳಿಗೆ ಭೇಟಿಯಾದರು. ಕಾರ್ಮಿಕ ಸಂಘಟನೆಗಳು ತಮ್ಮ ಸಲಹೆ-ಸೂಚನೆಗಳನ್ನು ಜಂಟಿಯಾಗಿ ಮಂಡಿಸುತ್ತ, ಇದು ಕೇವಲ ವಾಡಿಕೆಯಾಗಿರದೆ, ಈ ಸಭೆ ಅರ್ಥಪೂರ್ಣವಾಗಬೇಕು, ಹಾಗಾಬೇಕಾದರೆ ಈ ಜಂಟಿ ಪ್ರಸ್ತಾವದಲ್ಲಿ ಮಂಡಿಸಿದ ವಿಚಾರಗಳನ್ನು ತಮ್ಮ ಬಜೆಟ್ ಪ್ರಸ್ತಾವಗಳಲ್ಲಿ ಒಳಗೊಳ್ಳಬೇಕು ಎಂದು ಆರಂಭದಲ್ಲೇ ಮಂತ್ರಿಗಳನ್ನು ಆಗ್ರಹಿಸಿದವು.

ಸಿಐಟಿಯು ಪರವಾಗಿ ಭಾಗವಹಿಸಿದ ಅಧ್ಯಕ್ಷರಾದ ಹೇಮಲತಾ, ಕೇಂದ್ರೀಯ ಕಾರ್ಮಿಕ ಸಂಘಗಳು ಎರಡೂವರೆ ವರ್ಷಗಳ ಹಿಂದೆಯೇ ತಮ್ಮ 12 ಅಂಶಗಳ ಬೇಡಿಕೆಗಳನ್ನು ಜಂಟಿಯಾಗಿ ಮಂಡಿಸಿದ್ದವು ಮತ್ತು ಹಣಕಾಸು ಮಂತ್ರಿಗಳ ನೇತೃತ್ವದ ಮಂತ್ರಿಗಳ ಗುಂಪು(ಜಿಒಎಂ) ಈ ಬಗ್ಗೆ ಆಗಸ್ಟ್ 2015ರಲ್ಲಿ ಸಭೆ ಕರೆಯಿತು ಎಂದು ನೆನಪಿಸುತ್ತ, ಅಲ್ಲಿ ಆರಂಭಿಸಿದ ಮಾತುಕತೆಗಳು ಇನ್ನೂ ಅಪೂರ್ಣವಾಗಿಯೇ ಉಳಿದಿವೆ ಎಂಬುದನ್ನು ಹಣಕಾಸು ಮಂತ್ರಿಗಳ ಗಮನಕ್ಕೆ ತಂದರು. ಕಾರ್ಪೊರೇಟ್‌ಗಳಿಗೆ ಪ್ರಯೋಜನ ಕೊಡಿಸುವ 'ಉದ್ದಿಮೆ-ಸ್ನೇಹಿ' ಕ್ರಮಗಳ ಮೇಲೆ ಗಮನ ಕೇಂದ್ರೀಕರಿಸುವ ಬದಲು ದೇಶದ ಜಾಗತಿಕ ಹಸಿವು ಸೂಚ್ಯಂಕವನ್ನು ಉತ್ತಮಪಡಿಸಲು, ಲಿಂಗ -ಅಂತರವನ್ನು ಕಡಿಮೆ ಮಾಡಲು ಗಮನ ಹರಿಸಬೇಕು ಅದಕ್ಕಾಗಿ ಐಸಿಡಿಎಸ್, ರಾಷ್ಟ್ರೀಯ ಆರೋಗ್ಯ ಮಿಶನ್, ಮಧ್ಯಾಹ್ನದ ಊಟ ಮುಂತಾದ ಬಡ ಮಕ್ಕಳು ಮತ್ತು ಮಹಿಳೆಯರಿಗೆ ಪ್ರಯೋಜನ ಕೊಡುವ ಬಾಬ್ತುಗಳಿಗೆ ಹೆಚ್ಚಿನ ಹಣ ಒದಗಿಸಬೇಕು. ಇದಕ್ಕೆ ಹಣ ತೆರುವ ಸಾಮರ್ಥ್ಯ ಇರುವ ಶ್ರೀಮಂತರಿಂದ ತೆರಿಗೆ ವಸೂಲು ಮಾಡಬೇಕು, ಉದ್ದೇಶಪೂರ್ವಕ ಸಾಲ ಬಾಕಿ ಮತ್ತು ತೆರಿಗೆ ಬಾಕಿಗಳನ್ನು ಮಾಡಿಕೊಂಡಿರುವ ದೊಡ್ಡ ವ್ಯಾಪಾರೋದ್ಯಮಿಗಳು ಮತ್ತು ಕಾರ್ಪೊರೇಟ್‌ಗಳ ವಿರುದ್ಧ ಪರಿಣಾಮಕಾರಿ ಕ್ರಮಗಳಿರಬೇಕು. ಇಂತಹ ಸುಸ್ತಿದಾರರ ಹೆಸರುಗಳನ್ನು ಪ್ರಕಟಿಸಬೇಕು.ಎಂದು ಆಗ್ರಹಿಸಿದರು.

7ನೇ ವೇತನ ಆಯೋಗ ಲೆಕ್ಕ ಹಾಕಿರುವ ಕನಿಷ್ಟ ಸಂಬಳ 18,000ರೂ. ಗಿಂತ ಕಡಿಮೆಯಿಲ್ಲದಂತೆ ಕನಿಷ್ಟ ಸಂಬಳವನ್ನು ನಿಗದಿ ಮಾಡಬೇಕು. ಅಗತ್ಯ ಆಧಾರಿತ ಕನಿಷ್ಟ ಕೂಲಿಯನ್ನು ಸಾಮಾಜಿಕ ಭದ್ರತೆಯ ಅನಿವಾರ್ಯ ಭಾಗವಾಗಿ ಮಾಡಬೇಕು. ಸುರುಳಿ-ಸುರುಳಿಯಾಗಿ ಮೇಲಕ್ಕೇರುತ್ತಿರುವ ಆವಶ್ಯಕ ಸರಕುಗಳ, ಅದರಲ್ಲೂ ಆಹಾರವಸ್ತುಗಳ ಬೆಲೆಗಳನ್ನು ತಡೆಯಲು ಆಹಾರವಸ್ತುಗಳಲ್ಲಿ ಜೂಜುಕೋರ ವಾಯಿದೆ ವ್ಯಾಪಾರವನ್ನು ನಿಷೇಧಿಸಬೇಕು ಮತ್ತು ಕಾಳಸಂತೆಯ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು., ಸಾರ್ವಜನಿಕ ವಲಯದ ಘಟಕಗಳ ಮಾರಾಟವನ್ನು, ಅದರಲ್ಲೂ ಆಯಕಟ್ಟಿನ ಮಾರಾಟವನ್ನು ನಿಲ್ಲಿಸಬೇಕು. ಇಲ್ಲಿ ಎಫ್‌ಡಿಐಗೆ ಅವಕಾಶವಿರಬಾರದು, ರಕ್ಷಣಾ ಉದ್ದಿಮೆಯಲ್ಲಿ ಸಾರ್ವಜನಿಕ ವಲಯ ಉತ್ಪಾದಿಸುತ್ತಿರುವ 273 ಐಟಂಗಳಲ್ಲಿ 143ನ್ನು ಹೊರಗುತ್ತಿಗೆ ನೀಡುವ ಆದೇಶವನ್ನು ರದ್ದು ಮಾಡಬೇಕು, ಸಮರ್ಥಗೊಳಿಸಬಹುದಾದ ಘಟಕಗಳ ಪುನರುಜ್ಜೀವನಕ್ಕೆ ಹಣ ಒದಗಿಸಬೇಕು, ಉದ್ಯೋಗ ಸೃಷ್ಟಿಗೆ ಮೂಲರಚನೆ, ಕೃಷಿ ಮತ್ತು ಸಾಮಾಜಿಕ ವಲಯದಲ್ಲಿ ಬೃಹತ್‌ಪ್ರಮಾಣದಲ್ಲಿ ಹೂಡಿಕೆಗೆ ಬಜೆಟಿನಲ್ಲಿ ಆದ್ಯತೆ ಕಲ್ಪಿಸಬೇಕು. ಮನರೇಗದ ಮೇಲಿನ ಖರ್ಚಿನ ಪ್ರಮಾಣವನ್ನು ಹೆಚ್ಚಿಸಿ ಎಲ್ಲ ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸಬೇಕು. ಬಾಕಿ ಕೂಲಿಗಳನ್ನು ತಕ್ಷಣ ಕೊಡಲು ವ್ಯವಸ್ಥೆ ಮಾಡಬೆಕು. 43ನೇ ಐಎಲ್‌ಸಿಯ ಶಿಫಾರಸಿನಂತೆ ಇದನ್ನು ನಗರ ಪ್ರದೇಶಗಳಿಗೂ ವಿಸ್ತರಿಸಬೇಕು, ಸ್ಕೀಮ್ ಕಾರ್ಮಿಕರ ಕೆಲಸವನ್ನು ನಿಯಮಿತಗೊಳಿಸಬೇಕು, ಎಲ್ಲರಿಗೂ ಪೆನ್ಶನ್ ಕಲ್ಪಿಸಬೇಕು ಮುಂತಾದ ಸಲಹೆ-ಸೂಚನೆಗಳನ್ನು ಕಾರ್ಮಿಕ ಸಂಘಟನೆಗಳು ಮುಂದಿಟ್ಟಿವೆ.

ಜೆರುಸಲೇಂ ಬಗ್ಗೆ ಟ್ರಂಪ್ ನಿರ್ಧಾರ: ಸಿಪಿಐ(ಎಂ) ಬಲವಾದ ಖಂಡನೆ

ಜೆರುಸಲೇಂ ನಗರಕ್ಕೆ ಇಸ್ರೇಲಿನ ರಾಜಧಾನಿಯೆಂಬ ಮಾನ್ಯತೆ ನೀಡಲು ಮತ್ತು ಅಮೆರಿಕನ್ ರಾಯಭಾರಿ ಕಚೇರಿಯನ್ನು ಟೆಲ್‌ಅವಿವ್‌ನಿಂದ ಅಲ್ಲಿಗೆ ವರ್ಗಾಯಿಸಲು ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಿರ್ಧರಿಸಿರುವುದನ್ನು ಸಿಪಿಐ(ಎಂ) ಬಲವಾಗಿ ಖಂಡಿಸಿದೆ.

ಇದು ಪೂರ್ವ ಜೆರುಸಲೇಂ 1967ರಿಂದ ಇಸ್ರೇಲ್ ಆಕ್ರಮಿತ ಪ್ರದೇಶ ಎಂಬ ವಿಶ್ವಸಂಸ್ಥೆಯ ಮತ್ತು ಅಂತರ್ರಾಷ್ಟ್ರೀಯ ಸಮುದಾಯದ ನಿಲುವಿಗೆ ವಿರುದ್ಧವಾದ ಕ್ರಮ. ಪೂರ್ವ ಜೆರುಸಲೇಂ ರಾಜಧಾನಿಯಾಗುಳ್ಳ ಒಂದು ಸ್ವತಂತ್ರ ಪೆಲೆಸ್ತೀನ್ ಪ್ರಭುತ್ವ ಎಂಬುದು ಅಂತರ್ರಾಷ್ಟ್ರೀಯವಾಗಿ ಒಪ್ಪಿಕೊಂಡಿರುವ ನಿಲುವು. ಈ ಕ್ರಮದಿಂದ ಪೆಲೆಸ್ತೀನ್ ಪ್ರದೇಶಗಳ ಕಾನೂನುಬಾಹಿರ ಇಸ್ರೇಲಿ ಆಕ್ರಮಣವನ್ನು ಕಾನೂನಬದ್ಧಗೊಳಿಸುವ ಒಂದು ಔಪಚಾರಿಕ ಹೆಜ್ಜೆಯನ್ನು ಅಮೆರಿಕಾ ಇಟ್ಟಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಜಗತ್ತಿನ ಬೇರೆ ಯಾವ ದೇಶವೂ ಜೆರುಸಲೇಂಗೆ ಇಸ್ರೇಲಿನ ರಾಜಧಾನಿಯಾಗಿ ಮಾನ್ಯತೆ ನೀಡಿಲ್ಲ ಎಂಬ ಸಂಗತಿಯತ್ತ ಗಮನ ಸೆಳೆದಿದೆ.

ಇಸ್ರೇಲ್ ಮತ್ತು ಪೆಲಸ್ತೀನ್ ನಡುವೆ ಯಾವುದೇ ಶಾಂತಿ ಮಾತುಕತೆಗಳು ನಡೆಯದಂತೆ ತಪ್ಪಿಸುವುದಕ್ಕೂಅಮೆರಿಕಾವೇ ಹೊಣೆಯಾಗಿದೆ. ಡೊನಾಲ್ಡ್ ಟ್ರಂಪ್ ಅವರ ಈ ನಿರ್ಧಾರ ಈ ಪ್ರದೇಶವನ್ನು ಇನ್ನಷ್ಟು ಉದ್ವಿಗ್ನಗೊಳಿಸುತ್ತದೆ, ಅದು ಜಾಗತಿಕವಾಗಿಯೂ ಪರಿಣಾಮ ಬೀರುತ್ತದೆ ಎಂದು ಸಿಪಿಐ(ಎಂ) ಹೇಳಿದೆ.

ಈ ಕ್ರಮಕ್ಕೆ ಜಗತ್ತಿನಾದ್ಯಂತ ವಿರೋಧ ವ್ಯಕ್ತವಾಗಿದ್ದರೂ, ನಮ್ಮ ವಿದೇಶಾಂಗ ವ್ಯವಹಾರಗಳ ಮಂತ್ರಾಲಯದ ಅಧಿಕೃತ ವಕ್ತಾರರು ಅಮರಿಕಾದ ನಿರ್ಣಯವನ್ನು ಖಂಡಿಸಲು ಅಳುಕಿನಿಂದ ನಿರಾಕರಿಸಿದ್ದಾರೆ. ಇದು ಮೋದಿ ಸರಕಾರ ಅಮರಿಕಾ ಸಂಯುಕ್ತ ಸಂಸ್ಥಾನಗಳಿಗೆ ಎಷ್ಟರ ಮಟ್ಟಿಗೆ ದಾಸನಾಗಿದೆ ಎಂಬುದನ್ನು ತೋರಿಸುತ್ತದೆ ಎಂದೂ ಸಿಪಿಐ(ಎಂ) ಖಂಡಿಸಿದೆ.

ಇದು ಪೆಲಸ್ತೀನ್ ವಿಮೋಚನೆಗೆ ಭಾರತದ ದೀರ್ಘಕಾಲದ ಬದ್ಧತೆಗೆ ವಿರುದ್ಧವಾದ್ದರಿಂದ ಮೋದಿ ಸರಕಾರ ಅಮೆರಿಕಾದ ಈ ಕ್ರಮಕ್ಕೆ ಬಲವಾದ ಅಸಮ್ಮತಿಯನ್ನು ವ್ಯಕ್ತಪಡಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಡಿಸೆಂಬರ್ 6: ದೇಶಾದ್ಯಂತ ಕೋಮುವಾದದ ವಿರುದ್ಧ ಕರಾಳ ದಿನಾಚರಣೆ

ಆರು ಎಡಪಕ್ಷಗಳ ಕರೆಯ ಮೇರೆಗೆ ಬಾಬ್ರಿ ಮಸೀದಿ ಧ್ವಂಸದ 25 ನೇ ವಾರ್ಷಿಕವನ್ನು ದೇಶಾದ್ಯಂತ ಕೋಮುವಾದ-ಫ್ಯಾಸಿಸಂ ವಿರುದ್ಧ ಕರಾಳ ದಿನವಾಗಿ ಮೆರವಣಿಗೆಗಳು, ಸಭೆಗಳ ಮೂಲಕ ಆಚರಿಸಲಾಗಿದೆ. ದಿಲ್ಲಿಯಲ್ಲಿ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಸೇರಿದಂತೆ ಎಲ್ಲ ಎಡಪಕ್ಷಗಳ ರಾಷ್ಟ್ರೀಯ ಮುಖಂಡರು ನೇತೃತ್ವ ನೀಡಿದ ಪ್ರತಿಭಟನಾ ಮೆರವಣಿಗೆಯಲ್ಲಿ ನೂರಾರು ಮಂದಿ ಭಾಗವಹಿಸಿದರು.



ಬಿಜೆಪಿಯ ಶಾ ಪ್ರಣೀತ ಹೊಸ “ಟಿಯರ್ ಗ್ಯಾಸ್, ಲಾಠೀ ಚಾರ್ಜ್” ರಾಜಕಾರಣ

ಸಂಪಾದಕೀಯ

ಇತ್ತೀಚಿನ ದಿನಗಳ ಹುಣಸೂರು ಮತ್ತು ಚಂದಾವರಗಳಲ್ಲಿ ಹನುಮ ಜಯಂತಿ– ಈದ್ ಮಿಲಾದ್ ಸಂದರ್ಭದಲ್ಲಿ ಕೋಮು ಗಲಭೆ ನಡೆಸುವ ಪ್ರಯತ್ನ, ಬಾಬಾ ಬುಡನ್ ಗಿರಿಯಲ್ಲಿ ಗೋರಿಗೆ ಹಾನಿ, ಅನಂತ ಕುಮಾರ್ ಹೆಗಡೆ, ಪ್ರತಾಪ ಸಿಂಹರ “ಬಡಿ..ಕಡಿ..ಬೈಯ್ಯು” ಭಾಷಣಗಳೊಂದಿಗೆ, ಬಿಜೆಪಿ ರಾಜಕಾರಣ ಹೊಸದೊಂದು ಮಜಲು ಮುಟ್ಟಿದ ಹಾಗೆ ಕಾಣುತ್ತಿದೆ, ಪರಿವರ್ತನಾ ಯಾತ್ರೆಯಲ್ಲಿ ಕಾಂಗ್ರೆಸ್ ಸರಕಾರದ ವಿಮರ್ಶೆ ಮತ್ತು ಅದರ ನೀತಿಗಳ ವಿರುದ್ಧ ಹಾಗೂ ತಮ್ಮ ನೀತಿ–ಧೋರಣೆಗಳ ಪ್ರಚಾರ–ಪ್ರಕ್ಷೋಭೆಯ ರಾಜಕಾರಣವನ್ನು ಬಿಜೆಪಿ ಪೂರ್ತಿ ಬಿಟ್ಟುಕೊಟ್ಟ ಹಾಗೆ ಕಾಣುತ್ತದೆ. ಇದಕ್ಕೆ ಒಂದು ಕಾರಣ ಯೆಡಿಯೂರಪ್ಪ ಅವರ ನಾಯಕತ್ವದ ಪರಿವರ್ತನಾ ಯಾತ್ರೆಯ “ಶೂನ್ಯ ಸಂಪಾದನೆ”. ಬಿಜೆಪಿಯ ಬಾಲಬಡುಕ ಮಾಧ್ಯಮಗಳು ಅದನ್ನು ನಿರ್ಲಕ್ಷಿಸುವಷ್ಟು ಅದು ಕಳಪೆಯಾಗಿದೆ. ಅದು ಸುದ್ದಿ ಮಾಡುವುದು ಈ ಯಾತ್ರೆಯಲ್ಲಿ, ಸಮಾವೇಶಗಳ ವೇದಿಕೆಯಲ್ಲಿ ಬಿಜೆಪಿಯ ಒಳಜಗಳಗಳು ಅತೃಪ್ತಿಗಳು ಸ್ಫೋಟಗೊಂಡಾಗ ಮಾತ್ರ ಎಂಬ ಸ್ಥಿತಿ ಇದೆ. ಪರಿವರ್ತನಾ ಯಾತ್ರೆ ವಿಫಲವಾಗಲು ಬರಿಯ ಈ ನಾಯಕರು ಕಾರಣವಲ್ಲ. ವೇದಿಕೆಗಳಲ್ಲಿ ಹೇಳಲು ಬಿಜೆಪಿಗೆ ಏನು ಉಳಿದಿಲ್ಲ. ಕೇಂದ್ರ ಸರಕಾರದ ಮೂರುವರೆ ವರ್ಷಗಳ ಕೆಟ್ಟ ರೆಕಾರ್ಡ್ ಅದಕ್ಕೆ ಮುಳುವಾಗಿದೆ. ಇತ್ತೀಚಿನ ನೋಟು ರದ್ದತಿ, ಜಿ.ಎಸ್.ಟಿ. ವೈಫಲ್ಯಗಳು, ಲೋಕಸಭಾ ಚುನಾವಣೆಯ ಯಾವುದೇ ಭರವಸೆಗಳನ್ನು ಈಡೇರಿಸದೆ ಇರುವುದು – ಹುಟ್ಟಿಸಿರುವ ತೀವ್ರ ಅತೃಪ್ತಿ ಅದಕ್ಕೆ ಯಾವುದೇ ಆಕ್ರಮಣಕಾರಿ ರಾಜಕೀಯ ಪ್ರಚಾರದ ಅವಕಾಶ ಕೊಡುತ್ತಿಲ್ಲ.

ಈ ಹಳೆಯ ನಾಯಕರುಗಳನ್ನು ಪರಿವರ್ತನಾ ಯಾತ್ರೆಯಲ್ಲಿ ಬ್ಯುಸಿಯಾಗಿಟ್ಟು, ಹೊಸ ನಾಯಕರುಗಳ ಜತೆ ಬಿಜೆಪಿ ಕೇಂದ್ರ ನಾಯಕತ್ವ ಉತ್ತರ ಪ್ರದೇಶ ಮಾದರಿಯ ಹೊಸ ರಾಜಕೀಯ ವರಸೆ ಪ್ರಯತ್ನಿಸುತ್ತಿರುವಂತಿದೆ. “ಬಡಿ..ಕಡಿ..ಬೈಯ್ಯು” ಭಾಷಣಗಳ ಮೂಲಕ ಕೋಮು ಹಿಂಚಾಚಾರ ಪ್ರಚೋದಿಸುವ, ಪೋಲಿಸರು “ಲಾಠಿ ಚಾರ್ಜ್, ಟಿಯರ್ ಗ್ಯಾಸ್” ಪ್ರಯೋಗಿಸುವಂತೆ ಮಾಡುವುದೇ ಆ ತಂತ್ರ ಇದ್ದ ಹಾಗೆ ಕಾಣುತ್ತಿದೆ.

ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ ಮತ್ತು ಉತ್ತರ ಕನ್ನಡದ ಚಂದಾವರದಲ್ಲಿ ಕೋಮುಗಲಭೆ ಸೃಷ್ಟಿಸುವ ಪ್ರಯತ್ನದ ಬಗ್ಗೆ ವಿವರವಾದ ವರದಿಗಳನ್ನು ಈ ಸಂಚಿಕೆಯ ಇತರ ಪುಟಗಳಲ್ಲಿ ನೋಡಬಹುದು. ಹನುಮ ಜಯಂತಿ–ಈದ್ ಮಿಲಾದ್ ಸಂದರ್ಭವನ್ನು ಇದಕ್ಕಾಗಿ ಬಳಸಿಕೊಳ್ಳಲಾಗಿದೆ. ಇದರ ಜತೆಗೆ ಬಾಬಾ ಬುಡನ್ ಗಿರಿಯಲ್ಲಿ ಗಲಭೆಗೆ ಪ್ರಯತ್ನವನ್ನೂ ಮಾಡಲಾಗಿದೆ. ದತ್ತ ಜಯಂತಿ ಪ್ರಯುಕ್ತ ಇನಾಂ ದತ್ತಾತ್ರೇಯ ಪೀಠಕ್ಕೆ ವಿವಿಧೆಡೆಗಳಿಂದ ಬಂದಿದ್ದ ಸಹಸ್ರಾರು ದತ್ತಮಾಲಾಧಾರಿಗಳ ಪೈಕಿ ಒಬ್ಬ ವ್ಯಕ್ತಿ ಆವರಣದ ಬೇಲಿ ಏರಿ ಜಿಗಿದು ನಿರ್ಬಂಧಿತ ಪ್ರದೇಶದಲ್ಲಿ ಭಗವಾಧ್ವಜ ನೆಟ್ಟಿದ್ದಾನೆ. ಇತರ ಕೆಲವು ಭಕ್ತರು ನಿರ್ಬಂಧಿತ ಪ್ರದೇಶದೊಳಗೆ ತೆರಳಿ ಗೋರಿಗೆ ನೆಟ್ಟಿದ್ದ ನಾಮಫಲಕವನ್ನು ಉರುಳಿಸಿದರು. ಕೂಡಲೇ ಪೊಲೀಸರು ಭಗವಾಧ್ವಜ ನೆಟ್ಟ ದತ್ತಭಕ್ತನನ್ನು ನಿಷೇಧಿತ ಪ್ರದೇಶದಿಂದ ಎಳೆದೊಯ್ದುರು. ಈ ಸಂದರ್ಭದ ತಳ್ಳಾಟ ನಡೆದು ಬೇಲಿ ಪಕ್ಕದಲ್ಲಿ ಅಳವಡಿಸಿದ್ದ ಮರದ ಕಟ್ಟಿಗೆಗಳ ಬ್ಯಾರಿಕೇಡ್ ನೂಕಾಟದಲ್ಲಿ ಬಿದ್ದಿತು. ನಗರದಲ್ಲಿ ಸಂಜೆ ಕೆಲವು ಕಿಡಿಗೇಡಿಗಳು ಖಾಸಗಿ ಬಸ್ ಮೇಲೆ ಕಲ್ಲು ತೂರಿ ಗಾಜು ಪುಡಿಗೊಳಿಸಿದ್ದಾರೆ. ಈ ಘಟನೆಗಳಿಗೆ ಸಂಬಂಧಿಸಿದಂತೆ ಪೋಲಿಸರು 32 ಜನರನ್ನು ಬಂಧಿಸಿದ್ದಾರೆ ಮತ್ತು 3 ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಸಂಘ ಪರಿವಾರ ಇನ್ನೂ ತೀವ್ರ ವ್ಯಾಪಕ ಗಲಭೆಗಳಿಗೆ ಯೋಜಿಸಿತ್ತು. ಆದರೆ ಪೋಲೀಸರ ಸಕಾಲಿಕ ಮಧ್ಯಪ್ರವೇಶದಿಂದ ಅದು ಸಫಲವಾಗಿಲ್ಲ ಎಂದು ಹೇಳಲಾಗಿದೆ. ಹುಣಸೂರು ಪ್ರಕರಣದಲ್ಲಿ ಸಂಸದ ಪ್ರತಾಪ ಸಿಂಹರನ್ನು ಬಂಧಿಸಿದ್ದನ್ನು ಖಂಡಿಸಿ ರಾಜ್ಯದಾದ್ಯಂತ ಪ್ರತಿಭಟನೆಯಲ್ಲೂ ಹಿಂಸಾಚಾರ ಹರಿಯಬಿಡಲು ಪ್ರಯತ್ನಿಸಲಾಯಿತು.

ಹುಣಸೂರಿನಲ್ಲಿ ನಿರ್ಬಂಧಿತ ದಾರಿಯಲ್ಲಿ ಹನುಮಜಯಂತಿ ಮೆರವಣಿಗೆ ಮಾಡಲು ಪ್ರಯತ್ನಿಸಿದ್ದಕ್ಕಾಗಿ ಪೊಲೀಸರೊಂದಿಗೆ ಕಾನೂನುಬಾಹಿರವಾಗಿ ನಡೆದುಕೊಂಡ ಪ್ರತಾಪ್ ಸಿಂಹ ಸುಮಾರು ಹತ್ತುಗಂಟೆಗೂ ಹೆಚ್ಚು ಕಾಲ ಠಾಣೆಯಲ್ಲಿ ಕಳೆಯಬೇಕಾಗಿ ಬಂತು. ನಿಷೇಧಾಜ್ಞೆಯನ್ನು ಉಲ್ಲಂಘಿಸಿದ ಆರೋಪದ ಮೇರೆಗೆ 300ಕ್ಕೂ ಹೆಚ್ಚು ಮಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಅವರು ಕಾರನ್ನು ಡ್ರೈವ್ ಮಾಡಿಕೊಂಡು ಹೋದ ವಿಡಿಯೋ ಫೂಟೇಜ್ ಎಲ್ಲೆಡೆ ಹರಿದಾಡುತ್ತಿದ್ದರೂ, ಪೊಲೀಸರಿಗೆ ದರ್ಪದಿಂದ ಅವಾಜ್ ಹಾಕಿದ ಪುರಾವೆಯಿದ್ದರೂ ಸಿಂಹ ಮತ್ತವರ ಸಮರ್ಥಕರು ಎಸ್.ಪಿ ಚನ್ನಣ್ಣನವರ್ ಹಾಗೂ ಮುಖ್ಯಮಂತ್ರಿಗಳ ಮೇಲೆ ವಾಗ್ದಾಳಿ ಮಾಡಿದ್ದಾರೆ. ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಹಾಗೂ ನಿರ್ಲಕ್ಷ್ಯತನದ ವಾಹನ ಚಾಲನೆ ಆರೋಪದ ಮೇರೆಗೆ ಸಂಸದ ಪ್ರತಾಪಸಿಂಹ ಅವರ ವಿರುದ್ಧ ಹುಣಸೂರು ತಾಲ್ಲೂಕಿನ ಬಿಳಿಕೆರೆ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಇದರಿಂದ ಕೆರಳಿದ ಪ್ರತಾಪ್ ಸಿಂಹ ಎಸ್.ಪಿ ಚನ್ನಣ್ಣನವರ್ ಅವರ ಮೇಲೆ ಟ್ವಿಟರ್ ನಲ್ಲಿ ಟೀಕಾ ಪ್ರಹಾರ ಮಾಡಿದ್ದಾರೆ.

ಈ ನಡುವೆ “ಅಧಿಕಾರಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೂಟು ನೆಕ್ಕಲು ಸಿದ್ಧವಾಗಿದ್ದಾರೆ”” ಎಂದು ಟಿಪ್ಪು ಜಯಂತಿ ಸಂದರ್ಭದಲ್ಲಿ ತಮ್ಮ “ಬಡಿ..ಕಡಿ..ಬೈಯ್ಯು” ಭಾಷಣಗಳ ಇನ್ನಿಂಗ್ಸ್ ಆರಂಭಿಸಿದ್ದ ಕೇಂದ್ರ ಮಂತ್ರಿ. ಅನಂತ ಕುಮಾರ್ ಹೆಗಡೆ ಮುಖ್ಯಮಂತ್ರಿಗಳ ಮೇಲೆ ಅಸಹ್ಯಕರ ಅಸಭ್ಯಕರ ಹೇಳಿಕೆಗಳನ್ನು ಮುಂದುವರೆಸಿದ್ದಾರೆ. ಪ್ರತಾಪ ಸಿಂಹರ ಬಂಧನದ ವಿರುದ್ಧ ಪ್ರತಿಭಟನೆಗೆ ಆಗಮಿಸಿದ ಬಿಜೆಪಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಾ ಮೈಸೂರಿನಲ್ಲಿ “ಸಿದ್ದರಾಮಯ್ಯ ಎಂಬ ಪಾಪದ ಪಿಂಡವು ಎಲ್ಲಿ ಹುಟ್ಟಿದೆಯೋ ಅದನ್ನು ಅಲ್ಲಿಯೇ ಮುಗಿಸಬೇಕು. ರಾಜ್ಯದಲ್ಲಿ ಸಿದ್ದರಾಮಯ್ಯ ಸರ್ಕಾರ ಯಾರಿಗೂ ಬೇಡವಾಗಿದೆ. ಈ ಪಿಂಡವನ್ನು ಇಲ್ಲಿಂದ ಕಿತ್ತೊಗೆಯದೇ ಇದ್ದರೆ, ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ಕಷ್ಟ” ಎಂದಿದ್ದಾರೆ. “ಬಿಜೆಪಿಯಲ್ಲಿ ಗಾಂಧಿ ತತ್ವದ ಮೂರು ಮಂಗಗಳಂತೆ ಕೆಟ್ಟದ್ದನ್ನು ನೋಡಬಾರದು, ಕೇಳಬಾರದು, ಆಡಬಾರದು ಎಂಬ ಹಲವರಿದ್ದಾರೆ. ಇಂತಹವರು ತಮ್ಮಲ್ಲಿ ಬದಲಾವಣೆ ತಂದುಕೊಳ್ಳಬೇಕು. ಇದನ್ನು ಯಾರು ಒಪ್ಪುವುದಿಲ್ಲವೊ ಅವರು ಪಕ್ಷದಿಂದ ಹೊರ ನಡೆಯಬಹುದು. ಸುಸಂಸ್ಕೃತ ಹೇಡಿಗಳು ಎದ್ದು ಹೋದರೆ ಬೇಸರವಿಲ್ಲ.. .. .. ಹುಣಸೂರಿನಲ್ಲಿ ಸಂಸದ ಪ್ರತಾಪ ಸಿಂಹ ಅವರನ್ನು ಬಂಧಿಸಿದಂತೆ, ಉತ್ತರ ಕನ್ನಡದಲ್ಲಿ ಆಗಿದ್ದರೆ ಇಡೀ ಜಿಲ್ಲೆ ಹೊತ್ತಿ ಉರಿಯುತ್ತಿತ್ತು. ಅಲ್ಲಿ ಬಿಜೆಪಿ ಕಾರ್ಯಕರ್ತರಿಗೆ ಆ ಶಕ್ತಿಯಿದೆ. ಇಂತಹ ತಾಕತ್ತು ಮೈಸೂರಿನ ಬಿಜೆಪಿ ನಾಯಕರಿಗೆ ಇದೆಯೇ?” ಎಂದು ಬಿಜೆಪಿ ನಾಯಕತ್ವವನ್ನು ಕುಟುಕಿದ್ದು ಈ ಹೊಸ ವರಸೆ ಏನು ಎಂದು ಅರ್ಥ ಮಾಡಿಕೊಳ್ಳಲು ಗಮನಿಸಬೇಕಾದ ಹೇಳಿಕೆ.

“ಬಡಿ..ಕಡಿ..ಬೈಯ್ಯು” ಭಾಷಣಗಳಾಗಲಿ, ಕೋಮು ಹಿಂಸಾಚಾರಕ್ಕೆ ಪ್ರಚೋದನೆಯಾಗಲಿ ಸಂಘ ಪರಿವಾರದ ಬತ್ತಳಿಕೆಯಲ್ಲಿ ಹಿಂದಿನಿಂದಲೂ ಇದ್ದದ್ದೇ, ಹೋಸತೇನಲ್ಲ. ಆದರೆ ಹೆಚ್ಚಾಗಿ ಇಂತಹ ಕಾರ್ಯಾಚರಣೆಗಳನ್ನು ಅಂಚಿನಲ್ಲಿರುವ ಭಜರಂಗ ದಳ, ಶ್ರೀರಾಮ ಸೇನೆ, ಹಿಂದೂ ಜಾಗರಣಾ ವೇದಿಕೆ, ವಿಶ್ವ ಹಿಂದೂ ಪರಿಷತ್ ಮುಂತಾದವುಗಳಿಗೆ ಸಬ್–ಕಾಂಟ್ರಾಕ್ಟ್ ಮಾಡಲಾಗುತ್ತಿತ್ತು. ಬಿಜೆಪಿ ನಾಯಕರು ರಾಜಕೀಯ ಪ್ರಚಾರ–ಪ್ರಕ್ಷೋಭೆಯಲ್ಲಿ ತೊಡಗುತ್ತಿದ್ದರು. ಆದರೆ ಈಗ ಅಂತಹ ರಾಜಕೀಯ ನಾಟಕ ಅಗತ್ಯವಿಲ್ಲವೆಂದೋ, ಸಾಧ್ಯವಿಲ್ಲವೆಂದೋ, ಪ್ರಯೋಜನವಿಲ್ಲವೆಂದೋ ಕೈಬಿಡಲಾಗುತ್ತಿದೆ. ಬಿಜೆಪಿ ನಾಯಕರೇ ನೇರವಾಗಿ ಇಂತಹ ಚಟುವಟಿಕೆಗಳಲ್ಲಿ ತೊಡಗಬೇಕೆಂಬುದು ಹೊಸ ಮಾದರಿ ರಾಜಕಾರಣ ಇದ್ದಂತಿದೆ.

ಇದು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆದ ಪ್ರತಾಪ ಸಿಂಹರ ವಿಡಿಯೋದಿಂದ ಸ್ಪಷ್ಟವಾಗುತ್ತದೆ. ‘ಕರ್ನಾಟಕಕ್ಕೆ ಬಂದಿದ್ದ ಅಮಿತ್ ಷಾ ಯುವ ಮೋರ್ಚಾ ಸಭೆ ಕರೆದಿದ್ದರು. ಆ ಸಭೆಯಲ್ಲಿ ಯುವ ಮೋರ್ಚಾದಿಂದ ಏನೇನು ಹೋರಾಟ ಕೈಗೊಂಡಿದ್ದೀರಿ ಎಂದು ಕೇಳಿದರು. ನಾವು ನಡೆಸಿದ ಹೋರಾಟಗಳನ್ನು ವಿವರಿಸಿದ ಬಳಿಕ, ಟಿಯರ್ ಗ್ಯಾಸ್, ಲಾಠಿ ಚಾರ್ಜ್ ಆಗುವಂತಹ ಹೋರಾಟ ನಡೆಸಿಲ್ಲ. ಆ ಥರ ನಡೆಯಬೇಕು ಎಂದರೆ ಉಗ್ರ ಹೋರಾಟ ಮಾಡಬೇಕು ಎಂದು ಸೂಚಿಸಿದ್ದರು. ಮುಂದಿನ ದಿನಗಳಲ್ಲಿ ಅಂತಹ ಹೋರಾಟ ನಡೆಸುತ್ತೇವೆ ಎಂದು ಹೇಳಿದ್ದೆ’ ಎಂದು ಅವರು ವಿಡಿಯೋದಲ್ಲಿ ಹೇಳಿದ್ದಾರೆ. ಈಗ ನಡೆಯುತ್ತಿರುವುದು ಅಂತಹ ಹೋರಾಟಗಳೇ ಅಲ್ಲವೆ?

ಇದರ ಹಿನ್ನೆಲೆಯಲ್ಲಿ ಸಂಸದರಾದ ಅನಂತ ಕುಮಾರ ಹೆಗಡೆ ಮತ್ತು ಪ್ರತಾಪ ಸಿಂಹರ ಹೇಳಿಕೆಗಳು–ಕಾರ್ಯಾಚರಣೆಗಳನ್ನು ನೋಡಬೇಕು. ಶಾ ಹೇಳಿಕೆ ಬಗ್ಗೆ ಹಿರಿಯ ಬಿಜೆಪಿ ನಾಯಕರ ಹೇಳಿಕೆ ನೋಡಿದರೆ ಈ ಹೊಸ ರಾಜಕಾರಣದ ಪ್ರಯೋಗ ಈಗಷ್ಟೇ ಆರಂಭವಾಗಿ ಗೊಂದಲ ಉಂಟುಮಾಡಿದೆ. ಆದರೆ ಇದನ್ನು ಆಚರಣೆಗೆ ತರದ ನಾಯಕರಿಗೆ ಉಳಿಗಾಲವಿಲ್ಲ ಎಂಬ ಸಂದೇಶ ಸಹ ಹರಡುತ್ತಿರುವಂತೆ ಕಾಣುತ್ತಿದೆ. ‘ಉಗ್ರ ಹೋರಾಟ ಪಕ್ಷದ ನೀತಿಯಲ್ಲ. ಈ ವಿಚಾರದಲ್ಲಿ ವಿನಾಕಾರಣ ಅಮಿತ್ ಷಾ ಹೆಸರು ತರಲಾಗಿದೆ’ ಎಂದು ಬಿ.ಎಸ್. ಯಡಿಯೂರಪ್ಪ ಹೇಳಿದರೆ, ‘ಅಮಿತ್ ಷಾ ಪ್ರತಾಪ್ ಸಿಂಹರಿಗೆ ಏನು ಹೇಳಿದ್ದಾರೋ ನನಗೆ ಗೊತ್ತಿಲ್ಲ’ ಎಂದು ಜಗದೀಶ ಶೆಟ್ಟರ್ ಹೇಳಿದ್ದಾರೆ. ‘ಅಮಿತ್ ಷಾ ಸುಪ್ರೀಂ ಬಾಸ್. ಅವರು ಹೇಳಿದ್ದನ್ನು ಪಾಲಿಸಬೇಕು’ ಎಂದು ಡಿ.ವಿ. ಸದಾನಂದಗೌಡ ಹೇಳಿದರೆ, ‘ಪ್ರತಾಪ್ ಸಿಂಹ ವಿಡಿಯೊ ಎಲ್ಲಿ ಹಾಕಿದ್ದಾರೆ?’ ಎಂದು ಎಸ್. ಸುರೇಶ್ ಕುಮಾರ್ ಪ್ರಶ್ನಿಸಿದ್ದಾರೆ. ಆದರೆ ಹುಬ್ಬಳ್ಳಿಯ ಗಣೇಶಪೇಟೆಯು ಪಾಕಿಸ್ತಾನದಂತೆ ಕಾಣುತ್ತಿದೆ’ ಎಂದು ಹೇಳಿರುವ ಮುತುವಲ್ಲಿ ಅಬ್ದುಲ್ ಹಮೀದ್ ಅವರ ತಲೆ ಕಡಿದು ತಂದವರಿಗೆ – 10 ಲಕ್ಷ ನೀಡುವುದಾಗಿ ರಾಜ್ಯ ಬಿಜೆಪಿ ಯುವ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಬಸವರಾಜ ಯಂಕಂಚಿ ಘೋಷಿಸಿದ್ದಾರೆ. ಅವರು ಬಿಗ ಬಾಸ್ ಫಾಲೋ ಆರಂಬಿಸಿರುವಂತೆ ಕಾಣುತ್ತಿದೆ.

ಹುಣಸೂರಿನಲ್ಲಿ ಗಲಭೆ ತಡೆಯುವಲ್ಲಿ ದಿಟ್ಟ ಕ್ರಮ ತೆಗೆದುಕೊಳ್ಳಲಾಗಿದೆ. ಆದರೆ ಚಂದಾವರ ಮತ್ತು ಬಾಬಾ ಬುಡನ್ ಗಿರಿ ಪ್ರಕರಣಗಳಲ್ಲಿ ಸಕಾಲಿಕ ದಿಟ್ಟ ಕಟು ಕ್ರಮಗಳನ್ನು ತೆಗೆದುಕೊಳ್ಳಲಾಗಿಲ್ಲ. ರಾಜ್ಯ ಸರಕಾರ ನಾಯಕರ ಕಾರ್ಯಕರ್ತರ ಕಾನೂನು–ಬಾಹಿರ ಹೇಳೀಕೆಗಳೂ ಮತ್ತು ಕಾರ್ಯಾಚರಣೆಗಳ ವಿರುದ್ಧ ಕಟು ಕ್ರಮಗಳನ್ನು ತೆಗೆದುಕೊಂಡು ಹೊಸ ರಾಜಕೀಯ ವರಸೆ ನಡೆಯದಂತೆ ಮಾಡಬೇಕಾಗಿದೆ. ಬಿಜೆಪಿಯ ಹೊಸ ರಾಜಕೀಯ ವರಸೆಯ ಅಪಾಯಗಳ ಬಗ್ಗೆ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳು ಜನತೆಯಲ್ಲಿ ಅರಿವು ಮೂಡಿಸಿ ಅದು ನಡೆಯದಂತೆ ಮಾಡಲು ಎಚ್ಚರಿಸಬೇಕಾಗಿದೆ.

ಕೇಳಿಸಿದ್ದು

‘ಪೇಪರ್ ಸಿಂಹ’ ನನ್ನು ಗುಹೆ ಸೇರಿಸಿದ ಎಸ್.ಪಿ. ರವಿ ಚೆನ್ನಣ್ಣನವರ್



ಸಂಸದ ಪ್ರತಾಪ್ ಸಿಂಹರಂತೂ ಎಂದಿನಂತೆ ತಮ್ಮ ವಾಚಾಳಿತನ ಪ್ರದರ್ಶಿಸಿದ್ದು, ತಮ್ಮ ತಪ್ಪನ್ನು ಪರದೂಷಣೆಯ ಮೂಲಕ ಮುಚ್ಚಿಹಾಕಲು ಯತ್ನಿಸಿ ನಗೆಪಾಟಲಿಗೆ ಈಡಾಗಿದ್ದಾರೆ. ‘‘ಆಳುವವರ ಅಣತಿ ಮೀರುವ ಹಾಗಿಲ್ಲ ಅಲ್ವಾ ಸಾರ್’’ ಅಂತ ಟ್ವಿಟರ್ನಲ್ಲಿ ಚನ್ನಣ್ಣನವರ್’ಗೆ ಇಂಡೈರೆಕ್ಟ್ ಆಗಿ ಪ್ರಶ್ನೆ ಮಾಡಿರುವ ಸಿಂಹ, ಅವರನ್ನು ಆಳುವ ಸರ್ಕಾರದ ಆಳು ಎಂದು ಕರೆದಿದ್ದಾರೆ. ‘‘ಕನಿಷ್ಠ ಖಡಕ್ ಅಧಿಕಾರಿಗಳೆಂಬ ಸೋಗು ಬಿಟ್ಟು ಆಳುವ ಪಕ್ಷದ ಆಳುಗಳು ಎನ್ನುವುದನ್ನು ಒಪ್ಪಿಕೊಳ್ಳಿ. ದತ್ತ ಜಯಂತಿಗೆ ಸಕಲ ವ್ಯವಸ್ಥೆ ಮಾಡಿದ ಎಸ್.ಪಿ ಅಣ್ಣಾಮಲೈ, ಸರ್ಕಾರವನ್ನು ಎದುರು ಹಾಕಿಕೊಂಡ ಡಿಐಜಿ ರೂಪಾ, ಮೆಡಿಕಲ್ ಸೀಟ್ ಬ್ಲಾಕಿಂಗ್ ಹಗರಣ ತಡೆದ ಐಎಎಸ್ ರಶ್ಮಿ ನೋಡಿ ಕಲಿಯಿರಿ. ಭಾಷಣ ನಿಲ್ಲಿಸಿ’’ ಎಂದು ಪ್ರತಾಪ್ ಸಿಂಹ ಟ್ವೀಟ್ ಮಾಡಿರುವುದು, ದಕ್ಷ? ಪ್ರಾಮಾಣಿಕ ಅಧಿಕಾರಿ ಚನ್ನಣ್ಣನವರ್ ಅಭಿಮಾನಿಗಳಲ್ಲಿ ಕ್ರೋಧ ಹುಟ್ಟಿಸಿದೆ.

ಅತ್ತ ಪೆಟ್ಟು ತಿಂದು ಗುಹೆ ಸೇರಿದವರಂತೆ ಒದ್ದಾಡುತ್ತಿರುವ ಪ್ರತಾಪ ಸಿಂಹ ಹೀಗೆಲ್ಲ ಹೇಳಿಕೆಗಳನ್ನು ಕೊಡುತ್ತಾ, ಟ್ವೀಟ್ ಮಾಡುತ್ತಾ ಶಮನ ಮಾಡಿಕೊಳ್ತಿದ್ದರೆ, ಇತ್ತ ಮೈಸೂರು ಎಸ್ ಪಿ ರವಿ ಚೆನ್ನಣ್ಣನವರ್ ತಣ್ಣಗೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ‘‘ನಾವು ಯಾರ ಪರವೂ ಇಲ್ಲ, ಯಾರ ವಿರುದ್ಧವೂ ಇಲ್ಲ. ಹಾಗೆ ಇದ್ದರೂ ನಾವು ಬಡವರ ಪರ, ಸತ್ಯದ ಪರ. ನಾವು ಯಾರನ್ನೂ ಪೂರ್ವಾಗ್ರಹಪೀಡಿತರಾಗಿ ನೋಡಿಲ್ಲ, ನೋಡೋದೂ ಇಲ್ಲ. ಹಾಗೇನಾದರೂ ಮಾಡಿದ್ದರೆ ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಿ. ಅವರು ವಿಚಾರಣೆ ನಡೆಸುತ್ತಾರೆ. ನಾನು ಪ್ರತಾಪ್ ಸಿಂಹ ಅವರ ಟ್ವಿಟರ್ ನಾನು ನೋಡಿಲ್ಲ. ಅದಕ್ಕೆ ನಾನು ಪ್ರತಿಕ್ರಿಯಿಸಬೇಕಿಲ್ಲ. ಕಲಿಕೆಯ ವಿಷಯಕ್ಕೆ ಬಂದರೆ, ಖಂಡಿತವಾಗಿಯೂ ನಾನು ಪರಿಪೂರ್ಣನಲ್ಲ. ನನ್ನಲ್ಲೂ ಲೋಪದೋಷಗಳಿರಬಹುದು. ಅವನ್ನು ತಿದ್ದಿಕೊಳ್ತೇನೆ. ನಾನು ಬಹಳಷ್ಟು ಕಲಿಯೋದಿದೆ; ಅಣ್ಣಾಮಲೈ ಅವರಿಂದಲೂ, ಸಹೋದ್ಯೋಗಿಗಳಿಂದಲೂ ಪೇದೆಗಳಿಂದಲೂ ಕಲಿಯುವುದು ಇದೆ. ನನಗೆ ಸಂವಿಧಾನವೇ ಶ್ರೇಷ್ಠ. ಭಾರತೀಯತೆಯೇ ನನ್ನ ಧರ್ಮ’’ ಎಂದು ಸುದ್ದಿವಾಹಿನಿಗಳಿಗೆ ಪ್ರತಿಕ್ರಿಯಿಸಿದ್ದಾರೆ.?

‘‘ಪೊಲೀಸ್ ಇಲಾಖೆ ಇರುವುದೇ ಕಾನೂನು ಸುವ್ಯವಸ್ಥೆ ಕಾಪಾಡಲು. ನಮ್ಮ ಕರ್ತವ್ಯ ನಾವು ಮಾಡ್ತಿದ್ದೇವೆ. ಜಿಲ್ಲಾಧಿಕಾರಿಗಳು ಹೊರಡಿಸಿದ ಆದೇಶವನ್ನು ನಾವು ಪಾಲಿಸುತ್ತೇವೆ. ನಾವೆಲ್ಲ ಕೆಲಸ ಮಾಡುವುದು ಒಂದು ತಂಡವಾಗಿ. ಕೆಲಸ ಮಾಡ್ತಿದ್ದೇವೆ, ಮುಂದೆಯೂ ಮಾಡುತ್ತೇವೆ. ನಮಗೆ ಪಾರದರ್ಶಕತೆ, ಸರ್ವಜನಾಂಗದ ಹಿತ ಮುಖ್ಯ’’ ಎಂದಿದ್ದಾರೆ ಚೆನ್ನಣ್ಣನವರ್.

– ಮಾಧ್ಯಮ ನೆಟ್

ಉಡುಪಿಯಲ್ಲಿ ಅಂಗವಿಕಲರ ಹಾಗೂ ಪಾಲಕರ ಪ್ರತಿಭಟನೆ

ಅಂಗವಿಕಲರಿಗೆ ಸ್ವದ್ಯೋಗಕ್ಕಾಗಿ ನೀಡುತ್ತಿರುವ ಆಧಾರ ಗೂಡಂಗಡಿ ಸಹಾಯಧನ ಮೊತ್ತವನ್ನು ರೂ.1ಲಕ್ಷಕ್ಕೆ ಏರಿಸಬೇಕು, ಸರ್ಕಾರ ನಿಡುವ ಬಸ್ ಪಾಸಿನಲ್ಲಿ ಪ್ರಯಾಣ ಮಿತಿಯನ್ನು ಅವಶ್ಯಕತೆ ಇರುವಷ್ಟು ದೂರಕ್ಕೆ ಏರಿಸಲು ಅನುಮತಿಸಬೇಕು, ಬಸ್ ಪಾಸ್ ಸೌಲಭ್ಯಗಳನ್ನು ಹತ್ತಿರದ ಕೆಎಸ್ಆರ್‌ಟಿಸಿ ಕಚೇರಿಗಳಲ್ಲಿ ನೀಡಬೇಕು, ಖಾಸಗಿ ಬಸ್‌ನಲ್ಲಿ ಸಹ ಶೇ.50ರಷ್ಟು ನೀಡಬೇಕು ಇತ್ಯಾದಿ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ನೇತೃತ್ವದಲ್ಲಿ ವಿವಿಧೋದ್ದೇಶ ಪುನರ್ವಸತಿ ಹಾಗೂ ಪುನರ್ವಸತಿ ಕಾರ್ಯಕರ್ತರು ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ನವಂಬರ್ 29ರಂದು ಪ್ರತಿಭಟನೆ ನಡೆಸಿದರು.

ಎಂಡೋಸಲ್ಫಾನ್ ಸಂತ್ರಸ್ತರು ಹಾಗೂ ಅಂಗವಿಕಲರ ಪುನರ್ವಸತಿಗಾಗಿ ಕಾರ್ಯನಿರ್ವಹಿಸುವ ಎಂಆರ್‌ಡಬ್ಲ್ಯೂ ಹಾಗೂ ಎಆರ್‌ಡಬ್ಲ್ಯೂ ಕಾರ್ಯಕರ್ತರನ್ನು ಸರ್ಕಾರಿ ನೌಕರರಾಗಿ ಪರಿಗಣಿಸಬೇಕು, ಅವರಿಗೆ ನೀಡುವ ಗೌರವಧನವನ್ನು ರೂ.8000 ದಿಂದ ರೂ.12,000ಕ್ಕೆ ಹೆಚ್ಚಳ ಮಾಡಬೇಕು, ಸರ್ಕಾರ ನೀಡುತ್ತಿರುವ ಮಾಸಿಕ ಪೋಷಣೆ ಭತ್ಯೆಯನ್ನು ರೂ.500 ರಿಂದ ರೂ.3000 ಹಾಗೂ ರೂ.1,200 ದಿಂದ ರೂ. 5,000ಕ್ಕೆ ಹೆಚ್ಚಳ ಮಾಡಬೇಕು ಎಂದು ಆಗ್ರಹಿಸಿದರು. ಎಂಡೋ ಸಂತ್ರಸ್ತರ ಪುನರ್ವಸತಿ ಕೇಂದ್ರದ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಬೇಕು ಎಂದು ಆಗ್ರಹಿಸಲಾಯಿತು.

ಮನವಿಯನ್ನು ಉಡುಪಿ ಜಿಲ್ಲಾಧಿಕಾರಿಗಳಿಗೆ ನೀಡಿದಾಗ, ಅಂಗವಿಕಲರಿಗೆ ಬಸ್ ಪಾಸ್ ಉಡುಪಿಯಲ್ಲಿ ನೀಡುವ ಕುರಿತು ಪರಿಶೀಲನೆ ನಡೆಸುವುದಾಗಿ ತಿಳಿಸಿದರು. ಜಿಲ್ಲಾ ಒಕ್ಕೂಟದ ಗೌರವಾಧ್ಯಕ್ಷ ವೆಂಕಟೇಶ್ ಕೋಣಿ, ಅಧ್ಯಕ್ಷ ಮಂಜುನಾಥ ಹೆಬ್ಬಾರ್, ಪ್ರಧಾನ ಕಾರ್ಯದರ್ಶಿ ಕೃಷ್ಣ ಪೂಜಾರಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬದಲಿ ಸೇತುವೆ ನಿರ್ಮಾಣಕ್ಕಾಗಿ ಸಿಪಿಐ(ಎಂ)ನಿಂದ ಗುರುಪುರದಲ್ಲಿ ಪ್ರತಿಭಟನೆ:

1960ಕ್ಕೆ ಮುಂಚೆ ಕರಾವಳಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗುವ ಮೊದಲು ಮಂಗಳೂರಿನಿಂದ ಉಡುಪಿಗೆ ರಸ್ತೆಯಲ್ಲಿ ವಾಹನದಲ್ಲಿ ಸಾಗಬೇಕಾದರೆ ಮಂಗಳೂರು–ಗುರುಪುರ–ಮೂಡಬಿದ್ರಿ ಕಾರ್ಕಳದಿಂದಾಗಿಯೇ ಸಾಗಬೇಕಿತ್ತು. 1923ರಲ್ಲಿ ಗುರುಪುರದಲ್ಲಿ ಅಲ್ಲಿನ ನದಿಗೆ ಸೇತುವೆಯನ್ನು ಬ್ರಿಟಿಷರು ನಿರ್ಮಾಣ ಮಾಡಿದ್ದರಿಂದ ಗುರುಪುರ ಸೇತುವೆ ಪ್ರಧಾನವಾದ ಸಂಪರ್ಕ ಸಾಧಿಸಲಾಗಿತ್ತು. ಕೇವಲ 10 ಟನ್ ಗರಿಷ್ಠ ತೂಕದ ವಾಹನ ಸಾಗಾಟಕ್ಕಾಗಿ ನಿರ್ಮಾಣ ಮಾಡಲಾಗಿದ್ದ ಈ ಸೇತುವೆಗೆ ಶತಮಾನ ಸಮೀಪಿಸುತ್ತಿದ್ದು, ಅದು ಅತ್ಯಂತ ದುರ್ಬಲವಾಗಿದೆ. ಈಗ ಉಡುಪಿಗೆ ಮಂಗಳೂರಿನಿಂದ ಆ ಸೇತುವೆ ಮೂಲಕ ವಾಹನ ಸಂಚಾರವಿಲ್ಲ. ಆದರೆ ಮಂಗಳೂರಿನಿಂದ ಕಾರ್ಕಳ–ಆಗುಂಬೆ–ಶಿವಮೊಗ್ಗ, ಕಾರ್ಕಳ–ಕುದುರೆಮುಖ–ಕಳಸ, ಕಾರ್ಕಳ –ಶೃಂಗೇರಿ–ಎನ್.ಆರ್.ಪುರ ಈ ಎಲ್ಲಾ ಊರುಗಳಿಗೆ ಗುರುಪುರ ಸೇತುವೆ ಮೇಲಿಂದಲೇ ಹಾದುಹೋಗಬೇಕು. ಶಿಥಿಲವಾದ ಈ ಸೇತುವೆ ಯಾವಾಗ ಕುಸಿದು ಬೀಳುವುದೋ ಹೇಳುವಂತಿಲ್ಲ.

ಇದೀಗ ನಿರ್ಮಾಣಕ್ಕೆ ಸಜ್ಜಾಗಿರುವ ರಾಷ್ಟ್ರೀಯ ಹೆದ್ದಾರಿ 169 ಮಂಗಳೂರಿನಿಂದ ಕಾರ್ಕಳ ಮೂಲಕ ಹಾದುಹೋಗುತ್ತಿದ್ದು, ಅದನ್ನು ಚತುಷ್ಪಥ ರಸ್ತೆಯಾಗಿ ರಚಿಸುವ ಪ್ರಸ್ತಾಪವಿದೆ. ಈ ಸಂಬಂಧ ಮಂಗಳೂರು ಕಾರ್ಕಳ ಮಧ್ಯೆ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಗೊಂಡಿದ್ದು, ಪ್ರಕ್ರಿಯೆ ನಿಧಾನವಾಗಿ ಸಾಗುತ್ತಿದೆ. ಈಗ ಹಲವಾರು ವರ್ಷಗಳಿಂದ ಭಾರೀ ತೂಕದ ಸರಕು ವಾಹನಗಳು ಗುರುಪುರ ಸೇತುವೆ ಮೇಲೆ ಸಾಗುತ್ತಿವೆ. ಸಿಪಿಐ(ಎಂ) ಪಕ್ಷದ ಕಳೆದ 2 ಸಮ್ಮೇಳನಗಳಿಂದ ಗುರುಪುರದಲ್ಲಿ ಬದಲಿ ಸೇತುವೆ ನಿರ್ಮಾಣಕ್ಕಾಗಿ ನಿರ್ಣಯ ತೆಗೆದುಕೊಂಡು ಕೇಂದ್ರ ಹಾಗೂ ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸುತ್ತಿದ್ದರೂ ಸರಕಾರಗಳು ಸ್ಪಂದಿಸುತ್ತಿಲ್ಲ.

ಈ ಹಿನ್ನೆಲೆಯಲ್ಲಿ ನವಂಬರ್ 5 ರಂದು ನಡೆದ ಈಚಿನ ಸಿಪಿಐ(ಎಂ) ಗುರುಪುರ ವಲಯ ಸಮ್ಮೇಳನವು, ಒಂದು ಪ್ರತಿಭಟನಾ ಪ್ರದರ್ಶನ ಬದಲಿ ಸೇತುವೆ ನಿರ್ಮಾಣಕ್ಕಾಗಿ ಆಗ್ರಹಿಸಿ ನಿರ್ಣಯ ಕೈಗೊಂಡಿದೆ. ಈ ಹಿನ್ನೆಲೆಯಲ್ಲಿ 2017 ಡಿಸೆಂಬರ್ 3 ರಂದು ಗುರುಪುರ ಸೇತುವೆಯ ತುದಿಯಲ್ಲಿ ಪಕ್ಷವು ಪ್ರತಿಭಟನಾ ಸಭೆಯನ್ನು ಏರ್ಪಡಿಸಿತು. ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಲಿ ಸದಸ್ಯರಾದ ಯು.ಬಿ.ಲೋಕಯ್ಯ, ಸಿಪಿಐ(ಎಂ) ಗುರುಪುರ ವಲಯ ಕಾರ್ಯದರ್ಶಿ ಸದಾಶಿವ ದಾಸ್ ಹಾಗೂ ವಲಯ ಸಮಿತಿ ಸದಸ್ಯ ಗಂಗಯ್ಯ ಅಮೀನ್ ಬದಲಿ ಸೇತುವೆ ನಿರ್ಮಾಣದ ಜೊತೆಗೆ ಅಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ ಭೂಸ್ವಾಧೀನ ಪ್ರಕ್ರಿಯೆ ಹಾಗೂ ಹೆದ್ದಾರಿ ನಿರ್ಮಾಣ ಪ್ರಕ್ರಿಯೆಯನ್ನು ಶೀಘ್ರಗೊಳಿಸಬೇಕೆಂದು ಆಗ್ರಹಿಸಲಾಯಿತು.

ಪ್ರತಿಭಟನೆಗೂ ಮೊದಲು ಪ್ರತಿಭಟನಾಕಾರರು ಮಂಗಳೂರಿನಿಂದ ಗುರುಪುರ ಸೇತುವೆವರೆಗೂ ಮೆರವಣಿಗೆ ನಡೆಸಿದರು.

– ವಾಸುದೇವ ಉಚ್ಚಿಲ

ಸಮೃದ್ಧ ಮಂಗಳೂರು ಅಭಿವೃದ್ಧಿ ಆಗ್ರಹಿಸಿ, ಸಿಪಿಐ(ಎಂ) ಪಾದಯಾತ್ರೆ ಉದ್ಘಾಟನೆ



ಮಂಗಳೂರು ನಗರದ ಸಮಗ್ರ ಅಭಿವೃದ್ಧಿ ಪ್ರಶ್ನೆಯಲ್ಲಿ ದಶಕಗಳಿಂದಲೂ ಮಂಗಳೂರು ನಗರಪಾಲಿಕೆಗೆ ಸಿಪಿಐ(ಎಂ) ಪಕ್ಷವು ಪ್ರತಿಭಟನೆ, ಆಗ್ರಹ, ಪ್ರಸ್ತಾವಿಕೆಗಳನ್ನು ಕಾಲಕಾಲಕ್ಕೆ ಸಲ್ಲಿಸುತ್ತಾ ಬಂದಿದೆ. ಪಾಲಿಕೆ ಆಡಳಿತ ನಡೆಸುತ್ತಿರುವ ಪಕ್ಷಗಳು ಇವುಗಳನ್ನು ಕಡೆಗಣಿಸಿ, ಜನತೆಯ ಹಿತವನ್ನು ಅಲಕ್ಷಿಸಿದೆ. ಈ ನಿಟ್ಟಿನಲ್ಲಿ ಇಂದು ನಗರಪಾಲಿಕೆಯ ವೈಫಲ್ಯವನ್ನು ಮನವರಿಕೆ ಮಾಡಿ ಪರ್ಯಾಯಗಳನ್ನು ಮುಂದಿಡುವ ಸಿಪಿಐ(ಎಂ) ಪಕ್ಷದ ಆಗ್ರಹಗಳಿಗೆ ಜನತೆ ಬೆಂಬಲ ನೀಡಬೇಕಾಗಿದೆ ಎಂಬುದಾಗಿ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ. ಬಾಲಕೃಷ್ಣ ಶೆಟ್ಟಿ ಹೇಳಿದರು.

ಅವರು ಡಿಸೆಂಬರ್ 7ರಂದು ಮಂಗಳೂರು ಮಹಾನಗರ ಪಾಲಿಕೆ ಕಚೇರಿ ಎದುರು ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ನೇತೃತ್ವದಲ್ಲಿ ಏರ್ಪಡಿಸಿದ್ದ 'ಸೌಹಾರ್ದತೆಯಿಂದ ಅಭಿವೃದ್ಧಿಯೆಡೆಗೆ' ಎಂಬ ಘೋಷಣೆಯಡಿಯಲ್ಲಿ ಹೊರಟ 4 ದಿನಗಳ ಪಾದಯಾತ್ರೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಹಿಂದಿನ ಬಿಜೆಪಿ ಆಡಳಿತದಲ್ಲೂ ಇಂದಿನ ಕಾಂಗ್ರೆಸ್ ಆಡಳಿತದಲ್ಲೂ ನಗರ ಪಾಲಿಕೆಯ ಸಮಗ್ರ ಅಭಿವೃದ್ಧಿಯ ಚಿಂತನೆ ಇರುವುದಿಲ್ಲ. ಕೇವಲ ಹತ್ತು ವರ್ಷಗಳ ಹಿಂದೆ ಎಡಿಬಿ ಸಾಲ ಪಡೆದು ನಡೆಸಿದ ಒಳಚರಂಡಿ ಕಾಮಗಾರಿಗಳನ್ನು ದುರಸ್ತಿ ಮಾಡುವುದಕ್ಕಾಗಿ ಪಾಲಿಕೆ ಬೇರೊಂದು ಬೃಹತ್ ಸಾಲಕ್ಕೆ ಮುಂದಾಗಿರುವುದು ಇದಕ್ಕೆ ಒಂದು ಉದಾಹರಣೆಯಾಗಿದೆ.

ಮಂಗಳೂರು ನಗರದಲ್ಲಿ ನಿವೇಶನ ರಹಿತರು ಸಾವಿರಾರು ಸಂಖ್ಯೆಯಲ್ಲಿದ್ದು, ಅವರಿಗಾಗಿ ಒಂದು ಕಾರ್ಯಯೋಜನೆ ಪಾಲಿಕೆಯಲ್ಲಿರಲಿಲ್ಲ. ಸಿಪಿಐ(ಎಂ) ಪಕ್ಷ ನಿವೇಶನ ರಹಿತರನ್ನು ಸಂಘಟಿಸಿ ಹಲವಾರು ಬಾರಿ ಹೋರಾಟ ಮಾಡಿದ ಫಲವಾಗಿ, ನಿವೇಶನಕ್ಕಾಗಿ ಪಾಲಿಕೆ ಜಮೀನು ಕಾಯ್ದಿರಿಸಬೇಕಾಯಿತು. ಅಲ್ಲದೆ ಬಹುಮಹಡಿ ವಸತಿ ಸಂಕೀರ್ಣದ ಯೋಜನೆ ತಯಾರಿಸಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸಿತು. ಪಾಲಿಕೆ ಆಡಳಿತ ಹಾಗೂ ಸ್ಥಳೀಯ ಶಾಸಕರು ಒಂದೇ ಪಕ್ಷದವರಾಗಿದ್ದರೂ, ಬಡವರ ನಿವೇಶನದ ಬಗ್ಗೆ ನಿರಾಸಕ್ತಿ ವ್ಯಕ್ತಪಡಿಸಿದ್ದರು. ನಗರದಲ್ಲಿ ನೀರಿನ ಪೂರೈಕೆ ಅವ್ಯವಸ್ಥೆ ಹಾಗೂ ದರ ಹೆಚ್ಚಳದ ವಿರುದ್ಧ ಕೂಡಾ ಸಿಪಿಐ(ಎಂ) ನಡೆಸಿದ ಹೋರಾಟದ ಬಳಿಕ ದರ ಪರಿಷ್ಕರಣೆಗೆ ನಗರಪಾಲಿಕೆ ಪ್ರಯತ್ನಿಸಿತಲ್ಲದೆ, ತನ್ನದೇ ಉತ್ಸುಕತೆಯಿಂದ ಅಲ್ಲ ಎಂಬುದಾಗಿ ಜೆ. ಬಾಲಕೃಷ್ಣ ಶೆಟ್ಟಿ ಟೀಕಿಸಿದರು.

ಸಿಪಿಐ(ಎಂ) ಪಕ್ಷದ ಬಾವುಟವನ್ನು ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನೀಲ್‌ಕುಮಾರ್ ಬಜಾಲ್ ಅವರಿಗೆ ಹಸ್ತಾಂತರಗೊಳಿಸುವ ಮೂಲಕ ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಅವರು ಪಾದಯಾತ್ರೆಗೆ ಚಾಲನೆ ನೀಡಿದರು. ಮುನೀರ್ ಕಾಟಿಪಳ್ಳ ಮಾತನಾಡಿ, ಮಂಗಳೂರು ನಗರದಲ್ಲಿ ಒಂದು ರಾಜಕೀಯ ಪರಿವರ್ತನೆ ಆಗಬೇಕಿದ್ದು, ಅದಕ್ಕೆ ಯುವಜನರು ಮುಂದಾಳತ್ವ ತೆಗೆದುಕೊಳ್ಳಬೇಕಾಗಿದೆ. ಈಗಾಗಲೇ ಶಾಸಕರಾಗಿರುವವರು ಜನತೆಯ ಹಿತವನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಶ್ರೀಮಂತರು ನಿರ್ಮಿಸುವ ಅಪಾರ್ಟ್‌ಮೆಂಟುಗಳ ಭೂಮಿ ಪೂಜೆಗಳಿಗೆ ಎಲ್ಲ ಶಾಸಕರು ಹಾಜರಿರುತ್ತಾರೆ. ಆದರೆ ಸಾವಿರಗಟ್ಟಲೆ ನಿವೇಶನರಹಿತರ ಮನೆ ನಿರ್ಮಾಣದ ಬಗ್ಗೆ ಕನಿಷ್ಟ ಕಾಳಜಿಯೂ ಅವರಲ್ಲಿ ಕಂಡು ಬರುವುದಿಲ್ಲ. ಕಮ್ಯುನಿಸ್ಟ್ ಪಕ್ಷದವರು ಕಟ್ಟಿರುವ ಸಂಘಕ್ಕೆ ಸೇರಿಕೊಳ್ಳುವ ನಿವೇಶನರಹಿತರಿಗೆ ಆ ಸಂಘಟನೆಯಿಂದ ನಿಮಗೆ ಮನೆ ಕೊಡಿಸಲು ಸಾಧ್ಯವಿಲ್ಲ ಎಂದೂ ಬೆದರಿಸುತ್ತಾರೆ ಎಂಬುದಾಗಿ ವಾಗ್ದಾಳಿ ನಡೆಸಿದರು.

ನಗರ ಕೇಂದ್ರದ ಸೆಂಟ್ರಲ್ ಮಾರ್ಕೆಟನ್ನು ಪುನರ್‌ರಚಿಸಬೇಕು ಎಂಬ ಒತ್ತಾಯ ಹಲವಾರು ವರ್ಷಗಳಿಂದ ಇದ್ದರೂ, ಈಗಿನ ಶಾಸಕರು ಆ ಬಗ್ಗೆ ಕಾರ್ಯ ಪ್ರವೃತ್ತರಾಗಿಲ್ಲ. ಅವಶ್ಯಕತೆ ಇಲ್ಲದಿದ್ದರೂ ಸುರತ್ಕಲ್‌ನಲ್ಲಿ ಹೈಟೆಕ್ ಮಾರ್ಕೆಟನ್ನು ನಿರ್ಮಾಣ ಮಾಡಲು ಇನ್ನೊಬ್ಬ ಶಾಸಕರು ಮುತುವರ್ಜಿ ವಹಿಸಿದ್ದಾರೆ.

ಇನ್ನೊಂದೆಡೆ ಬೃಹತ್ ಕಟ್ಟಡ ನಿರ್ಮಾಣದ ವೇಳೆಗೆ ಪಾರ್ಕಿಂಗ್ ಸ್ಥಳಗಳನ್ನು ಕಾದಿರಿಸಬೇಕೆಂಬ ನಿಯಮವಿದ್ದರೂ, ಬಹುತೇಕ ವ್ಯಾಪಾರಿ ಕಟ್ಟಡದ ಒಡೆಯರು ಪಾರ್ಕಿಂಗ್ ಸ್ಥಳ ನಿರ್ಮಿಸದೆ ಅದೇ ಸ್ಥಳದಲ್ಲಿ ವ್ಯಾಪಾರಿ ಮಳಿಗೆ ನಿರ್ಮಿಸಿದ್ದಾರೆ. ಇದರಿಂದಾಗಿ ನಗರದ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿದೆ ಹಾಗೂ ಅಕ್ರಮ ಪಾರ್ಕಿಂಗ್‌ಗೆ ಕಾರಣವಾಗಿದೆ. ಇದೇ ಶ್ರೀಮಂತರು ಬೀದಿಬದಿ ವ್ಯಾಪಾರಿಗಳು ನಗರ ಸೌಂದರ್ಯಕ್ಕೆ ಅಡ್ಡಿಯೆಂದು ಅವರನ್ನು ಒಕ್ಕಲೆಬ್ಬಿಸಲು ಪ್ರೇರಣೆ ನೀಡಿ, ಅದರಂತೆ ಪಾಲಿಕೆ ಕ್ರಮ ಕೈಗೊಳ್ಳುತ್ತಿದೆ. ಸುನೀಲ್‌ಕುಮಾರ್ ಬಜಾಲ್ ನೇತೃತ್ವದಲ್ಲಿ ಬೀದಿಬದಿ ವ್ಯಾಪಾರಿಗಳ ಸಂಘವು ಪಾಲಿಕೆಗೆ ಸವಾಲು ಒಡ್ಡಿ ಇದನ್ನು ಎದುರಿಸುತ್ತಿದೆ. ಬೀದಿಬದಿ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸುವುದಕ್ಕೆ ಬರುವ ಮೊದಲು, ಬೃಹತ್ ಕಟ್ಟಡಗಳಲ್ಲಿ ಪಾರ್ಕಿಂಗ್ ಸ್ಥಳಗಳಲ್ಲಿ ಅಕ್ರಮವಾಗಿ ನಿರ್ಮಿಸಲಾದ ಅಂಗಡಿ ಮುಗ್ಗಟ್ಟುಗಳನ್ನು ಪಾಲಿಕೆ ಕೆಡವಿ ಹಾಕಲಿ ಎಂದು ಮುನೀರ್ ಕಾಟಿಪಳ್ಳ ಪಾಲಿಕೆಗೆ ಸವಾಲು ಹಾಕಿದರು. ಮಂಗಳೂರು ನಗರದವು ಶ್ರೀಮಂತರ ಮಂಗಳೂರು ಎನಿಸಬಾರದು, ಬಡವರು ಜನಸಾಮಾನ್ಯರ ಮಂಗಳೂರು ಆಗಬೇಕು ಎಂದವರು ಆಶಿಸಿದರು.

ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನೀಲ್‌ಕುಮಾರ್ ಬಜಾಲ್ ಪ್ರಾಸ್ತಾವಿಕ ಮಾತುಗಳಲ್ಲಿ, ನಗರ ಪಾಲಿಕೆಯ ಆಡಳಿತವು ಭ್ರಷ್ಟವಾಗಿದ್ದು, ಬದಲಾವಣೆ ನಮ್ಮಿಂದಲೇ ಆಗಬೇಕಾಗಿದೆ ಎಂದು ವಿವರಿಸಿದರು. ಸಮಿತಿ ಸದಸ್ಯ ಯೋಗೀಶ್ ಜಪ್ಪಿನಮೊಗರು ಸ್ವಾಗತಿಸಿದರು. ಸದಸ್ಯ ಸಂತೋಷ್ ಶಕ್ತಿನಗರ ವಂದಿಸಿದರು. ನಗರ ಪಾಲಿಕೆ ಕಾರ್ಪೋರೇಟರ್ ದಯಾನಂದ ಶೆಟ್ಟಿ, ಮಾಜಿ ಕಾರ್ಪೋರೇಟರ್ ಜಯಂತಿ ಬಿ. ಶೆಟ್ಟಿ, ಸಿಪಿಐ(ಎಂ) ಜಿಲ್ಲಾ ಸಮಿತಿಯ ವಾಸುದೇವ ಉಚ್ಚಿಲ, ನಗರ ಸಮಿತಿ ಸದಸ್ಯರು, ಡಿವೈಎಫ್ಐ ದ.ಕ. ಜಿಲ್ಲಾಧ್ಯಕ್ಷ ಬಿ.ಕೆ. ಇಮ್ತಿಯಾಜ್ ಪಾದಯಾತ್ರೆ ಉದ್ಘಾಟನಾ ಸಭೆಯಲ್ಲಿ ಭಾಗವಹಿಸಿದ್ದರು.

ಪಾದಯಾತ್ರೆಯು 4 ದಿನ ನಗರದ 38 ವಾರ್ಡುಗಳಲ್ಲಿ ಸಾಗಿ, ಡಿಸೆಂಬರ್ 10ರ ಸಾಯಂಕಾಲ ಶಕ್ತಿನಗರದಲ್ಲಿ ಸಮಾರೋಪಗೊಳ್ಳಲಿದೆ.

– ಸುನೀಲ್ ಕುಮಾರ್ ಬಜಾಲ್

ಶಾಂತಿಯ ಚಂದಾವರಕ್ಕೆ ಕೋಮುವಿಷ ಬೆರೆಸಿದ ಕೋಮುವಾದಿಗಳ ಪಿತೂರಿ ಗಲಭೆ-ಸಿಪಿಐಎಂ ಖಂಡನೆ

ಐತಿಹಾಸಿಕ ಹಿನ್ನೆಲೆಯ ಚಂದಾವರದಲ್ಲಿ ಹಿಂದೂ-ಮುಸ್ಲಿಂ-ಕ್ರೈಸ್ತರೆಲ್ಲರೂ ಸೌಹಾರ್ದದಿಂದ ಇದ್ದುದನ್ನು ಸಹಿಸದ ಬಿಜೆಪಿ ಮತ್ತು ಸಂಘಪರಿವಾರ ಚುನಾವಣೆಯ ಸ್ವಾರ್ಥಕ್ಕಾಗಿ ಗಲಭೆಯ ಪಿತೂರಿ ನಡೆಸಿ ಶಾಂತಿಯ ವಾತಾವರಣಕ್ಕೆ ಕೋಮುವಿಷ ಬೆರೆಸಿದ ಘಟನೆಯನ್ನು ಭಾರತ ಕಮ್ಯುನಿಷ್ಟ ಪಕ್ಷ (ಮಾರ್ಕ್ಸ್‌ವಾದಿ) ಉತ್ತರ ಕನ್ನಡ ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸುತ್ತದೆ. ಜಿಲ್ಲಾಡಳಿತದ ಶಾಂತಿ ಸಭೆಯ ನಿರ್ಣಯವನ್ನು ಪಾಲಿಸದೇ ಇರುವ ಭಾವೀ ಟಿಕೆಟ್ ಆಕಾಂಕ್ಷಿಗಳು ಹಾಗೂ ಸಮಾಜವಿರೋಧಿ ಪಡೆ ಚುನಾವಣೆಯ ಷಡ್ಯಂತ್ರದ ಭಾಗವಾಗಿ ಮತ್ತು ತಮ್ಮ ಪಕ್ಷದ ಜನದ್ರೋಹಿ ನೀತಿಗಳನ್ನು ಮರೆ ಮಾಚಿ ಜನರ ಲಕ್ಷ್ಯ ಬೇರೆಡೆಗೆ ಸೆಳೆಯಲು ಹುನ್ನಾರ ನಡೆಸಿದ್ದರಿಂದ ಚಂದಾವರದಲ್ಲಿ ಗಲಭೆ ಸೃಷ್ಟಿಸಿದ್ದಾರೆ. ಈ ಕೂಡಲೇ ಎಲ್ಲಾ ತಪ್ಪಿತಸ್ಥರ ಮೇಲೆ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮ ಜರುಗಿಸಲು ಸಿಪಿಐ(ಎಂ) ಜಿಲ್ಲಾ ಸಮಿತಿ ಜಿಲ್ಲಾಡಳಿತವನ್ನು ಆಗ್ರಹಿಸುತ್ತದೆ ಮಾತ್ರವಲ್ಲ ಚಂದಾವರ, ಹೊನ್ನಾವರ, ಕುಮಟಾ ಸುತ್ತಮುಲೂ ಮತ್ತು ಜಿಲ್ಲೆಯ ಸಮಸ್ತ ಜನತೆ ಶಾಂತಿ ಮತ್ತು ಸೌಹಾರ್ದತೆಯಿಂದ ಇರಬೇಕೆಂದು ಯಾವುದೇ ರೀತಿಯಲ್ಲಿ ಕೋಮುಪ್ರಚೋದಕರ ಸಮಾಜವಿರೋಧಿ ಘಟುವಟಿಕೆ ಮಾಡುವವರ ವದಂತಿಗಳಿಗೆ ಕಿವಿಗೊಡಬಾರದೆಂದು ವಿನಂತಿಸುತ್ತೇವೆ.

ಚಂದಾವರ ಭಾಗದಲ್ಲಿ ಅತಿಹೆಚ್ಚು ಜನ ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಹಿಂದು ಧರ್ಮಾವಲಂಬಿಗಳು ಇದ್ದು ಚಂದಾವರ ಪೇಸ್ಟ್, ಹನುಮಂತ ದೇವರ ಪಾಲಿಕೆ ಹಾಗೂ ಈದ್ ಗಳಿಗೆ ಎಲ್ಲರೂ ಹೋಗಿಬರುವಿಕೆ ಇತ್ತು. ಯಾರ ಮೇಲೂ ದಾಳಿಗಳಾಗಿರಲಿಲ್ಲ. ಇಷ್ಟು ವರ್ಷದಿಂದ ಪ್ರೀತಿಯ ಬದುಕು ಬಾಳಿದ ಈ ಭಾಗಕ್ಕೆ ಕೆಲವೇ ಕೆಲವು ಧರ್ಮಾಂಧರಿಂದ ಕೆಟ್ಟ ಘಟನೆ ಜರುಗುವಂತಾಗಿದೆ. ಬಿಜೆಪಿ ತನ್ನ ಪರಿವರ್ತನಾ ಯಾತ್ರೆಯಲ್ಲಿ ಬಳಸಿದ ಉದ್ರೇಕಕಾರಿ ಭಾಷಣಗಳು ಹಾಗೂ ಕರಾವಳಿಯಲ್ಲಿ ನಡೆಯುತ್ತಿರುವ ಸಂಘಪರಿವಾರದ ಆಟಾಟೋಪಗಳು ಈ ಕೃತ್ಯಕ್ಕೆ ಕಾರಣವಾಗಿದೆ ಹೊರತೂ ಜನಸಾಮಾನ್ಯರಿಗೆ ಈ ಗಲಭೆಗಳು ಬೇಕಿಲ್ಲ. ಜಿಲ್ಲೆಯ ನೈಜ ಸಮಸ್ಯೆಗಳನ್ನು ಎತ್ತಿ ಹೋರಾಟ ಮಾಡದೇ ಇರುವವರು ಕೇವಲ ಜಾತಿ ಧರ್ಮದ ಆಧಾರದಲ್ಲಿ ಜನರ ಐಕ್ಯತೆ ಒಡೆಯುತ್ತಿವೆ. ಅಮಾಯಕ ಯುವಕರನ್ನು ದಾರಿತಪ್ಪಿಸಿ ಅವರಿಗೆ ಅನ್ಯಧರ್ಮದ ವಿರುದ್ಧ ಕೆಟ್ಟ ಭಾವನೆಗಳನ್ನು ತುಂಬುತ್ತಿರುವವರ ವಿರುದ್ಧ ಈ ಕೂಡಲೇ ಜಿಲ್ಲಾಡಳಿತ ಕಠಿಣ ಕ್ರಮ ಕೈಗೊಂಡು ಜನಜೀವನ ಸಾಂಗವಾಗಿರುವಂತೆ ನೋಡಲು ಸಿಪಿಐಎಂ ಉತ್ತರ ಕನ್ನಡ ಜಿಲ್ಲಾ ಸಮಿತಿ ಒತ್ತಾಯಿಸುತ್ತದೆ.

ಮುಖ್ಯಮಂತ್ರಿಗಳ ಕಾರವಾರ ಪ್ರವಾಸದ ವೇಳೆಯಲ್ಲಿ ಕಾರ್ಮಿಕರ ಹಕ್ಕೊತ್ತಾಯಗಳ ಬಗ್ಗೆ ಮನವಿ ಸಲ್ಲಿಕೆ

ಮುಖ್ಯಮಂತ್ರಿಗಳಿಗೆ ಕಾರವಾರ ಪ್ರವಾಸದ ವೇಳೆಯಲ್ಲಿ ಕೆ.ಪಿ.ಆರ್.ಎಸ್ ಮತ್ತು ಸಿಐಟಿಯುದಿಂದ ಮನವಿ ಸಲ್ಲಿಸಲಾಯಿತು. ಅತಿಕ್ರಮಣ ಭೂಮಿ ಸಕ್ರಮಕ್ಕೆ, ಐ.ಎಲ್.ಸಿ ಮಾದರಿಯಲ್ಲಿ ಕರ್ನಾಟಕ ಕಾರ್ಮಿಕ ಸಮ್ಮೇಳನ (ಕೆ.ಎಲ್.ಸಿ) ನಡೆಸಲು, ಕಾರ್ಮಿಕ ನ್ಯಾಯಾಲಯ, ಉತ್ತರ ಕನ್ನಡದ ಎಲ್ಲಾ ತಾಲೂಕಿಗೆ ಕಾರ್ಮಿಕಾಧಿಕಾರಿಗಳ ನೇಮಕ, ಮಾತೃಪೂರ್ಣ ಯೋಜನೆಯ ಲೋಪದೋಷ ನಿವಾರಣೆ ಮತ್ತು ಗುತ್ತಿಗೆ ಕಾರ್ಮಿಕರ ವಿವಿಧ ಬೇಡಿಕೆ ಈಡೇರಿಸಲು ವಿನಂತಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಉತ್ತರ ಕನ್ನಡ ಜಿಲ್ಲಾ ಸಮಿತಿಯಿಂದ ಮುಖ್ಯಮಂತ್ರಿಗಳು ಕಾರವಾರ ಪ್ರವಾಸದ ವೇಳೆಯಲ್ಲಿ ಇರುವಾಗ ಭೇಟಿಯಾಗಿ ಮನವಿ ಸಲ್ಲಿಸಲಾಯಿತು.

ಮನವಿಯ ಮುಖ್ಯ ಅಂಶಗಳು:

1) ಸಿಐಟಿಯು ಸಲ್ಲಿಸಿರುವ ಬೇಡಿಕೆಗಳ ಕುರಿತು ಕರ್ನಾಟಕ ಕಾರ್ಮಿಕ ಸಮ್ಮೇಳನದ ಕಾರ್ಯಸೂಚಿಯಾಗಿ ಮಂಡಿಸಿ ಅಂಗೀಕರಿಸುವ ಮೂಲಕ ಸರ್ವ ಸಮ್ಮತಿ ರೂಪಿಸಿ, ಜಾರಿಗೊಳಿಸಲು ಕ್ರಮ ವಹಿಸಬೇಕು.
2) ಡಿಸೆಂಬರ್ 6 ರಂದೇ "ಕರ್ನಾಟಕ ಕಾರ್ಮಿಕ ಸಮ್ಮೇಳನ" ನಡೆಸಿದಲ್ಲಿ ಐತಿಹಾಸಿಕವೂ ಸಾಂದರ್ಭಿಕವೂ ಆಗಿರಲಿದೆ ಎಂಬುದು ಸಿಐಟಿಯು ನ ಮನವಿಯಾಗಿತ್ತು. ಆದರೆ ಇದೂವರೆಗೂ ಅದು ಕೈಗೂಡಿಲ್ಲ. ತಕ್ಷಣ ಸಭೆ ನಡೆಸಿ ಈ ಬಗ್ಗೆ ನಿರ್ಣಯ ಕೈಗೊಳ್ಳಬೇಕು.
3) ಭಾರತೀಯ ಕಾರ್ಮಿಕ ಸಮ್ಮೇಳನದಲ್ಲಿ ಅಂಗೀಕರಿಸಿರುವಂತೆ ಅಂಗನವಾಡಿ, ಬಿಸಿಯೂಟ, ಆಶಾ ಮುಂತಾದ ಸ್ಕೀಂ (ಯೋಜನೆ) ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು. ಅಂಗನವಾಡಿ ಮೂಲಕ ಮಾತೃಪೂರ್ಣ ಯೋಜನೆ ಜಾರಿ ಮಾಡಲಾಗುತ್ತಿದ್ದು ಅದರಲ್ಲಿಯ ಲೋಪದೋಷ ನಿವಾರಿಸಬೇಕು. ಯೋಜನೆಗೆ ಬೇಕಾಗುವ ದವಸಧಾನ್ಯ, ಮೊಟ್ಟೆ ಇತ್ಯಾದಿಗಳ ಹಣಕಾಸನ್ನು ಮುಂಚಿತವಾಗಿ ಮೊದಲಿನಂತೆ ನೌಕರರ ಖಾತೆಗೆ ಹಾಕಬೇಕು. ಅನಗತ್ಯ ವೈಮನಸ್ಸಿಗೆ ಕಾರಣವಾಗುವ ಜಂಟಿ ಖಾತೆ ಕೈಬಿಡಬೇಕು. ಅಕ್ಷರದಾಸೋಹ ಬಿಸಿಯೂಟ ಕಾರ್ಯಕರ್ತೆಯರಿಗೆ ಸರ್ಕಾರ ಮನೆಗೆಲಸದವರಿಗೆ ನಿಗದಿ ಪಡಿಸಿದ ಕೂಲಿಯ ಅರ್ಧದಷ್ಟು ಕೂಡ ತಿಂಗಳ ಕೂಲಿಯಾಗಿ ನೀಡದಿರುವುದು ಅಮಾನವೀಯ. ತಕ್ಷಣ ಕೂಲಿ ಹೆಚ್ಚಳ ಮಾಡಬೇಕು.
4) ಎಲ್ಲಾ ಅನುಸೂಚಿತ ಉದ್ಯೋಗಗಳಿಗೂ ಸಮಾನ ಕನಿಷ್ಟ ವೇತನದ ಒಂದೇ ಅಧಿಸೂಚನೆಯನ್ನು ರೂ. 18000-00 ಸಮಾನ ಕನಿಷ್ಟ ವೇತನ ನಿಗದಿಗೊಳಿಸಿ ಹೊರಡಿಸಬೇಕು. ಸಮಾನ ಕೆಲಸಕ್ಕೆ ಸಮಾನವೇತನ ಕುರಿತು ಸುಪ್ರಿಂ ಕೋರ್ಟ ತೀರ್ಪು ಜಾರಿ ಮಾಡಿ. ಗುತ್ತಿಗೆ ಮುಂತಾದ ಖಾಯಮೇತರ ಕಾರ್ಮಿಕರ ಖಾಯಂಗೆ ಆಸ್ಸಾಂ ಮತ್ತು ತಮಿಳು ನಾಡು ಮಾದರಿಯಲ್ಲಿ ಖಾಯಂ ಸ್ಥಾನಮಾನ ಕಲ್ಪಿಸುವ ಶಾಸನ ರೂಪಿಸಿ ಜಾರಿಗೊಳಿಸಬೇಕು.
5) ಈಗಾಗಲೇ ಗುತ್ತಿಗೆ ಆಧಾರಿತ ಕಾರ್ಮಿಕರಾಗಿ ದುಡಿಯುವವರನ್ನು ಮೊದಲು ಆದ್ಯತೆಯ ಮೇರೆ ಖಾಯಂ ಮಾಡಬೇಕು ನಂತರ ನೇರನೇಮಕಾತಿಗೆ ಮುಂದಾಗುವುದು. ಕಂದಾಯ ಇಲಾಖೆಯಲ್ಲಿರುವ ಗ್ರಾಮ ಸಹಾಯಕರುಗಳನ್ನು (ಉಗ್ರಾಣಿಗಳು) ಸರ್ಕಾರಿ ನೌಕರರೆಂದು ಪರಿಗಣಿಸಿ ಅವರಿಗೆ ಪಿಂಚಣಿ ಇತ್ಯಾದಿ ಸೌಲಭ್ಯ ಸಿಗುವಂತೆ ಮಾಡಿ.
6) ಕಾರ್ಮಿಕ ಸಂಘಗಳ ಕಡ್ಡಾಯ ಶಾಸನಾತ್ಮಕ ಮಾನ್ಯತೆಗೆ ಶಾಸನ ರೂಪಿಸಿ ಜಾರಿಗೊಳಿಸಬೇಕು. ಎಲ್ಲಾ ಜಿಲ್ಲೆಗಳಲ್ಲೂ ಕಾರ್ಮಿಕ ನ್ಯಾಯಾಲಯಗಳನ್ನು ಸ್ಥಾಪಿಸಬೇಕು.
7) ಪಶ್ಚಿಮ ಬಂಗಾಳ ಮಾದರಿಯಲ್ಲಿ "ಅಸಂಘಟಿತ ಕಾರ್ಮಿಕರಿಗೆ ಭವಿಷ್ಯ ನಿಧಿ ಶಾಸನ" ರೂಪಿಸಿ ಜಾರಿಗೊಳಿಸಬೇಕು. ರಾಜ್ಯ ಬಜೆಟ್ ನಲ್ಲಿ ನಿಧಿ ಮೀಸಲಿರಿಸಿ, ಕರ್ನಾಟಕ ರಾಜ್ಯ ಸಾಮಾಜಿಕ ಭದ್ರತಾ ನಿಧಿ ಸ್ಥಾಪಿಸಬೇಕು. ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ಹಣ ಬೇರೆ ಕೆಲಸಕ್ಕೆ ವಿನಿಯೋಗವಾಗುವುದು ತಡೆದು, ನ. 27-29 ಕಾರ್ಮಿಕರು ನಡೆಸಿದ ಅಹೋರಾತ್ರಿ ಹೋರಾಟದ ಬೇಡಿಕೆಯಂತೆ ವರ್ಷಗಳಿಂದ ಬಾಕಿ ಇರುವ ಸಮಸ್ಯೆ ಬಗೆಹರಿಸಿ.

– ಯಮುನಾ ಗಾಂವ್ಕರ್





ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ಖಂಡಿಸಿ ಪ್ರತಿಭಟನೆ

ಹಾನಗಲ್ಲ ತಾಲ್ಲೂಕಿನ ಮಾಸನಕಟ್ಟಿ ಗ್ರಾಮದ ಬಾಲಕಿಯ ಮೇಲೆ ನಡೆಸಿದ ಸಾಮೂಹಿಕ ಅತ್ಯಾಚಾರ ಖಂಡಿಸಿ, ಜಿಲ್ಲೆಯಲ್ಲಿ ವಿದ್ಯಾರ್ಥಿನಿಯರ ಮೇಲೆ, ಮಹಿಳೆಯರ ಮೇಲೆ ಹಲ್ಲೆ, ಅತ್ಯಾಚಾರ, ದೌರ್ಜನ್ಯದ ಪ್ರಕರಣಗಳು ಹೆಚ್ಚುತ್ತಿದ್ದು, ಜಿಲ್ಲಾಡಳಿತ ಹಾಗೂ ತಾಲ್ಲೂಕಾಡಳಿ ವಿದ್ಯಾರ್ಥಿನಿಯರಿಗೆ, ಮಹಿಳೆಯರಿಗೆ ರಕ್ಷಣೆ ಒದಗಿಸುವಂತೆ ಆಗ್ರಹಿಸಿ, ಶಾಲಾ-ಕಾಲೇಜು, ಬಸ್ ನಿಲ್ದಾಣಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸವಂತೆ ಹಾಗೂ ಪೋಲಿಸ್ ಸಿಬ್ಬಂದಿಯನ್ನು ಬಸ್ ನಿಲ್ದಾಣ ಮತ್ತು ನಗರ ಪ್ರದೇಶದಿಂದ ದೂರವಿರು ಕಾಲೇಜುಗಳ ಬಳಿ ಗಸ್ತು ಹಾಕುವಂತೆ ಒತ್ತಾಯಿಸಿ ಎಸ್.ಎಫ್.ಐ ಹಾನಗಲ್ಲ ತಾಲೂಕು ಸಮಿತಿಯ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷ ಸುಭಾಸ ಎಂ, ಜಿಲ್ಲಾ ಸಹ ಕಾರ್ಯದರ್ಶಿ ಬಸವರಾಜ ಬೋವಿ, ತಾಲೂಕು ಅಧ್ಯಕ್ಷ ಮಲ್ಲಪ್ಪ ನಾಗರೊಳ್ಳಿ, ಮುಖಂಡರಾದ ವಿದ್ಯಾ, ಪವಿತ್ರಾ, ನಂದಿನಿ, ಮುಜಾಫರ ಹಾಗೂ ಇತರರು ಇದ್ದರು.


ವೈದ್ಯಕೀಯ ಕಾಲೇಜು ಸ್ಥಾಪಿಸಲು ಡಿವೈಎಫ್ಐ ಒತ್ತಾಯ

ಸರ್ಕಾರಿ ಆಸ್ಪತ್ರೆಗಳನ್ನು ಬಲಪಡಿಸಿ, ಖಾಸಗೀ ಆಸ್ಪತ್ರೆಗಳನ್ನು ನಿಯಂತ್ರಿಸಬೇಕು, ಜಿಲ್ಲೆಗೊಂದು ಸರ್ಕಾರೀ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಿ ಎಂದು ಆಗ್ರಹಿಸಿ ಡಿವೈಎಫ್ಐ ರಾಜ್ಯವ್ಯಾಪಿ ಹೋರಾಟಕ್ಕೆ ಕರೆ ನೀಡಿದುದರ ಭಾಗವಾಗಿ ಡಿಸೆಂಬರ್ 4 ರಂದು ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿಯ ವತಿಯಿಂದ ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಜನಸಂಖ್ಯೆಗೆ ಅನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ, ನಗರ ಆರೋಗ್ಯ ಕೇಂದ್ರ, ಸಮುದಾಯ ಆಸ್ಪತ್ರೆಗಳನ್ನು ನಿರ್ಮಾಣ ಮಾಡಬೇಕು. ದ.ಕ.ಜಿಲ್ಲೆಯಲ್ಲಿ ಕೂಡಲೇ ಸರ್ಕಾರಿ ವೈದ್ಯಕೀಯ ಕಾಲೇಜು ಆರಂಭಿಸಬೇಕು ಎಂದು ಆಗ್ರಹಿಸಲಾಯಿತು. ಖಾಸಗಿ ವೈದ್ಯಕೀಯ ಕಾಲೇಜುಗಳು ಹಲವಾರು ಇದ್ದರೂ, ಅವುಗಳ ಕೋಟಿ ರೂಪಾಯಿಗಳ ಶುಲ್ಕ ಭರಿಸಲಾಗದೆ, ಬಡವರ ಮಕ್ಕಳ ವೈದ್ಯರಾಗುವ ಕನಸು ನುಚ್ಚುನೂರಾಗಿದೆ. ಕೋಟ್ಯಾಂತರ ವ್ಯಯಿಸಿ ವೈದ್ಯರಾದವರು ರೋಗಿಗಳಿಂದ ವಿಪರೀತ ಶುಲ್ಕ ವಸೂಲಿ ಮಾಡುವ ಮೂಲಕ ಸುಲಿಗೆ ಮಾಡುತ್ತಿದ್ದಾರೆ. ಬಡವರ ಮಕ್ಕಳೂ ವೈದ್ಯರಾಗಲು ಸರಕಾರೀ ವೈದ್ಯಕೀಯ ಕಾಲೇಜು ಸ್ಥಾಪನೆಯೊಂದೇ ದಾರಿ ಎಂಬುದಾಗಿ ಪ್ರತಿಭಟನಾಕಾರರು ಆಗ್ರಹಿಸಿದರು.

ಖಾಸಗಿ ಆಸ್ಪತ್ರೆಗಳು ಮತ್ತು ಖಾಸಗಿ ವೈದ್ಯರ ಪ್ರಭಾವಕ್ಕೆ ಒಳಗಾಗಿ, ಅವರ ತಾಳಕ್ಕೆ ತಕ್ಕಂತೆ ಕುಣಿಯುವ ಜನಪ್ರತಿನಿಧಿಗಳಿಂದಾಗಿ ಜಿಲ್ಲೆಗೆ ಸರಕಾರಿ ವೈದ್ಯಕೀಯ ಕಾಲೇಜು ಒಂದು ಮರೀಚಿಕೆಯಾಗಿದೆ. ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಹೇಳಿದರು. ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಬಜಾಲ್, ಕೋಶಾಧಿಕಾರಿ ಮನೋಜ್ ವಾಮಂಜೂರು ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಡಿವೈಎಫ್ಐ ಜಿಲ್ಲಾ ಸಮಿತಿ ರಫೀಕ್ ಹರೇಕಳ, ನವೀನ್ ಕೊಂಚಾಡಿ, ಸಾದಿಕ್ ಕಣ್ಣೂರು, ಎಸ್ಎಫ್ಐನ ಕಾರ್ಯದರ್ಶಿ ಮಾಧುರಿ ಬೋಳಾರ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ರಾಜ್ಯದ ಹಲವು ಜಿಲ್ಲೆಗಳಿಂದ ಇಂತಹ ಪ್ರತಿಭಟನೆಗಳು ನಡೆದಿರುವ ವರದಿಯಾಗಿದೆ.



ಹುಣಸೂರಿನಲ್ಲಿ ಕೋಮುಗಲಭೆ ಸೃಷ್ಟಿಸಲು ಪ್ರಯತ್ನ

ಮೈಸೂರು ಜಿಲ್ಲೆಯ ಹುಣಸೂರು ತಾಲೂಕು ಹನುಮ ಜಯಂತಿಯ ಗಲಭೆಯಿಂದಾಗಿ ಇಂದು ಸುದ್ದಿಯಲ್ಲಿದೆ. ಬಿಜೆಪಿ ಹಾಗೂ ಸಂಘಪರಿವಾರದ ಕೋಮುವಾದಿ ಶಕ್ತಿಗಳು ಹನುಮ ಜಯಂತಿಯ ಹೆಸರಿನಲ್ಲಿ ಕೋಮು ವಿಷಬೀಜ ಬಿತ್ತಿ ತಮ್ಮ ರಾಜಕೀಯ ಹಿತ ಸಾಧಿಸಲು ಹೋರಟ ಪರಿಣಾಮವೇ ಈ ಗಲಭೆಯಾಗಲು ಕಾರಣವಾಗಿದೆ. ಇದರಿಂದಾಗಿ ಇತ್ತೀಚಿನ ವರ್ಷದವರೆಗೆ ಪರಸ್ಪರ ಶಾಂತಿ, ಸೌಹಾರ್ದತೆಯಿಂದ ಬದುಕುತ್ತಿದ್ದ ಜನ ಸಮುದಾಯ ಈ ಗಲಭೆಯಿಂದಾಗಿ ಪರಸ್ಪರ ದ್ವೇಷ, ಅಸೂಯೆಯಿಂದ ಪೋಲಿಸರ ಸರ್ಪಗಾವಲಿನಲ್ಲಿ ಉಸಿರಾಡುವಂತಾಗಿದೆ.

– ಜಗದೀಶ್ ಸೂರ್ಯ–

ಸಂಸದ ಪ್ರತಾಪ ಸಿಂಹ ನೇತೃತ್ವದಲ್ಲಿ ಹನುಮ ಜಯಂತಿ ಅಚರಣಾ ಸಮಿತಿ ದಿನಾಂಕ 1.12.17 ರಿಂದ 3.12.17 ರವರೆಗೆ ಹನುಮ ಜಯಂತಿ ಆಚರಿಸಲು ಅನುಮತಿ ಕೋರಿದ್ದರು. 1.12.17 ರಂದು ಹನುಮ ಮೂರ್ತಿಯನ್ನು ಪಟ್ಟಣದ ಮುನೇಶ್ವರ ಕಾವಲು ಮೈದಾನದಲ್ಲಿ ಪ್ರತಿಷ್ಠಾಪಿಸಿ 3.12.17 ರಂದು ಮೂರ್ತಿ ಮೆರವಣಿಗೆ ನಡೆಸಿ ಹನುಮ ಜಯಂತಿ ಆಚರಿಸಲು ಯೋಜಿಸಿದ್ದರು.

ಗಲಭೆಗೆ ಸ್ಕೆಚ್

ಆದರೆ ಕಳೆದ ಎರಡು ವರ್ಷಗಳ ಹಿಂದೆ ಇದೇ ಹನುಮ ಜಯಂತಿ ನಡೆಸುವ ಸಂಧರ್ಭದಲ್ಲಿ ನಡೆದ ಕೋಮುಗಲಭೆಯಿಂದಾಗಿ ಪಟ್ಟಣದ ಪ್ರಮುಖ ರಸ್ತೆಗಳಾದ ಜೆ.ಎಲ್.ಬಿ ರಸ್ತೆ, ಬಜಾರ್ ರಸ್ತೆ ಹಾಗೂ ಕಾರ್ಖಾನೆ ರಸ್ತೆ ಗಳಲ್ಲಿ ಕನ್ನಡ ರಾಜ್ಯೋತ್ಸವದ ಮೆರವಣಿಗೆ ಸೇರಿದಂತೆ ಎಲ್ಲಾ ಮೆರವಣಿಗೆಗಳನ್ನು ತಾತ್ಕಾಲಿಕವಾಗಿ ಎಲ್ಲಾ ಪಕ್ಷ ಹಾಗೂ ಸಂಘಟನೆಗಳ ಸಭೆ ನಡೆಸಿ ನಿರ್ಬಂದಿಸಲಾಗಿತ್ತು. ಹಾಗೂ ಕೋಮು ಘರ್ಷಣೆಯ ಹಿನ್ನೆಲೆಯಲ್ಲಿ ಮುಂಜಾಗ್ರತೆಯ ಕ್ರಮವಾಗಿ ಕಳೆದ ವರ್ಷವೂ ಈ 3 ರಸ್ತೆಗಳ ಮೇಲಿನ ನಿರ್ಬಂದವನ್ನು ಮುಂದುವರೆಸಲಾಗಿತ್ತು. ಹಾಗೂ ಈದ್ ಮಿಲಾದ್ ಮೆರವಣಿಗೆಗೆ ಪಟ್ಟಣದ ಶಬ್ಬಿರ್ ನಗರದಿಂದ ಮೆರವಣಿಗೆ ಹೊರಟು ಕಲ್ಪತರು ವೃತ್ತದ ಮೂಲಕ ಈದ್ಗಾ ಮೈದಾನಕ್ಕೆ ತೆರಳುವುದು ಹಾಗೂ ಹನುಮ ಜಯಂತಿಯ ಮೆರವಣಿಗೆ ಮಂಜುನಾಥ ದೇವಸ್ಥಾನದಿಂದ ಹೊರಟು ಕಲ್ಪತರು ವೃತ್ತ ಹಾಗೂ ನಗರ ಸಭೆ ಮೈದಾನದವರೆಗೆ ನಡೆಸಲು ಸೂಚಿಸಿ ಜಿಲ್ಲಾಡಳಿತ ಆದೇಶ ಮಾಡಿತು. ಈ ಆದೇಶದಂತೆ ಕಳೆದ ವರ್ಷವೂ ಜಿಲ್ಲಾಡಳಿತ ಸೂಚಿಸಿದ ಮಾರ್ಗದಲ್ಲೇ ಎರಡು ಮೆರವಣಿಗೆಗಳು ನಡೆದಿದ್ದವು.

ಈ ವರ್ಷವೂ ಮತ್ತೆ ಶಾಂತಿ ಸಭೆ ನಡೆಸಿ ಈ ಮೂರು ರಸ್ತೆಗಳನ್ನು ನಿರ್ಬಂಧಿಸಿ ಕಳೆದ ವರ್ಷ ಸೂಚಿಸಿದ ಮಾರ್ಗದಲ್ಲೇ ಮೆರವಣಿಗೆ ನಡೆಸಲು ಜಿಲಾಡಳಿತ ಆದೇಶ ಮಾಡಿತು. ಈ ಆದೇಶಕ್ಕೆ ಒಪ್ಪಿ 2.12.17 ರಂದು ಈದ್ ಮಿಲಾದ್ ಮೆರವಣಿಗೆ ನಿಗದಿತ ಮಾರ್ಗದಲ್ಲೆ ನಡೆಯಿತು. ಆದರೆ ಸಂಸದರು ಹಾಗೂ ಹನುಮ ಜಯಂತಿ ಆಚರಣಾ ಸಮಿತಿ ಮಾತ್ರ ಈ ಮಾರ್ಗವನ್ನು ಒಪ್ಪದೆ ಕಲ್ಲುಣಿಕೆಯ ರಂಗನಾಥ ಬಡಾವಣೆ ಮೂಲಕ ನಿರ್ಬಂಧಿಸಿದ ಮಾರ್ಗದಲ್ಲೇ ಮೆರಣಿಗೆ ನಡೆಸುತ್ತೇವೆ, ಅನುಮತಿ ನೀಡದಿದ್ದರೆ ನಾವೇ ನುಗ್ಗುತ್ತೇವೆ ಎಂದು ಬೆದರಿಕೆ ಹಾಕಿದರು. ಜಿಲ್ಲಾಡಳಿತ ಹಾಗೂ ಪೋಲಿಸ್ ಇಲಾಖೆ ಸಂಸದರಿಗೆ ಸಾಕಷ್ಟು ಮನವರಿಕೆ ಮಾಡಿದರೂ ಗಲಭೆ ಸೃಷ್ಟಿಸಲೆಂದೇ ತಯಾರಾಗಿದ್ದ ಸಂಸದ ಪ್ರತಾಪ್ ಸಿಂಹ ಒಪ್ಪದೆ ನಿರ್ಬಂಧಿತ ರಸ್ತೆಯಲ್ಲೇ ಮೆರವಣಿಗೆ ನಡೆಸುತ್ತೇವೆಂದು ಸವಾಲು ಹಾಕಿ, ನಂತರ ಕಾರ್ಯಕರ್ತರ ಸಭೆ ನಡೆಸಿ ನಿರ್ಬಂಧಿತ ಮಾರ್ಗದಲ್ಲೇ ಮೆರವಣಿಗೆ ನಡೆಸಲು ಪ್ರಚೋದನೆ ಮಾಡಿದರು. ಜಿಲ್ಲಾಡಳಿತ ತಾನು ಸೂಚಿಸಿದ ಮಾರ್ಗವನ್ನು ಹೊರತು ಪಡಿಸಿ ಪಟ್ಟಣದಾದ್ಯಂತ ನಿಷೇಧಾಜ್ಞೆ ವಿಧಿಸಿತು. ಆದರೂ ಕಲ್ಲುಣಿಕೆಗೆ ಬಂದು



ನಾಯಕ ಹಾಗೂ ಕುರುಬ ಸಮುದಾಯದ ಗರಡಿ ಮನೆಗಳಿಗೆ ಭೇಟಿ ನೀಡಿ ಕಲ್ಲುಣಿಕೆಯಲ್ಲೇ ಮೆರವಣಿಗೆ ನಡೆಸೋಣ/ ಯಾರು ಬಂದು ತಡೆಯುತ್ತಾರೋ. ನಾನು ನೋಡುತ್ತೇನೆ, ನಿಮ್ಮೊಂದಿಗೆ ನಾನಿರುತ್ತೇನೆಂದು ಪ್ರಚೋದನೆ ಮಾಡಿದರು.

ಅದರಂತೆ 3.12.14 ರಂದು ಹನುಮ ಮೆರವಣಿಗೆ ನಡೆಸಲು ಸಿದ್ಧತೆ ಮಾಡಿದ್ದರು. ಹೊರಗಿನ ವ್ಯಕ್ತಿಗಳು ಈ ಮೆರವಣಿಗೆಯಲ್ಲಿ ಭಾಗವಹಿಸದಂತೆ ಆಡಳಿತ ನಿರ್ಬಂಧಿಸಿತ್ತು. ಅದರ ಭಾಗವಾಗಿ ಬಿಳಿಕೆರೆ ಗ್ರಾಮದ ಬಳಿ ಪೋಲಿಸರು ಬ್ಯಾರಿಕೇಡ್‌ಗಳನ್ನು ಹಾಕಿ ತಪಾಸಣೆ ನಡೆಸುತ್ತಿರುವಾಗ ಈ ಮೆರವಣಿಗೆಗೆ ಭಾಗವಹಿಸಲು ಮೈಸೂರಿನಿಂದ ಬರುತ್ತಿದ್ದ ಸಂಸದ ಪ್ರತಾಪ ಸಿಂಹನನ್ನ ತಡೆದು ಕಲ್ಲುಣಿಕೆಯಿಂದ ಮೆರವಣಿಗೆ ನಡೆಸದಂತೆ ಮನವಿ ಮಾಡಿ, ನಡೆಸಿದರೆ ಬಂಧಿಸುವುದಾಗಿ ತಿಳಿಸಿದರೂ, ಸಂಸದ ಪ್ರತಾಪ ಸಿಂಹ ಮಾತ್ರ ಕಲ್ಲುಣಿಕೆಯಲ್ಲೆ ಮೆರವಣಿಗೆ ನಡೆಸುವುದಾಗಿ ತಿಳಿಸಿ, ನನ್ನನು ತಡೆಯಲು ನೀವ್ಯಾರು ಎಂದು ಪೋಲಿಸರಿಗೆ ಪ್ರಶ್ನಿಸಿದಾಗ ಪೋಲಿಸರು ಬಂಧಿಸಲು ಮುಂದಾದರು. ಆಗ ಪ್ರತಾಪ ಸಿಂಹ ತಾನೇ ಪೋಲಿಸ್ ಬ್ಯಾರಿಕೇಡ್‌ಗಳನ್ನು ಸರಿಸಲು ಮುಂದಾಗಿ ಚಾಲಕನನ್ನು ಕೆಳಗಿಳಿಸಿ, ತಾನೇ ಕಾರನ್ನು ಚಲಾಯಿಸಿ ಬ್ಯಾರಿಕೇಡ್‌ಗೆ ಡಿಕ್ಕಿ ಮಾಡಿ ಪಕ್ಕದಲ್ಲಿ ನಿಂತಿದ್ದ ಹುಣಸೂರಿನ ತಹಸಿಲ್ದಾರ್ ಹಾಗೂ ಮಹಿಳಾ ಪೋಲಿಸ್ ಪೇದೆಗೆ ತಾಗುವಂತೆ ವೇಗವಾಗಿ ಕಾರು ಚಲಾಯಿಸಿಕೊಂಡು ಹೋದರು. ಹುಣಸೂರು ಪಟ್ಟಣಕ್ಕೆ ಬಂದಾಗ ಇಲ್ಲೂ ಸಹ ಪೋಲಿಸರು ಕಲ್ಲುಣಿಕೆಯಿಂದ ಮೆರವಣಿಗೆ ಆರಂಭಿಸದಂತೆ ತಿಳಿಸಿದರೂ ತಮ್ಮ ದರ್ಪವನ್ನು ಮುಂದುವರೆಸಿದಾಗ, ಪೋಲಿಸರು ಬಂಧಿಸಿದರು. ಇದರಿಂದಾಗಿ ಸಂಸದನನು ಬಿಡುಗಡೆ ಮಾಡಲು ಕಾರ್ಯಕರ್ತರು ಪೋಲಿಸರ ಮೇಲೆ ಕಲ್ಲು ತೂರಿದಾಗ ಪೋಲಿಸರು ಲಾಠಿ ಚಾರ್ಜ್ ಮಾಡಿ ಗುಂಪನ್ನು ಚದುರಿಸಿ 50 ಜನರನ್ನು ಬಂಧಿಸಿದರು. ನಂತರ ಅನಾಥವಾಗಿದ್ದ ಹನುಮ ಮೂರ್ತಿಯನ್ನು ತಾಲೂಕು ಆಡಳಿತ



ಸಿಬ್ಬಂದಿ ಹಾಗೂ ಸ್ಥಳೀಯರ ಸಹಕಾರದೊಂದಿಗೆ ನಗರ ಸಭೆಯ ಮೈದಾನದಿಂದ ತೆರವುಗೊಳಿಸಿದರು.

3 ಪ್ರಮುಖ ರಸ್ತೆಗಳಲ್ಲಿ ನಿರ್ಬಂಧ ಏಕೆ?

ಕಳೆದ 22 ವರ್ಷದಿಂದ ಹನುಮ ಜಯಂತಿಯನ್ನು ಸರಳವಾಗಿ ಆಚರಿಸಲಾಗುತ್ತಿತ್ತು. ಇದರ ನೇತೃತ್ವವನ್ನು ಸಂಘ ಪರಿವಾರದ ವೆಂಕಟರಮಣ ದಾಸ್ ಎಂಬುವವನು ವಹಿಸಿದ್ದನು. ಆದರೆ ಪ್ರತಾಪ ಸಿಂಹ ಸಂಸದನಾದ ನಂತರ 2015ರಲ್ಲಿ ಈ ಹನುಮ ಜಯಂತಿ ಆಚರಣೆಯನ್ನು ಅದ್ದೂರಿಯಾಗಿ ಆಚರಣೆ ಮಾಡಲು ಹಾಗೂ ಕೋಮುಗಲಭೆ ಸೃಷ್ಟಿಸಲು ಈದ್ ಮಿಲಾದ್ ಹಿಂದಿನ ದಿನ ಅಥವ ಮಾರನೆಯ ದಿನವೇ ಆಚರಣೆ ಮಾಡಲು ಆರಂಭಿಸಿದರು. 2015 ಡಿಸಂಬರ್ 23 ರಂದು ಪಟ್ಟಣದಾದ್ಯಂತ ನಗರ ಸಭೆಯ ಅನುಮತಿ ಪಡೆಯದೆ ಕೇಸರಿ ಬ್ಯಾನರ್, ಬಾವುಟ ಹಾಗೂ ಬಂಟಿಂಗ್ಸ್ ಅನ್ನು ದೇವಸ್ಥಾನ, ಮಸೀದಿ ಮುಂದೆ ರಸ್ತೆ ಮನೆಗಳ ಮೇಲೆ ಬಲವಂತವಾಗಿ ಹಾಕಲಾಗಿತ್ತು. ಗಲಭೆ ನಡೆಸಲು ಮಂಗಳೂರು ಹಾಗೂ ಕೊಡಗಿನಿಂದ ಸಂಘ ಪರಿವಾರದ ಕಾರ್ಯಕರ್ತರನ್ನು ಕರೆಸಲಾಗಿತ್ತು. ಡಿಜೆ ಸೌಂಡ್ಸ್ ಅಳವಡಿಸಿಕೊಂಡು ಜೋರು ಸದ್ದು ಮಾಡುತ್ತ ಮೆರವಣಿಗೆ ನಡೆಸಲಾಗಿತ್ತು. ಕಲ್ಲುಣಿಕೆ ದಾಟಿ ಸೇತುವೆ ರಸ್ತೆಗೆ ಬಂದರೆ ಅಲ್ಲಿ ಮಸೀದಿ ಇದೆ. ಜೆಎಲ್‌ಬಿ ರಸ್ತೆಯಲ್ಲಿ ಸಂಘಪರಿವಾರ ಕಚೇರಿ ಇದೆ. ಬಜಾರ್ ರಸ್ತೆ ಹಾಗೂ ಕಾರ್ಖಾನೆ ರಸ್ತೆಗಳಲ್ಲಿ ಬಹುತೇಕ ಮುಸ್ಲಿಮರ ಅಂಗಡಿ ಮುಗ್ಗಟ್ಟುಗಳಿವೆ. ಈ ರಸ್ತೆಯಲ್ಲಿ ಮೆರವಣಿಗೆ ನಡೆಸಿ ಜೋರು ಶಬ್ದ ಮಾಡಿ ಪ್ರಚೋದನಾತ್ಮಕ ಘೋಷಣೆ ಕೂಗಲಾಗಿತ್ತು.

ಮಾರನೆಯ ದಿನ ಮುಸ್ಲಿಮರು ಈದ್ ಮಿಲಾದ್ ಮೆರವಣಿಗೆಯನ್ನು ನಡೆಸಲು ತಯಾರಿ ನಡೆಸಿ ಸಂಘಪರಿವಾರದವರು ಕಟ್ಟಿದಂತೆ ಬ್ಯಾನರ್, ಬಾವುಟ ಮತ್ತು ಬಂಟಿಂಗ್ಸ್ ಕಟ್ಟಲಾಗಿತ್ತು. ಈದ್ ಮಿಲಾದ್ ಮೆರವಣಿಗೆಯ ಅಂಕಾರದ ನೇತೃತ್ವವನ್ನು ಎಸ್‌ಡಿಪಿಐ ಸಂಘಟನೆ ವಹಿಸಿ ಇವರೂ ಕೂಡ ಮಂಗಳೂರು, ಮೈಸೂರಿನಿಂದ ಕಾರ್ಯರ್ಕತರನ್ನು ಕರೆಸಿಕೊಂಡಿದ್ದರು. ಪೋಲಿಸ್ ಇಲಾಖೆ ನಿರ್ದಿಷ್ಟ ಕಡೆ ಹಾಗೂ ಒಂದೊಂದು ದಿನ ಮಾತ್ರ ಬಂಟಿಂಗ್ಸ್ ಕಟ್ಟಲು ತಿಳಿಸಿದ್ದರು. ಆದರೆ ಸಂಘಪರಿವಾರದವರು ಒಂದು ರಸ್ತೆಯಲ್ಲಿ ಮಾತ್ರ ಬಂಟಿಂಗ್ಸ್ ತೆಗೆದಿರಲಿಲ್ಲ. ಮುಸ್ಲಿಂ ಯುವಕರು ಬ್ಯಾನರ್ ಬಾವುಟ ಕಟ್ಟುವಾಗ ಕೆಲವು ಕಿಡಿಗೇಡಿಗಳು ಕೇಸರಿ ಬಾವುಟವನ್ನು ಕಿತ್ತು ಹಾಕಿದರು. ಈ ಸಮಯಕ್ಕೆ ಕಾದಂತಿದ್ದ ಸಂಘಪರಿವಾರದ ಕಿಡಿಗೇಡಿಗಳು ಹಸಿರು ಬಾವುಟಗಳನ್ನು ಕೀಳತೊಡಗಿದರು. ಹೀಗೆ ಆರಂಭವಾದ ಜಗಳ ಪಟ್ಟಣದಾದ್ಯಂತ ಹಬ್ಬಿತು. ಆಗ ಸ್ಥಳಕ್ಕೆ ಬಂದ ಪ್ರತಾಪ ಸಿಂಹ ಅಮಾಯಕ ಯುವಕರಿಗೆ ಪ್ರಚೋದನೆ ನೀಡಿದ್ದು ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲು ಕಾರಣವಾಯಿತು. ಇದರಿಂದಾಗಿ ಪಟ್ಟಣದಾದ್ಯಂತ ನಿಷೇಧಾಜ್ಞೆ ಹೊರಡಿಸಲಾಯಿತು. ಈದ್ ಮೆರವಣಿಗೆಯನ್ನು ನಿಲ್ಲಿಸಲಾಯಿತು ಇದರಿಂದ ಎಸ್‌ಡಿಪಿಐ ಕಾರ್ಯರ್ಕರು ಪ್ರತಿಭಟನೆ ನಡೆಸಿ ಮೆರವಣಿಗೆ ನಡೆಸಲು ಮುಂದಾದರು. ಆಗ ಪೋಲಿಸರು ಲಾಟಿ ಚಾರ್ಜ್ ಮಾಡಿ ಹಲವು ಜನ ಸಂಘಪರಿವಾರದ ಹಾಗೂ ಎಸ್‌ಡಿಪಿಐ ಕಾರ್ಯಕರ್ತರನ್ನು ಬಂಧಿಸಿ 160 ಜನರ ಮೇಲಿ ಕೇಸು ದಾಖಲಿಸಿದರು. ಆದರೂ ಗಲಭೆ ಮುಂದುವರೆದ ಪರಿಣಾಮ 5 ದಿನಗಳಕಾಲ ನಿಷೇಧಾಜ್ಞೆ ಮುಂದುವರೆಸಲಾಗಿತ್ತು .ಈ ಗಲಭೆಯ ಕಾರಣದಿಂದಾಗಿ ಈ ಮೂರು ರಸ್ತೆಗಳನ್ನು ಸೂಕ್ಷ್ಮ ಪ್ರದೇಶವೆಂದು ಘೋಷಿಸಿ ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ.

ಅಮಿತ್ ಶಾ ಆಜ್ಞೆ ಪಾಲಿಸಲು ಹುಣಸೂರು ಗಲಭೆ?

ಹುಣಸೂರು ಮೈಸೂರು, ಮಡಿಕೇರಿ ಮತ್ತು ಮಂಗಳೂರನ್ನು ಸಂಪರ್ಕಿಸುವ ಪಟ್ಟಣವಾಗಿದೆ. ಹುಣಸೂರು ಕಳೆದ ನಂತರ ಸಿಗುವ ಮತ್ತೊಂದು ಪಟ್ಟಣ ಪಿರಿಯಾಪಟ್ಟಣದಲ್ಲೂ ಸಂಸದ ಪ್ರತಾಪ ಸಿಂಹ ರಸ್ತೆ ಅಪಘಾತದಲ್ಲಿ ಮೃತನಾದ ಬಿಜೆಪಿ ಕಾರ್ಯರ್ಕತನ ಸಾವಲ್ಲೂ ಕೋಮುಗಲಭೆ ನಡೆಸಲು ಯತ್ನಿಸಿದಾಗ ಎಸ್ಪಿ ರವಿ ಚೆನ್ನಣ್ಣನವರ ಮಧ್ಯ ಪ್ರವೇಶದಿಂದ ವಿಫಲವಾಗಿತ್ತು. ಮೈಸೂರಿನಲ್ಲೂ ಬಿಜೆಪಿ ಕಾರ್ಯರ್ಕರ್ತ ರವಿ ಕೊಲೆಯಲ್ಲೂ ಗಲಭೆ ನಡೆಸಲಾಗಿತ್ತು. ಮೈಸೂರು, ಕೊಡಗು, ಮಂಗಳೂರು ಅಕ್ಕ ಪಕ್ಕ ಇರುವುದರಿಂದ ಈ ಪ್ರದೇಶದಲ್ಲಿ ಕೋಮುಗಲಭೆ ನಡೆಸಿ ರಾಜಕಿಯ ಹಿಡಿತ ಸಾಧಿಸುವ ಹುನ್ನಾರ ಬಿಜೆಪಿಯದ್ದು. ಇದಕ್ಕಾಗಿಯೇ ಹುಣಸೂರು ಮೈಸೂರು, ಕೊಡಗು, ಮಂಗಳೂರಿನ ನಡುವೆ ಇರುವ ಆಯಕಟ್ಟಿನ ಜಾಗವಾಗಿರುವುದರಿಂದ ಇಲ್ಲಿ ಕೋಮುಗಲಭೆ ನಿರಂತರವಾಗಿರುವಂತೆ ನೋಡಿಕೊಳ್ಳಲಾಗುತ್ತಿದೆ. ಈಗ ಹುಣಸೂರು ರಾಜ್ಯದಲ್ಲಿ 3 ನೇ ಸೂಕ್ಷ್ಮ ಪ್ರದೇಶವಾಗಿದೆ.

ಹನುಮ ಜಯಂತಿಯ ಲಾಠಿ ಚಾರ್ಜ್ ಮುನ್ನಾ 30.11.17 ರಂದು ಫೇಸ್‌ಬುಕ್ ನಲ್ಲಿ ನೇರ ಪ್ರಸಾರದಲ್ಲಿ ಬಂದು ಬಿಜೆಪಿಯ ರಾಷ್ಟ್ರಾಧ್ಯಕ್ಷ ಅಮಿತ್ ಷಾ ಟಿಯರ್ ಗ್ಯಾಸ್, ಲಾಠಿ ಚಾರ್ಜ್‌ನಂತಹ ಉಗ್ರ ಹೋರಾಟ ನಡೆಸಬೇಕೆಂದು ಹೇಳಿದ್ದು, ಮುಂದಿನ ದಿನಗಳಲ್ಲಿ ಲಾಠಿ ಚಾರ್ಜ್‌ನಂತಹ ಹೋರಾಟ ನಡೆಸುತ್ತೇನೆಂದು ಸ್ವತಹ ಹೇಳಿಕೆ ನೀಡಿರುವುದು ಹಾಗೂ 3.12.17ರಂದು ಮೆರವಣಿಗೆ ಸಂಭಂದ ಜಾಠಿ ಚಾರ್ಜ್ ನಡೆದಿರುವುದು ಬಿಜೆಪಿಯು ಕೋಮುಗಲಭೆ ಸೃಷ್ಟಿಸಿ ಅಶಾಂತಿ ಸೃಷ್ಟಿಸುವ ಹುನ್ನಾರ ಬಯಲಾಗಿದೆ.

ಜಿಲ್ಲೆಯಲ್ಲಿ ಬರ, ರೈತರ ಆತ್ಮಹತ್ಯೆ ನಡೆದಾಗ ಹಾಗೂ ಅಭಿವೃದ್ಧಿ ವಿಷಯ ಬಂದಾಗ ನಾಪತ್ತೆಯಾಗುವ ಸಂಸದ ಪ್ರತಾಪ ಸಿಂಹ ಕೋಮುಗಲಭೆಯ ವಿಷಯ ಹಾಗೂ ಮೋದಿಯ ಸಮರ್ಥನೆ ಬಂದಾಗ ಮಾತ್ರ ಪ್ರತ್ಯಕ್ಷರಾಗುತ್ತಾರೆ. ಸಂಸದ ಪ್ರತಾಪ ಸಿಂಹನ ಪ್ರವೇಶದಿಂದಾಗಿ ಮಾಜಿ ಮುಖ್ಯಮಂತ್ರಿ ದೇವರಾಜು ಅರಸ್‌ರಂತಹ ರಾಜಕಾರಣಿಗಳಿದ್ದ ಹಾಗೂ ಶಾಂತಿ ಸಾಮರಸ್ಯಕ್ಕೆ ಹೆಸರಾಗಿದ್ದ ಹುಣಸೂರು ಕೋಮುಗಲಭೆಯ ಪ್ರದೇಶವೆಂಬ ಕಪ್ಪು ಹಣೆಪಟ್ಟಿಯನ್ನು ಕಟ್ಟಿಕೊಂಡಿದೆ.

ಸಿಪಿಐ(ಎಂ) ಜಿಲ್ಲಾ ಸಮ್ಮೇಳನಗಳು

ಮಂಡ್ಯ	: ಡಿಸೆಂಬರ್ 12–13, ಮಳವಳ್ಳಿ
ಬೆಂಗಳೂರು ದಕ್ಷಿಣ	: ಡಿಸೆಂಬರ್ 15–17, ಬೆಂಗಳೂರು.
ಮೈಸೂರು	: ಡಿಸೆಂಬರ್ 16–17, ಹುಣಸೂರು
ಹಾಸನ	: ಡಿಸೆಂಬರ್ 16–17, ಸಕಲೇಶಪುರ.
ದಕ್ಷಿಣ ಕನ್ನಡ	: ಡಿಸೆಂಬರ್ 17–18, ಮಂಗಳೂರು.
ಉತ್ತರ ಕನ್ನಡ	: ಡಿಸೆಂಬರ್ 17–18, ದಾಂಡೇಲಿ.
ರಾಯಚೂರು	: ಡಿಸೆಂಬರ್ 23–24, ರಾಯಚೂರು.
ದಾವಣಗೆರೆ	: ಡಿಸೆಂಬರ್ 24–25, ದಾವಣಗೆರೆ.
ಉಡುಪಿ	: ಡಿಸೆಂಬರ್ 24–26, ಬೈಂದೂರು.
ಧಾರವಾಡ	: ಡಿಸೆಂಬರ್ 25–26, ಗಜೇಂದ್ರಗಢ
ಬೆಳಗಾವಿ	: ಡಿಸೆಂಬರ್ 23–24, ರಾಮದುರ್ಗ
ಕೋಲಾರ	: ಡಿಸೆಂಬರ್ 29–30, ಕೋಲಾರ.

ಮಹಿಳೆಯರ ವಿರುದ್ಧದ ಅಪರಾಧಗಳಿಗೆ ತಡೆ: ರಾಜಕೀಯ ಇಚ್ಛಾಶಕ್ತಿ ಮುಖ್ಯ ಪ್ರಶ್ನೆ

*** ಪ್ರಕಾಶ್ ಕಾರಟ್**

ಮಹಿಳೆಯರು ಮತ್ತು ಮಕ್ಕಳಿಗೆ ಒಂದು ಸುರಕ್ಷಿತ ಹಾಗೂ ಸುಭದ್ರ ವಾತಾವರಣವನ್ನು ಕಲ್ಪಿಸುವಲ್ಲಿ ವ್ಯಾಪಕ ವೈಫಲ್ಯವನ್ನು ಎನ್‌ಸಿಆರ್‌ಬಿ ಅಂಕಿಅಂಶಗಳು ಎತ್ತಿ ತೋರಿಸುತ್ತವೆ. ಆದರೆ ಇಲ್ಲಿ ಮಹಿಳೆಯರ ವಿರುದ್ಧ ನಡೆಯುವ ಅಪರಾಧಗಳನ್ನು ಎದುರಿಸುವಲ್ಲಿ ರಾಜಕೀಯ ಇಚ್ಛಾಶಕ್ತಿಯ ಅಭಾವವೇ ಮುಖ್ಯ ಪ್ರಶ್ನೆ. ಸರಕಾರ ಮತ್ತು ಕಾನೂನು ಜಾರಿ ಸಂಸ್ಥೆಗಳು ಮಹಿಳೆಯರು ಮತ್ತು ಮಕ್ಕಳ ವಿರುದ್ಧದ ಅಪರಾಧಗಳನ್ನು ಎದುರಿಸಲು ಆದ್ಯತೆ ನೀಡಬೇಕು.





ರಾಷ್ಟ್ರೀಯ ಅಪರಾಧ ದಾಖಲೆಗಳ ಸಂಸ್ಥೆ (ಎನ್‌ಸಿಆರ್‌ಬಿ) ಪ್ರಕಟಿಸಿರುವ ಇತ್ತೀಚಿನ ವರದಿ ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು ಹಾಗೂ ಮಕ್ಕಳ ಮೇಲೆ ಅಪಾಯಕಾರಿ ಪ್ರಮಾಣದಲ್ಲಿ ಹೆಚ್ಚುತ್ತಿರುವ ಲೈಂಗಿಕ ದೌರ್ಜನ್ಯಗಳ ಮೇಲೆ ಬೆಳಕು ಚೆಲ್ಲಿದೆ. 2016ರಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳ 3.4 ಲಕ್ಷ ಪ್ರಕರಣಗಳು ದಾಖಲಾಗಿವೆ. ಇದು ಹಿಂದಿನ ವರ್ಷಕ್ಕಿಂತ (2015) ಶೇಕಡಾ 2.9ರಷ್ಟು ಹೆಚ್ಚಾಗಿದೆ. ಈ ದೌರ್ಜನ್ಯಗಳ ಪೈಕಿ ಶೇಕಡಾ 32 ಕೌಟುಂಬಿಕ ದೌರ್ಜನ್ಯಗಳು, ಶೇಕಡಾ 25 ಲೈಂಗಿಕ ಕಿರುಕುಳ. 11.5% ಅತ್ಯಾಚಾರಗಳಾಗಿವೆ. ಮಹಿಳೆಯರ ಮೇಲಿನ ದೌರ್ಜನ್ಯಗಳ ಕುರಿತ ಅಂಕಿಅಂಶಗಳು ನೈಜ ಸ್ಥಿತಿಯನ್ನು ಬಿಂಬಿಸುವುದಿಲ್ಲ, ಯಾಕೆಂದರೆ ಅನೇಕ ಪ್ರಕರಣಗಳು ಬೆಳಕಿಗೆ ಬರದೇ ಹೋಗಿರುತ್ತವೆ. ಈಗ ಸಿಕ್ಕಿರುವ ಅಂಕಿಅಂಶಗಳು ಪರಿಸ್ಥಿತಿಯ ಒಂದು ಬೃಹತ್ ನೋಟವನ್ನು ಒದಗಿಸಬಹುದು, ಅಷ್ಟೇ.

ಮಕ್ಕಳ ಮೇಲಿನ ದೌರ್ಜನ್ಯಗಳ ಕುರಿತು ಹೇಳುವುದಾದರೆ, ಕಳೆದ ವರ್ಷ 1.1 ಲಕ್ಷ ಪ್ರಕರಣಗಳು ದಾಖಲಾಗಿವೆ. ಇದು 2015ಕ್ಕಿಂತ 13.6%ದಷ್ಟು ಏರಿಕೆಯನ್ನು ತೋರಿಸುತ್ತದೆ. ಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣಗಳಲ್ಲಿ ಆಘಾತಕಾರಿ ಶೇಕಡಾ 83ರಷ್ಟು ಏರಿಕೆಯಾಗಿದೆ. 2015ರಲ್ಲಿ ಮಕ್ಕಳ ಮೇಲಿನ 10,934 ಪ್ರಕರಣಗಳು ದಾಖಲಾಗಿದ್ದರೆ 2016ರಲ್ಲಿ ಅದು 19.920ಕ್ಕೆ ಏರಿದೆ.

ಮಹಿಳೆಯರು ಮತ್ತು ಮಕ್ಕಳಿಗೆ ಒಂದು ಸುರಕ್ಷಿತ ಹಾಗೂ ಸುಭದ್ರ ವಾತಾವರಣವನ್ನು ಕಲ್ಪಿಸುವಲ್ಲಿ ವ್ಯಾಪಕ ವೈಫಲ್ಯವನ್ನು ಈ ಅಂಕಿಅಂಶಗಳು ಎತ್ತಿ ತೋರಿಸುತ್ತವೆ. ಕಳೆದ ಲೋಕಸಭೆ ಚುನಾವಣೆ ಪ್ರಣಾಳಿಕೆಯಲ್ಲಿ ಬಿಜೆಪಿ ಈ ಬಗ್ಗೆ ಆಶ್ವಾಸನೆ ನೀಡಿತ್ತು. ಈ ಕಳವಳಕಾರಿ ಪರಿಸ್ಥಿತಿಗೆ ಅನೇಕ ಅಂಶಗಳು ಕಾರಣವಾಗಿವೆ.

ಮಹಿಳೆಯರ ಮೇಲಿನ ದೌರ್ಜನ್ಯಗಳ ತಡೆಗಾಗಿ ಮೂಲ ಸೌಕರ್ಯ ಮತ್ತು ವ್ಯವಸ್ಥೆಯನ್ನು ರೂಪಿಸಲು 2015ರಲ್ಲಿ ನಿರ್ಭಯಾ ನಿಧಿಯನ್ನು ಸ್ಥಾಪಿಸಲಾಗಿತ್ತು. ಆ ನಿಧಿಯಲ್ಲಿ ಈಗ 3100 ಕೋಟಿ ರೂಪಾಯಿಗಳಿವೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆಯು ಈ ನಿಧಿಯ ಉಸ್ತುವಾರಿ ಸಂಸ್ಥೆಯಾಗಿದೆ. 2209 ಕೋಟಿ ರೂಪಾಯಿಗಳ ಯೋಜನೆಗಳನ್ನು ರೂಪಿಸಲು ಶಿಫಾರಸು ಮಾಡಿರುವುದಾಗಿ ಈ ಖಾತೆ ಇದೇ ಜುಲೈನಲ್ಲಿ ಹೇಳಿತ್ತು. ಆದರೆ, ನಿಜವಾಗಿ ಬಿಡುಗಡೆ ಮಾಡಿರುವ ಅನುದಾನ ಕೇವಲ 264 ಕೋಟಿ ರೂಪಾಯಿ ಎಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ಕೇಂದ್ರ ಸರಕಾರ ಒಪ್ಪಿಕೊಂಡಿದೆ. ಅದು ಕೇವಲ 8.5% ಆಗುತ್ತದೆ. ಇದಲ್ಲದೆ ಸಂತ್ರಸ್ತರಿಗೆ ಪರಿಹಾರ ನೀಡಲೆಂದು ರಾಜ್ಯಗಳಿಗೆ 200 ಕೋಟಿ ರೂಪಾಯಿಗಳನ್ನು ನಿಗದಿ ಪಡಿಸಲಾಗಿದೆ. ಅಂದರೆ ಒಟ್ಟು ಮೊತ್ತ ಸುಮಾರು 400 ಕೋಟಿ ರೂಪಾಯಿ ಆಗುತ್ತದೆ. ಆದರೆ ಈ ನಿಧಿಗಳನ್ನು ಬಳಸಿರುವ ಬಗ್ಗೆ ಸರಕಾರದ ಬಳಿ ಯಾವುದೇ ವರದಿ ಇಲ್ಲ.

ಸರಕಾರದ ಆದ್ಯತೆಯ ಕೊರತೆಯನ್ನು ಇದು ತೋರಿಸುತ್ತದೆ. ಸರಕಾರದ ಸಾಮಾಜಿಕ ಧೋರಣೆ ಮತ್ತು ಅಧಿಕಾರದಲ್ಲಿರುವವರ ಪ್ರಮುಖ ಸೈದ್ಧಾಂತಿಕ ಧೋರಣೆಯೂ ಇದಕ್ಕೆ ಜವಾಬ್ದಾರಿ. ಅಪರಾಧಗಳನ್ನು ತಡೆದು ಮಹಿಳೆಯರಿಗೆ ರಕ್ಷಣೆ ಕೊಡುವ ಸಲುವಾಗಿನ ಕಾನೂನುಗಳನ್ನು ದುರ್ಬಲಗೊಳಿಸಲಾಗುತ್ತಿದೆ. ಕೌಟುಂಬಿಕ ದೌರ್ಜನ್ಯಗಳಿಗೆ ಸಂಬಂಧಿಸಿದ ಸೆಕ್ಷನ್ 498ಎ ಅನ್ನು ದುರ್ಬಲಗೊಳಿಸಿರುವುದನ್ನು ಇಲ್ಲಿ ಉದಾಹರಿಸಬಹುದು. ಒಂದು ಮಾದರಿ ಹಿಂದೂ ಕುಟುಂಬದಲ್ಲಿ ಒಬ್ಬ ಉತ್ತಮ ಗೃಹಿಣಿಯ ಅತ್ಯುನ್ನತ ಲಕ್ಷಣಗಳ ಕುರಿತ ತತ್ವ ಸಂತ್ರಸ್ತ ಮಹಿಳೆ ತನ್ನ ಮೇಲಿನ ಕೌಟುಂಬಿಕ ದೌರ್ಜನ್ಯದ ಬಗ್ಗೆ ಮೌನವಾಗಿರುವಂತೆ ಒತ್ತಡ ಹೇರುತ್ತದೆ.

ಸಂತ್ರಸ್ತರನ್ನೇ ಅವಮಾನ ಮಾಡುವ ಪ್ರವೃತ್ತಿ ಸಂತ್ರಸ್ತರು ' ಮೌನವಾಗಿರುವುದನ್ನೇ, ಎಲ್ಲವನ್ನೂ ಒಪ್ಪಿಕೊಳ್ಳುವುದನ್ನೇ ಪ್ರೋತ್ಸಾಹಿಸುತ್ತದೆ. ಹಾಗೂ ದಬ್ಬಾಳಿಕೆಯನ್ನು ಮೌನವಾಗಿ ಸಹಿಸುವಂತೆ ಮಾಡುತ್ತದೆ. ಸಾಮಾಜಿಕ ಮತ್ತು ಮೂಲರಚನಾ ಬೆಂಬಲ ಇಲ್ಲದಿರುವುದರಿಂದ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ. ಮಹಿಳೆಯರ ಉಡುಗೆ ತೊಡುಗೆಗಳು, ಅವರ ಓಡಾಟ–ಚಲನವಲನಗಳು ಮತ್ತು ಅವರ ಗೆಳೆಯರ ಬಗ್ಗೆ ಪ್ರಸ್ತಾವಿಸಿ ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಮಹಿಳೆಯರೇ ಕಾರಣ ಎಂದು ರಾಜಕಾರಣಿಗಳು ಹೇಳಿಕೆ ನೀಡುವುದರಿಂದ ಮಹಿಳೆಯರ ಸ್ಥಿತಿ ಅಯೋಮಯವಾಗುತ್ತದೆ. ಮಹಿಳೆ ಅವಮಾನದಿಂದ ಕುಗ್ಗಿ ಹೋಗುವಂತಾಗುತ್ತದೆ ಹಾಗೂ ಇದರಿಂದ ಅಪರಾಧಗಳಿಗೆ ಮತ್ತಷ್ಟು ಪ್ರೋತ್ಸಾಹ ಸಿಗುತ್ತದೆ.

ಅಪ್ರಾಪ್ತ ಬಾಲಕಿಯರು ದೌರ್ಜನ್ಯಕ್ಕೆ ಒಳಗಾಗುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಇದು ಮೌಲ್ಯಗಳ ಅಧಃಪತನವನ್ನು ತೋರಿಸುತ್ತದೆ. ಶಾಲೆಗಳಲ್ಲಿ ಮಕ್ಕಳನ್ನು ದೌರ್ಜನ್ಯಕ್ಕೆ ಒಳಪಡಿಸಿದ ಇತ್ತೀಚಿನ ಪ್ರಕರಣಗಳು ಚಿಂತೆಗೆ ಕಾರಣವಾದ ವಿದ್ಯಮಾನವಾಗಿದೆ.


ಮಹಿಳೆಯರ ಮೇಲಿನ ದೌರ್ಜನ್ಯಗಳ ಬಹುತೇಕ ಎಲ್ಲಾ ವಿಭಾಗಗಳಲ್ಲಿ ಶಿಕ್ಷೆಯಾಗಿರುವ ಪ್ರಮಾಣ ಶೇಕಡಾ 25ಕ್ಕಿಂತ ಕಳಗೆ ಇರುವುದು ಕ್ರಿಮಿನಲ್‌ಗಳಿಗೆ ಪ್ರೋತ್ಸಾಹದಂತೆ ಕೆಲಸ ಮಾಡುತ್ತದೆ. ಕಾನೂನು ಜಾರಿ ಮಾಡುವ ಸಂಸ್ಥೆಗಳು ಮಹಿಳಾ–ಸ್ನೇಹಿಯಾಗಿ ವರ್ತಿಸದಿರುವುದರ ಪರಿಣಾಮವಾಗಿ ಮಹಿಳೆಯರು ದೂರು ಸಲ್ಲಿಸದೆ ದೂರ ಉಳಿಯುತ್ತಾರೆ. ಕಾನೂನು ಪ್ರಕ್ರಿಯೆಯಲ್ಲಿ ಅತಿ ವಿಳಂಬ ಕೂಡ ಅನ್ಯಾಯಕ್ಕೆ ಮತ್ತಷ್ಟು ಇಂಬು ನೀಡುತ್ತದೆ.

ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಮಹಿಳೆಯರು ಹೊಣೆಗಾರರು ಎಂದು ಸಂಸತ್ ಸದಸ್ಯರು ಮತ್ತು ಶಾಸಕರು ದೂರುವುದನ್ನು ಖಂಡಿಸಬೇಕು ಮಾತ್ರವಲ್ಲದೆ ಆ ರೀತಿಯ ಹೇಳಿಕೆ ನೀಡುವವರನ್ನು ಅಂತಹ ಹೇಳಿಕೆಗಳಿಗಾಗಿ ಹೊಣೆ ಮಾಡುವುದೂ ಅಗತ್ಯ.

ಮಹಿಳೆಯರ ವಿರುದ್ಧ ನಡೆಯುವ ಅಪರಾಧಗಳನ್ನು ಎದುರಿಸುವಲ್ಲಿ ರಾಜಕೀಯ ಇಚ್ಛಾಶಕ್ತಿಯ ಅಭಾವವೇ ಮುಖ್ಯ ಪ್ರಶ್ನೆ. ಸರಕಾರ ಮತ್ತು ಕಾನೂನು ಜಾರಿ ಸಂಸ್ಥೆಗಳು ಮಹಿಳೆಯರು ಮತ್ತು ಮಕ್ಕಳ ವಿರುದ್ಧದ ಅಪರಾಧಗಳನ್ನು ಎದುರಿಸಲು ಆದ್ಯತೆ ನೀಡಬೇಕು. ಮಹಿಳೆಯರ ವಿರುದ್ಧ ಅಪಾರಾಧಗಳನ್ನು ತಡೆಯಲು ಮತ್ತು ಸಂತ್ರಸ್ತ ಮಹಿಳೆಯರಿಗೆ ಬೆಂಬಲವಾಗಿ ನಿಲ್ಲಲು ಒಂದು ಬಲಿಷ್ಠ ಮೂಲರಚನೆಯನ್ನು ರೂಪಿಸಬೇಕೆಂಬ 'ವರ್ಮಾ ಸಮಿತಿಯ ಶಿಫಾರಸುಗಳನ್ನು ಸರಕಾರ ಕೈಗೆತ್ತಿಕೊಳ್ಳಬೇಕು ಹಾಗೂ ಅನುಷ್ಠಾನಗೊಳಿಸಬೇಕು. ಲೈಂಗಿಕ ಕಿರುಕುಳಗಳ ವಿರುದ್ಧದ ಕಾನೂನುಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು.

ಅನು: ವಿಶ್ವ

ಡಿಸೆಂಬರ್ 12: 'ಸಾಮರಸ್ಯ ನಡಿಗೆ'



ಡಿಸೆಂಬರ್ 12 ರಂದು ದಕ್ಷಿಣ ಕನ್ನಡ ಜಿಲ್ಲೆಯ ಜಾತ್ಯಾತೀತ ಪಕ್ಷ, ಸಂಘಟನೆಗಳ ಸಹಭಾಗಿತ್ವದಲ್ಲಿ ಫರಂಗಿಪೇಟೆಯಿಂದ ಮಾಣಿಯವರಗೆ "ಸಾಮರಸ್ಯ ನಡಿಗೆ" ಪಾದಯಾತ್ರೆ ನಡೆಯಲಿದೆ.

ಕಳೆದ ವಾರ ಸಾಮರಸ್ಯ ನಡಿಗೆಯ ಪೋಸ್ಟರ್, ಲಾಂಛನ ಬಿಡುಗಡೆಗೆ ಜಂಟಿ ಪತ್ರಿಕಾಗೋಷ್ಟಿ ನಡೆಯಿತು. ದ ಕ ಉಸ್ತುವಾರಿ ಸಚಿವ ಬಿ ರಮಾನಾಥ ರೈಗಳು ಪತ್ರಿಕಾಗೋಷ್ಟಿಯನ್ನುದ್ದೇಶಿಸಿ ಕಾರ್ಯಕ್ರಮದ ವಿವರ ನೀಡಿದರು. ಕಾಂಗ್ರೆಸ್, ಉಭಯ ಕಮ್ಯುನಿಸ್ಟ್ ಪಕ್ಷಗಳು, ದಲಿತ ಸಂಘರ್ಷ ಸಮಿತಿಯ ವಿವಿಧ ಬಣಗಳು, ರೈತ ಸಂಘಟನೆಗಳು, ಹಿಂದುಳಿದ ಸಮುದಾಯದ ಸಂಘಟನೆಗಳು, ತುಳುವ ಸಂಘಟನೆಗಳು, ಸಾಮಾಜಿಕ ಕಾರ್ಯಕರ್ತರು ಸೇರಿದಂತೆ ಜಿಲ್ಲೆಯ ಬಹುತೇಕ ಜಾತ್ಯಾತೀತ, ಜನಪರ ಪಕ್ಷ ಸಂಘಟನೆಗಳ ಮುಖಂಡರು ಪತ್ರಿಕಾಗೋಷ್ಟಿಯಲ್ಲಿ ಭಾಗವಹಿಸಿದ್ದರು.

ಕರಾವಳಿಯಲ್ಲಿ ಹದಗೆಡುತ್ತಲೇ ಸಾಗಿರುವ ಮತೀಯ ಸಂಬಂಧಗಳ ಸಂದರ್ಭದಲ್ಲಿ ಸಾಮರಸ್ಯ ನಡಿಗೆಯ ಹೆಸರಿನಲ್ಲಿ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಪಕ್ಷ, ಸಂಘಟನೆ, ಚಳವಳಿಗಳು ಒಂದೆಡೆ ಸೇರಿದಿರುವುದು ಆಶಾದಾಯಕ ಬೆಳವಣಿಗೆ.

ಡಿಸೆಂಬರ್ 12 ರಂದು ಮಂಗಳೂರಿನ ಫರಂಗಿಪೇಟೆಯಿಂದ ಮಾಣಿಯವರಗೆ ನಡೆಯಲಿರುವ "ಸಾಮರಸ್ಯ ನಡಿಗೆ" ಪಾದಯಾತ್ರೆಯ ಸಿದ್ಧತಾ ಸಭೆ ಪುತ್ತೂರಿನಲ್ಲಿ ಡಿ.7 ರಂದು ಯಶಸ್ವಿಯಾಗಿ ನಡೆಯಿತು. ನೂರಾರು ಜನ ಭಾಗವಹಿಸಿದ್ದರು.



ಸಫ್ವಾನ್ ಅಪಹರಣ, ಕೊಲೆ ಪ್ರಕರಣದ ಸಮಗ್ರ ತನಿಖೆಗೆ ಮನವಿ

ಸಫ್ವಾನ್ ಅಪಹರಣ, ಕೊಲೆ ಪ್ರಕರಣದ ಸಮಗ್ರ ತನಿಖೆಗೆ ಒತ್ತಾಯಿಸಿ, ಪ್ರಕರಣದ ಪ್ರಮುಖ ಆರೋಪಿಗಳಾದ ಎಲ್ಲಾ ಕುಖ್ಯಾತ ಕ್ರಿಮಿನಲ್ ಗಳನ್ನು ತಕ್ಷಣ ಬಂಧಿಸುವಂತೆ ಆಗ್ರಹಿಸಿ, ಊರನ್ನು ಕ್ಯಾನ್ಸರ್ ತರ ಆವರಿಸುತ್ತಿರುವ ಗಾಂಜಾ, ಮಾದಕ ಪದಾರ್ಥ ಮಾರಾಟ ಜಾಲವನ್ನು ಬುಡ ಸಮೇತ ಕಿತ್ತು ಹಾಕುವಂತೆ ಒತ್ತಾಯಿಸಿ ಕಾಟಿಪಳ್ಳ, ಕೃಷ್ಣಾಪುರ, ಚೊಕ್ಕಬೆಟ್ಟು ನಾಗರಿಕರ ಪರವಾಗಿ ಸುರತ್ಕಲ್ ಪೊಲೀಸ್ ಠಾಣೆಯಲ್ಲಿ ಮನವಿ ಸಲ್ಲಿಸಲಾಯಿತು. ವಿವಿಧ ಸಂಘ ಸಂಸ್ಥೆಗಳ, ಕ್ರೀಡಾ ತಂಡಗಳನ್ನು ಪ್ರತಿನಿಧಿಸಿ ನೂರಕ್ಕೂ ಹೆಚ್ಚು ಜನ ಮನವಿ ಸಲ್ಲಿಸುವಾಗ ಉಪಸ್ಥಿತರಿದ್ದರು.

ಗುಜರಾತಿನಲ್ಲೇ 'ಮೋದಿ ಮ್ಯಾಜಿಕ್'ಗೆ ಈಗ ಸತ್ವ ಪರೀಕ್ಷೆ



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ

ಚುನಾವಣಾ ಪ್ರಚಾರಕ್ಕೆ ಬಿಜೆಪಿಯಿಂದ ಜಾದೂಗಾರರ ಬಳಕೆ

ಅಚ್ಛೇ ದಿನ್‌ಗೆ, 'ಗುಜರಾತ್ ಮಾದರಿ'ಗೆ ತವರು ರಾಜ್ಯದಲ್ಲೇ ಸವಾಲೊಡ್ಡಿರುವ ಯುವಜನರು, ಮೂರು ದಶಕಗಳ ಕಾಲ ಬೆನ್ನೆಲುಬಾಗಿದ್ದ ಪಾಟಿದಾರ ಸಮುದಾಯದ ಆಕ್ರೋಶ, ಸೂರತ್‌ನ ವ್ಯಾಪಾರಿಗಳಿಂದಲೇ ಜಿಎಸ್‌ಟಿಗೆ ದೇಶದಲ್ಲೇ ಅತಿ ದೊಡ್ಡ ಪ್ರತಿಭಟನೆ- ಮೋದಿ ಮ್ಯಾಜಿಕ್ ಇವನ್ನೆಲ್ಲ ನಿರ್ವಹಿಸಬಲ್ಲುದೇ?

ನಮ್ಮ ದೇಶದ ಪ್ರಧಾನ ಮಂತ್ರಿಗಳ 'ಮಾದರಿ' ರಾಜ್ಯದಲ್ಲಿ ನಡೆಯುವ ವಿಧಾನ ಸಭಾ ಚುನಾವಣೆಗಳು ಸಹಜವಾಗಿಯೇ ಇಡೀ ದೇಶದ ಗಮನ ಸೆಳೆದಿವೆ. ಬಹುಶಃ ನಮ್ಮ ದೇಶದ ಮುನ್ನಡೆಗೆ ಮುಂದಿನ ದಾರಿಯೇನು ಎಂದು ನಿರ್ಧರಿಸುವಲ್ಲಿ ಮುಂಬರುವ ದಿನಗಳಲ್ಲಿ ನಿರ್ಣಾಯಕವಾಗಬಹುದಾದ ಚುನಾವಣೆಗೆ ಡಿಸೆಂಬರ್ 9 ಮತ್ತು 14ರಂದು ಮತದಾನ ನಡೆಯಲಿದ್ದು, ಮೊದಲ ಹಂತದ ಚುನಾವಣಾ ಪ್ರಚಾರ ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಕೊನೆಗೊಂಡಿದೆ. ಪ್ರಧಾನ ಮಂತ್ರಿಗಳು ಪ್ರಚಾರದ ಕೊನೆಯ ಹಂತದಲ್ಲಿ ಭರ್ಜರಿ ಪ್ರಚಾರ ನಡೆಸಿದ್ದಾರೆ.

ಅದೇ ರೀತಿ ಈಗ ಕಾಂಗ್ರೆಸ್ ಅಧ್ಯಕ್ಷರಾಗುತ್ತಿರುವ ರಾಹುಲ್ ಗಾಂಧಿ ಕೂಡ, ಮತ್ತು ಕೆಲವು ತಿಂಗಳ ಹಿಂದೆಯಷ್ಟೇ ಬಿಜೆಪಿಗೆ ವಿರುದ್ಧವಾಗಿ ರಾಜಕೀಯ ರಂಗವನ್ನು ಪ್ರವೇಶಿಸಿರುವ ಯುವ ಮುಖಂಡರಾದ ಹರ್ದಿಕ್ ಪಟೇಲ್, ಜಿಗ್ನೇಶ್ ಮೆವಾಣಿ ಮತ್ತು ಅಲ್ಪೇಶ್ ಠಾಕುರ್ ಕೂಡ.

ಎಂದಿನಂತೆ ಟಿವಿ ಚಾನೆಲ್‌ಗಳು ಒಪಿನಿಯನ್ ಪೋಲ್‌ಗಳು ಪ್ರಕಟವಾಗುತ್ತಿವೆ. ಅವೀಗ ವಿಶ್ವಸನೀಯತೆಯನ್ನು ಕಳಕೊಳ್ಳುತ್ತಿದ್ದರೂ ಅದನ್ನು ನಡೆಸುವವರು ತಂತಮ್ಮ ಭಾವಗಳಿಗೆ ಅನುಗುಣವಾಗಿ, ಭವಿಷ್ಯ ನುಡಿಯುತ್ತಿದ್ದಾರೆ. ಆದರೆ ಇವುಗಳಲ್ಲೂ ಬಿಜೆಪಿ 2014ರ ತನ್ನ ಮಹಾವಿಜಯದ ನಂತರ, ಸುಮಾರು ಎರಡು ದಶಕಗಳ ಸತತ ಆಳ್ವಿಕೆಯ ನಂತರ ಗಮನಾರ್ಹ ಹಿನ್ನಡೆ ಅನುಭವಿಸುತ್ತಿರುವುದು ಎದ್ದು ಕಾಣುತ್ತಿದೆ.

ಮೂರು ತಿಂಗಳ ಹಿಂದೆ, ಆಗಸ್ಟ್‌ನಲ್ಲಿ ಅಭಿಪ್ರಾಯ ಸಂಗ್ರಹ ನಡೆಸಿದ್ದ ಸಿಎಸ್‌ಡಿಎಸ್–ಲೋಕನೀತಿ ಅಭಿಮತ ಸಂಗ್ರಹ ಬಿಜೆಪಿಗೆ 59% ಮತ್ತು ಕಾಂಗ್ರೆಸಿಗೆ 29% ಕೊಟ್ಟಿತ್ತು. ಅಕ್ಟೋಬರ್‌ನಲ್ಲಿ ನಡೆಸಿದ ಇನ್ನೊಂದು 'ಜನಮತ' ಸಂಗ್ರಹ ಬಿಜೆಪಿಯ ಪಾಲು 12% ಇಳಿದಿದೆ, ಅಂದರೆ 47%ಕ್ಕೆ ಬಂದಿದೆ, ಕಾಂಗ್ರೆಸಿನದ್ದು ಅಷ್ಟೇ ಏರಿದೆ, ಅಂದರೆ 41%ಕ್ಕೆ ಬಂದಿದೆ ಎಂದಿತ್ತು.

ಈಗ ನವಂಬರ್ 23ರಿಂದ 30ರ ನಡುವೆ 200 ಸ್ಥಳಗಳಲ್ಲಿ 3655 ಮತದಾರರಿಂದ ಸಂಗ್ರಹಿಸಿದ ಅಭಿಮತದ ಪ್ರಕಾರ ಬಿಜೆಪಿಯ ಪಾಲು ಇನ್ನೂ 4% ಇಳಿದು 43%ಕ್ಕೆ ಬಂದಿದೆ, ಕಾಂಗ್ರೆಸಿನದ್ದು ಮತ್ತೆ 2% ಏರಿ, ಅದೂ 43% ಕ್ಕೆ ಬಂದು ನಿಂತಿದೆ.

ಆದರೆ ಕಳೆದ ಎರಡು ದಶಕಗಳಿಲ್ಲಿ ಚತುರ ಸಂಘಟಕನೆಂದು ಈ ರಾಜ್ಯದಿಂದ ಆರಂಭಿಸಿ ಈಗ ಪಕ್ಷದ ರಾಷ್ಟ್ರಾಧ್ಯಕ್ಷರಾಗಿರುವ ಅಮಿತ್ ಷಾ ಈಗಲೂ 150+ (ಒಟ್ಟು 182 ಸ್ಥಾನಗಳಲ್ಲಿ) ಎನ್ನುತ್ತಿದ್ದಾರೆ, ಅತ್ತ ಹರ್ದಿಕ್ ಪಟೇಲ್ ಗುಜರಾತಿನ ಜನತೆ ಬಿಜೆಪಿಯ ವಿರುದ್ಧ ಮತನೀಡಲು ಆಗಲೇ ನಿರ್ಧರಿಸಿದ್ದಾರೆ ಎನ್ನುತ್ತಿದ್ದಾರೆ. ಕಳೆದ ಮೂರು ಚುನಾವಣೆಗಳಲ್ಲಿದ್ದಂತೆ ಬಿಜೆಪಿ ಖಚಿತ ಜಯದ ನಿರೀಕ್ಷೆ ಈ ಬಾರಿಯಿಲ್ಲ, ಸಾಮಾನ್ಯ ಮತದಾರರೂ 50–50 ಎನ್ನುತ್ತಿದ್ದಾರೆ ಎಂದು ಗುಜರಾತಿನಲ್ಲಿ ಸಂಚರಿಸುತ್ತಿರುವ ಕೆಲವು ಪ್ರಮುಖ ಪತ್ರಕರ್ತರೂ ಹೇಳುತ್ತಿದ್ದಾರೆ.

'ವಿಕಾಸ್ ಗಾಂಡು ಥಾಯೋ ಛೆ'

ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಮೋದಿಯವರ 'ಅಭಿವೃದ್ಧಿ', 'ಗುಜರಾತ ಮಾದರಿ' ಕೇವಲ ಲೊಳಲೊಟ್ಟೆ ಎಂಬ 'ಜ್ಞಾನೋದಯ' ಹೆಚ್ಚೆಚ್ಚು ಮಂದಿಗೆ ಆಗುತ್ತಿದೆ. 2014 ಮೋದಿಯವರ ಮಹಾವಿಜಯದ ನಂತರ ಜಾತಿ –ಧರ್ಮ ಲೆಕ್ಕಾಚಾರಗಳು ಮೂಲೆಗುಂಪಾಗಿವೆ, 'ಅಭಿವೃದ್ಧಿ' ಅಥವ 'ವಿಕಾಸ'ವೇ ಕೇಂದ್ರ ವಿಷಯವಾಗಿ ಬಿಟ್ಟಿದೆ ಎಂಬ ತೀರ್ಮಾನಕ್ಕೆ ಬಂದವರು, ಕೆಲವು ತಿಂಗಳ ಹಿಂದೆ ಗುಜರಾತಿನಲ್ಲಿ ಸಾಮಾಜಿಕ ಮಾಧ್ಯಮದಲ್ಲಿ 'ವಿಕಾಸ್ ಗಾಂಡು ಥಾಯೋ ಛೆ(ಅಭಿವೃದ್ಧಿ ಹುಚ್ಚೆದ್ದು ಕುಣಿಯುತ್ತಿದೆ) ಎಂದು ಈ 'ಅಭಿವೃದ್ಧಿ'ಯ ನಿಜಚಿತ್ರಗಳ ಪ್ರಚಾರ ನಡೆಸಿದ್ದನ್ನು ಕಂಡು ಗಲಿಬಿಲಿ ಹೊಂದಿರದಿದ್ದರೂ ಈಗ ಗುಜರಾತ್ ಚುನಾವಣೆಯಲ್ಲಿ ಜಾತಿ ಲೆಕ್ಕಾಚಾರವೇ ಮುಖ್ಯವಾಗಿರುವುದನ್ನು ಮತ್ತು ಕೋಮುವಾದಿ ಪ್ರಚಾರವೇ ನಡೆದಿರುವುದನ್ನು ಕಂಡು ಬೇಸ್ತು ಬಿದ್ದಿದ್ದಾರೆ.

1980ರ ದಶಕದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಭಾರೀ ರಾಜಕೀಯ ಲಾಭ ತಂದು ಕೊಟ್ಟ 'ಖಾಮ್' (ಇಂಗ್ಲಿಷ್‌ನಲ್ಲಿ ಕ್ಷತ್ರಿಯ, ಹರಿಜನ್, ಆದಿವಾಸಿ, ಮುಸ್ಲಿಮ್ ಎಂಬ ಪದಗಳ ಮೊದಲಕ್ಷರ) ಕೂಟಕ್ಕೆ ಎದುರಾಗಿ ಕಾಂಗ್ರೆಸಿನ ಸೀಮಿತ ಭೂಸುಧಾರಣೆಯಿಂದ ಪ್ರಯೋಜನ ಪಡೆದಿದ್ದ ಪಟೇಲ್ ಸಮುದಾಯದವರೂ ಸೇರಿದಂತೆ ಮೇಲ್ಜಾತಿ ಕೂಟವನ್ನು ರಚಿಸಿ, ಮೀಸಲಾತಿ–ವಿರೋಧಿ ಚಳುವಳಿ ಮತ್ತು ಕೋಮುಧ್ರುವೀಕರಣದ ಮೂಲಕ ಒಡೆಯುವಲ್ಲಿ ಯಶಸ್ವಿಯಾದ ಬಿಜೆಪಿ ಈಗ ತನ್ನ ಉದಾರವಾದಿ–ಕೋಮುವಾದಿ ಧೋರಣೆಗಳಿಗೆ ಪ್ರತಿಕ್ರಿಯೆಯಾಗಿ ಅದೇ ಪಟೇಲ್ ಮಂದಿ ಕೂಡ, ಒಬಿಸಿ ಮತ್ತು ದಲಿತ ವಿಭಾಗಗಳ ಜೊತೆಗೆ ಕಾಂಗ್ರೆಸಿನತ್ತ ವಾಲಿರುವುದನ್ನು ಕಂಡು ಗಲಿಬಿಲಿಗೊಂಡಿದೆ.

ಕಾರ್ಪೊರೇಟ್–ಪರ 'ಮಾದರಿ'ಯ 'ಫಲ'!

ಗುಜರಾತ ರಾಜ್ಯ ನಮ್ಮ ದೇಶದಲ್ಲಿ ಹೆಚ್ಚು ನಗರೀಕರಣಗೊಂಡ ಸಮಾಜಗಳಲ್ಲಿ ಒಂದು. ಇಲ್ಲಿ ನಗರಪ್ರದೇಶಗಳ ಜನಸಂಖ್ಯೆಯ ಪ್ರಮಾಣ 43%. ಈ ವಿಭಾಗದ ನಡುವೆ ಈಗಲೂ ಬಿಜೆಪಿಯ ಪ್ರಭಾವವೇ ಹೆಚ್ಚು. ಆದರೂ 182ರಲ್ಲಿ 98 ಗ್ರಾಮೀಣ ಪ್ರದೇಶದಲ್ಲಿರುವ ಸೀಟುಗಳು. ಇಲ್ಲಿ ಪಟೇಲ್ ಮತ್ತಿತರ ಮೇಲ್ಜಾತಿ ಜನಗಳೂ ವಾಣಿಜ್ಯ ಬೆಳೆಗಳಾದ ನೆಲಗಡಲೆ ಮತ್ತು ಹತ್ತಿಯ ಬೆಲೆಗಳು ಕುಸಿದಿರುವುದರಿಂದ ಮತ್ತು ಮೋದಿ ಸರಕಾರದ ಕಾರ್ಪೊರೇಟ್ ಪರ ಧೋರಣೆಗಳ ದುಷ್ಫಲಗಳಿಂದಾಗಿ ಕಂಗಾಲಾಗಿದ್ದಾರೆ.

ಈ ರಾಜ್ಯದ ಸೌರಾಷ್ಟ್ರ ಪ್ರದೇಶದ ಪ್ರಮುಖ ಬೆಳೆಯಾದ ನೆಲಗಡಲೆಗೆ ನಿಗದಿ ಪಡಿಸಿರುವ ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ) 20 ಕೆಜಿಗೆ 900ರೂ. ಆದರೆ ರೈತರು 650 ರೂ.ಗೇ ಹತಾಶ ಮಾರಾಟಕ್ಕಿಳಿಯಬೇಕಾದ ಸ್ಥಿತಿಯಲ್ಲಿದ್ದಾರೆ.

ಹತ್ತಿಗೆ ನಿಗದಿ ಪಡಿಸಿದ ಎಂಎಸ್‌ಪಿ ಕೂಡ ರೈತರಿಗೆ ಸಿಗುತ್ತಿಲ್ಲ. ಭಾರತ ಹತ್ತಿ ನಿಗಮ(ಸಿಸಿಐ) ಸರಿಯಾಗಿ ಕೆಲಸ ಮಾಡುವಂತೆ ಮಾಡುವಲ್ಲಿ ಮೋದಿ ಸರಕಾರದ ವಿಫಲತೆ ಕೂಡ ಇದಕ್ಕೆ ಒಂದು ಮುಖ್ಯ ಕಾರಣವಾಗಿದೆ.

ಮೋದಿಯವರು ಗುಜರಾತಿನಲ್ಲ ಆರಂಭಿಸಿದ 'ಮಾದರಿ' ಸಾಕಷ್ಟು ಉದ್ಯೋಗಾವಕಾಶಗಳನ್ನು ತರಬಹುದು ಎಂದು ಅಲ್ಲಿಯ ಜನರು ನಿರೀಕ್ಷಿಸಿದ್ದರು. ಆದರೆ ಹಾಗಾಗಲಿಲ್ಲ ಎನ್ನುತ್ತಾರೆ ಗುಜರಾತಿನ ಹಿರಿಯ ರಾಜಕೀಯ ವಿಸ್ಲೇಷಕರೂ, ಸಮಾಜವಿಜ್ಞಾನಿಯೂ ಆದ ಅಚ್ಯುತ್ ಯಾಜ್ಞಿಕ್. ದೊಡ್ಡ ಉದ್ಯಮಗಳು ಬಂದವು, ಆದರೆ ದೊಡ್ಡ ಮಟ್ಟದ ಯಾಂತ್ರೀಕರಣವಿದ್ದ ಅವು ಜನಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಉದ್ಯೋಗಗಳನ್ನು ಸೃಷ್ಟಿ ಮಾಡಲಿಲ್ಲ. ಹಡಿಯುಷ್ಟು ಚಮಚಾ ಬಂಡವಾಳಶಾಹಿಗಳನ್ನು ರೂಪಿಸಿತಷ್ಟೇ.

ವಾಣಿಜ್ಯ ಬೆಳೆಗಳಾದ ನೆಲಗಡಲೆ, ಹತ್ತಿ, ತಂಬಾಕು, ಕಬ್ಬು ಮುಂತಾದವುಗಳಿಮದ ಮೀಸಲು ಮೌಲ್ಯಗಳನ್ನು ಗಳಿಸಿದ ಪಾಟಿದಾರರು ಹಲವರು ಅವನ್ನು ಮಧ್ಯಮ ಮತ್ತು ಸಣ್ಣ ಪ್ರಮಾಣದ ಉದ್ದಿಮೆಗಳಲ್ಲಿ ತೊಡಗಿಸಿದರು. ಆದರೆ ದೊಡ್ಡ ಕಾರ್ಪೊರೇಟ್–ಪರ 'ಗುಜರಾತ್ ಮಾದರಿ' ಯಿಂದಾಗಿ ಅವುಗಳೆಲ್ಲ ಒಂದೊಂದಾಗಿ ನೆಲಕಚ್ಚುವಂತಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ಇವುಗಳಲ್ಲಿ 25%ದಷ್ಟು ಮುಚ್ಚಿ ಹೋಗಿವೆ ಎನ್ನುವ ಯಾಜ್ಞಿಕ್ ಅವರು. ಈಗ ಈ ಉದ್ದಿಮೆಗಳು ಜಿಎಸ್‌ಟಿ ದಾಳಿಗೂ ಪಕ್ಕಾಗಿವೆ ಎನ್ನುತ್ತಾರೆ. ಹಿಂದೆ ಮೀಸಲಾತಿ–ವಿರೋಧಿ ಚಳುವಳಿಯನ್ನು ಪ್ರಬಲವಾಗಿ ವಿರೋಧಿಸಿದ್ದ ಪಾಟಿದಾರ ಸಮುದಾಯದ ಈಗಿನ ಯುವಪೀಳಿಗೆ ತಮಗೂ ಮೀಸಲಾತಿ ಕೊಡಿ ಎಂಬ ಬೇಡಿಕೆ ಎತ್ತಿರುವುದನ್ನು ಈ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಅದನ್ನು ಮೀಸಲಾತಿ–ವಿರೋಧಿ ಚಳುವಳಿಯಾಗಿ ಪರಿವರ್ತಿಸುವ ಬಿಜೆಪಿ ಪ್ರಯತ್ನ ಫಲಕೊಟ್ಟಂತಿಲ್ಲ.

ಈ ನಡುವೆ ಈ 'ಮಾದರಿ'ಯ ಕಾರ್ಪೊರೇಟ್–ಪರ ಒತ್ತಿನಿಂದಾಗಿ ಶಿಕ್ಷಣ, ಆರೋಗ್ಯ ಇತ್ಯಾದಿಗಳಿಗೆ ವೆಚ್ಚ ಕಳೆದ ದಶಕದಲ್ಲಿ ಇಳಿಯುತ್ತ ಬಂದಿದೆ ಎಂದೂ

ಪುಟ 10 ಕ್ಕೆ

ಹಳ್ಳಿ –ಪಟ್ಟಣ : ಕಾಂಗ್ರೆಸ್–ಬಿಜೆಪಿ

ಗುಜರಾತಿನಲ್ಲಿ ನಗರಪ್ರದೇಶಗಳ ಜನಸಂಖ್ಯೆಯ ಪ್ರಮಾಣ 43%. ಈ ವಿಭಾಗದ ನಡುವೆ ಈಗಲೂ ಬಿಜೆಪಿಯ ಪ್ರಭಾವವೇ ಹೆಚ್ಚು. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಹಾಗಿಲ್ಲ. ಕಾಂಗ್ರೆಸ್ ಪ್ರಭಾವ 2010 ಕ್ಕೆ ಹೋಲಿಸಿದರೆ 2015ರ ಸ್ಥಳೀಯ ಚುನಾವಣೆಗಳಲ್ಲಿ ಹೆಚ್ಚಿದ್ದು ಕಂಡು ಬಂದಿದೆ. ಇದು 'ಗುಜರಾತ್ ಮಾದರಿ'ಯಲ್ಲಿ ಉಲ್ಬಣಗೊಂಡ ಕೃಷಿ ಬಿಕ್ಕಟ್ಟು ಮತ್ತು ಸಣ್ಣ ಹಾಗೂ ಮಧ್ಯಮ ಪ್ರಮಾಣದ ಉದ್ದಿಮೆಗಳಲ್ಲಿನ ಸಮಸ್ಯೆಗಳಿಂದ ಆಗಿರಬಹುದು ಎನ್ನಲಾಗಿದೆ.

2015 ರಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಬಿಜೆಪಿ

ಎಲ್ಲ 6 ಮಹಾನಗರಸಭೆಗಳಲ್ಲಿ ತನ್ನ ಹತೋಟಿ ಉಳಿಸಿ ಕೊಂಡಿತ್ತು,
56 ನಗರಸಭೆಗಳಲ್ಲಿ 42ರಲ್ಲಿ ಗೆದ್ದಿತ್ತು.
ಆದರೆ 31 ಜಿಲ್ಲಾ ಪಂಚಾಯತುಗಳಲ್ಲಿ 23
193 ತಾಲೂಕು ಪಂಚಾಯತುಗಳಲ್ಲಿ 113 ನ್ನು ಕಳಕೊಂಡಿತು.
ಜಿಲ್ಲಾ ಪಂಚಾಯತುಗಳಲ್ಲಿ 2010ರಲ್ಲಿ 50% ಇದ್ದ ಅದರ ಮತಗಳಿಕೆ 44% ಕ್ಕೆ ಇಳಿದಿತ್ತು; ಅದೇ ರೀತಿ ತಾಲೂಕ ಪಂಚಾಯತುಗಳಲ್ಲಿ 48.5% ದಿಂದ 42.3%ಕ್ಕೆ ಇಳಿದಿತ್ತು.

2015ರಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮತಗಳಿಕೆ % ಹೀಗಿತ್ತು.


	ಕಾಂಗ್ರೆಸ್	ಬಿಜೆಪಿ
ಜಿಲ್ಲಾ ಪಂಚಾಯತು	48	44
ತಾಲೂಕ ಪಂಚಾಯತು	46	42
ಪುಸಭೆಗಳು	40	45
ಮಹಾನಗರ ಸಭೆಗಳು	41	50

2015ರ ನಂತರ ಬಂದಿರುವ ನೋಟುರದ್ದತಿ ಮತ್ತು ಜಿಎಸ್‌ಟಿ ಈ ಚಿತ್ರವನ್ನು ಮತ್ತಷ್ಟು ಬದಲಾಯಿಸುತ್ತದೆಯೇ?



ಕೆಲವು ತಿಂಗಳ ಹಿಂದೆ ಗುಜರಾತಿನಲ್ಲಿ ಸಾಮಾಜಿಕ ಮಾಧ್ಯಮದಲ್ಲಿ 'ವಿಕಾಸ್ ಗಾಂಡು ಥಾಯೋ ಛೆ(ಅಭಿವೃದ್ಧಿ ಹುಚ್ಚೆದ್ದು ಕುಣಿಯುತ್ತಿದೆ) ಎಂದು ಈ 'ಅಭಿವೃದ್ಧಿ'ಯ ನಿಜಚಿತ್ರಗಳ ಪ್ರಚಾರ ವ್ಯಾಪಕವಾಗಿ ನಡೆಯಿತು. ಆ # ನ ಒಂದು ಚಿತ್ರ: ಇದರಲ್ಲಿ ಹೆದ್ದಾರಿಯ ದೊಡ್ಡ ಹೊಂಡದಲ್ಲಿ ಒಬ್ಬಾತ ಏನೋ ಹುಡುಕುತ್ತಿದ್ದಾನೆ. ಏನೆಂದು ನೆರೆದವರು ಕೇಳಿದಾಗ 'ಅಭಿವೃದ್ಧಿ ಹುಡುಕುತ್ತಿದ್ದೇನೆ' ಎನ್ನುತ್ತಾನೆ.

ಬಹುಶಃ ಇನ್ನು 'ಅಭಿವೃದ್ಧಿ' ಕೆಲಸ ಮಾಡದು ಎಂದು ಮನವರಿಕೆಯಾಗಿ ಮತ್ತೆ ಹಳೆಯ ಕೋಮು ಧ್ರುವೀಕರಣದ ತಂತ್ರಕ್ಕೇ ಶರಣಾದ್ದಕ್ಕೆ ಪಕ್ಕದ ಪೋಸ್ಟರ್ ಉದಾಹರಣೆ.



ಇದರಲ್ಲಿ ಇಂಗ್ಲಿಷ್‌ನಲ್ಲಿ ರೂಪಾಣಿ (ಮುಖ್ಯಮಂತ್ರಿ), ಅಮಿತ್ ಷಾ(ಪಕ್ಷದ ಅಧ್ಯಕ್ಷ) ಮತ್ತು ಮೋದಿ (ಪ್ರಧಾನಿ)ಗಳ ಮೊದಲಕ್ಷಗಳಂದ ರಚಿಸಿದ 'ರಾಮ್' ಬಿಜೆಪಿಯ ಚುನಾವಣಾ ಚಿಹ್ನೆ ಮತ್ತು ಪ್ರಸ್ತಾವಿತ ಅಯೋಧ್ಯೆಯ ರಾಮಮಂದಿರದ ಚಿತ್ರವಿದ್ದರೆ, ಕೆಳಭಾಗದಲ್ಲ ಇಂಗ್ಲಿಷ್‌ನಲ್ಲಿ, ಬಿಜೆಪಿಗೆ ಸವಾಲಾಗಿರುವ ಮೂವರು ಯುವ ಮುಖಂಡರ ಹಸರುಗಳ (ಹರ್ದಿಕ್ ಪಟೇಲ್, ಅಲ್ಪೇಶ್ ಠಾಕುರ್ ಮತ್ತು ಜಿಗ್ನೇಶ್ ಮೇವಾಣಿ) ಹೆಸರುಗಳ ಮೊದಲಕ್ಷರಗಳಂದ ರಚಿಸಿದ 'ಹಜ್' ನೊಂದಿಗೆ ಸೌದಿ ಅರೇಬಿಯಾದಲ್ಲಿರುವ ಕಾಬಾದ ಚಿತ್ರ ಮತ್ತು ಕಾಂಗ್ರೆಸ್ ಚುನಾವಣಾ ಚಿಹ್ನೆಯಿರುವ ಈ ಪೋಸ್ಟರ್ ಏನು ಹೇಳಬಯಸುತ್ತದೆ ಎಂಬುದು ಸ್ಪಷ್ಟ. ಇದನ್ನು ತಾವು ಪ್ರಕಟಿಸಿಲ್ಲ ಎಂದು ಬಿಜೆಪಿ ಮುಖಂಡರು ಹೇಳಿದ್ದಾರೆ. ನಿಜ ಅವರದ್ದಲ್ಲ, ಅವರ ಗುರು ಮಂದಿಯದ್ದು–ಅಹಮದಾಬಾದಿನ ಅಮರಾಯ್‌ವಾಡಿಯ ಆರೆಸ್ಸೆಸ್ ಘಟಕದ ವಾಟ್ಸ್‌ಆಪ್ ಗುಂಪು ಇದನ್ನು ಹಾಕಿತ್ತು ಎಂದು ನ್ಯೂಸ್‌ಕ್ಲಿಕ್.ಇನ್ ಪತ್ತೆಮಾಡಿದೆ. ಇದರ ನಂತರ ಹರ್ದಿಕ್ ಪಟೇಲ್‌ರದ್ದೆಂದು ಸೆಕ್ಸ್ ವಿಡಿಯೋ ಹರಿಯಬಿಡಲಾಯಿತು. ಜಿಗ್ನೇಶ್ ಮೆವಾಣಿಯ ಮೇಲೆ ನಾಲ್ಕು ಬಾರಿ ಹಲ್ಲೆಗಳಾಗಿವೆ. ಈ 'ಹಜ್' ಯುವಕರ ಬಗ್ಗೆ ಇಷ್ಟೊಂದು ಭಯವೇಕೆ ಎಂದು ಹಲವರು ಪ್ರಶ್ನಿಸುತ್ತಿದ್ದಾರೆ.

ಉತ್ತರಪ್ರದೇಶ ಪುರಸಭಾ ಚುನಾವಣೆಗಳಲ್ಲಿ ಬಿಜೆಪಿಗೆ ಭಾರೀ ಪರಾಭವ



ಹೌದು, ಕೃಪೆ: ಮನ್ಸೂರ್ ನಖ್ವಿ, ಇಂಡಿಯನ್ ಕಾರ್ಟೂನ್ ಗ್ಯಾಲರಿ

ಗೆದ್ದದ್ದು ಕೇವಲ 19%, 45% ದಲ್ಲಿ ಠೇವಣಿಯೇ ಖೋತಾ

ಹೌದು, ಇದು ವಾಸ್ತವ. ಟಿವಿ ಚಾನೆಲ್‌ಗಳ ವೀಕ್ಷಕರಿಗೆ ಮತ್ತು ದೊಡ್ಡ ಪತ್ರಿಕೆಗಳ ಓದುಗರಿಗೆ ಇದರಿಂದ ಆಶ್ಚರ್ಯವಾಗಬಹುದು. ಏಕೆಂದರೆ ಅವು ಉತ್ತರಪ್ರದೇಶದಲ್ಲಿ ಬಿಜೆಪಿ ಭಾರೀ ಗೆಲುವು ಸಾಧಿಸಿದೆ ಎಂದು ಸಾರಿದ್ದವು. ಅದು ಬಿಜೆಪಿ ಗೆದ್ದ ಮೇಯರ್ ಸ್ಥಾನಗಳ ಮಟ್ಟಿಗಷ್ಟೇ ಸೀಮಿತವಾದ ಸತ್ಯ. ಒಟ್ಟು ಸೀಟುಗಳಲ್ಲಿ ಐದರಲ್ಲಿ ಒಂದರಷ್ಟನ್ನೂ ಗೆಲ್ಲಲಾಗದ್ದು ಮತ್ತು ಅದರ ಒಂದೂವರೆ ಪಟ್ಟಿನಷ್ಟು ಸೀಟುಗಳಲ್ಲಿ ಠೇವಣಿ ಕಳಕೊಂಡದ್ದು ಭಾರೀ ಗೆಲುವು ಎಂದು ಡಂಗುರ ಸಾರಿ ಈ ಕಾರ್ಪೊರೇಟ್ ಮಾಧ್ಯಮಗಳು, ಅದನ್ನು ನಂಬಿ ವಿಜಯೋತ್ಸವ ನಡೆಸಿದ ಮುಖಂಡರು ತಮ್ಮ ಇದ್ದ-ಬದ್ದ ವಿಶ್ವಸನೀಯತೆಯನ್ನೂ ಕಳಕೊಂಡಿದ್ದಾರೆ. ದೇಶದ ಆಳುವ ಪಕ್ಷದ ಅಧ್ಯಕ್ಷರಂತೂ ಗುಜರಾತಿನಲ್ಲಿ ಇದರ ಪ್ರಭಾವ ಬೀಳುತ್ತದೆ ಎಂದು ಆಶಿಸಿದ್ದಾರೆ. ಈ ವಿಷಯದಲ್ಲಿ ಮಾತ್ರ ಅವರ ಆಶಯ ಈಡೇರಲಿ ಎಂದು ದೇಶದ ಪ್ರಜಾಪ್ರಭುತ್ವವಾದಿಗಳು ಹಾರೈಸುತ್ತಿದ್ದಾರೆ.

ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರು ಬಿಜೆಪಿಗೆ ಪುರಸಭಾ ಚುನಾವಣೆಗಳಲ್ಲಿ ಇನ್ನೊಂದು ಭಾರೀ ಗೆಲುವು ತಂದು ಕೊಟ್ಟಿದ್ದಾರೆ ಎಂದು ಕಾರ್ಪೊರೇಟ್ ಮಾಧ್ಯಮಗಳು ಕೇಕೆ ಹಾಕಿದ್ದವು. ಆದರೆ ನಿಜಸಂಗತಿಯೇನು?

ವಾಸ್ತವವಾಗಿ ಉತ್ತರಪ್ರದೇಶದ ಪುರಸಭಾ ಚುನಾವಣೆಗಳಲ್ಲಿ ಬಿಜೆಪಿ ಗೆದ್ದಿಲ್ಲ, ಬದಲಿಗೆ ಭಾರೀ ಪರಾಭವವನ್ನು ಅನುಭವಿಸಿದೆ ಎಂಬುದು ಆ ಫಲಿತಾಂಶಗಳನ್ನು ಪೂರ್ಣವಾಗಿ ನೋಡಿದಾಗ ಸ್ಪಷ್ಟವಾಗಿ ಕಾಣಬರುತ್ತಿದೆ.

ಒಂಭತ್ತು ತಿಂಗಳ ಹಿಂದೆ 77%ಕ್ಕಿಂತಲೂ ಹೆಚ್ಚು ವಿಧಾನಸಭಾ ಸ್ಥಾನಗಳನ್ನು ಗಿಟ್ಟಿಸಿದ ಬಿಜೆಪಿ ಈಗ ಈ ಚುನಾವಣೆಗಳಲ್ಲಿ 19%ಕ್ಕಿಂತಲೂ ಕಡಿಮೆ ಸ್ಥಾನಗಳನ್ನು ಮಾತ್ರ ಪಡೆಯುವಲ್ಲಿ ಯಶಸ್ವಿಯಾಗಿದೆ.

ಇದನ್ನು ಭಾರೀ ಗೆಲುವು ಎನ್ನುವವರ ಅಳತೆಗೋಲು ಯಾವುದು, ಅವರಿಗೇ ಗೊತ್ತು. ಉತ್ತರಪ್ರದೇಶ ರಾಜ್ಯ ಚುನಾವಣಾ ಆಯೋಗ ಪ್ರಕಟಿಸಿರುವ ವಿವರಗಳನ್ನು ಈ ಕೆಳಗಿರುವ ಕೋಷ್ಟಕದಲ್ಲಿ ನೋಡಿ:

1.53 ಕೋಟಿ ಮತದಾರರಿರುವ 16 ಮಹಾನಗರಸಭೆಗಳು, 1.2 ಕೋಟಿ ಮತದಾರರಿರುವ 198 ನಗರಸಭೆಗಳು ಮತ್ತು 57.3 ಲಕ್ಷ ಮತದಾರಿರುವ 438 ನಗರಪಂಚಾಯತುಗಳಲ್ಲಿ, ಅಂದರೆ ಒಟ್ಟು 3 ಕೋಟಿ 33 ಲಕ್ಷ ಮತದಾರರಿರುವ 652 ನಗರಪ್ರದೇಶದ ಸ್ಥಳೀಯ ಸಂಸ್ಥೆಗಳಿಗೆ ಈ ಚುನಾವಣೆಗಳು ನಡೆದಿವೆ.

* **ಒಟ್ಟು 12664 ವಾರ್ಡುಗಳಲ್ಲಿ ಬಿಜೆಪಿ ಗೆದ್ದಿರುವುದು 2366ಮಾತ್ರ, ಅಂದರೆ 19%.,**
* **652 ಸ್ಥಳೀಯ ಸಂಸ್ಥೆಗಳಲ್ಲಿ ಬಿಜೆಪಿಯ ಅಭ್ಯಥಿಗಳು ಮೇಯರ್/ಅಧ್ಯಕ್ಷ ಹುದ್ದೆ ಗೆದ್ದಿರುವುದು 184ರಲ್ಲಿ ಮಾತ್ರ.**
* **ದೊಡ್ಡ ನಗರಗಳಲ್ಲೂ ಅತಿ ಹೆಚ್ಚು ಅಂದರೆ 46% ವಾರ್ಡುಗಳಲ್ಲಿ ಗೆದ್ದಿದೆ. 41.4% ಮತ ಪಡೆದಿದೆ.**
* **ಸಣ್ಣ ನಗರಗಳಲ್ಲಿ 18% ವಾರ್ಡುಗಳಲ್ಲಷ್ಟೇ ಗೆದ್ದಿದೆ,, 27.1% ಮತ ಪಡೆದಿದೆ.**
* **ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ಇರುವ ಪಟ್ಟಣಗಳಲ್ಲಂತೂ ಕೇವಲ 12% ವಾರ್ಡುಗಳಲ್ಲಿ ಗೆಲ್ಲಲು ಅದಕ್ಕೆ ಸಾಧ್ಯವಾಗಿದೆಯಷ್ಟೇ.** ಪಡೆದಿರುವ ಮತ ಕೇವಲ 11.1%.

ಮೇಯರ್ ಹುದ್ದೆಗೆ ನಡೆದ ಚುನಾವಣೆಗಳಲ್ಲಿ 41% ಮತಗಳಿಸಿದ್ದರಿಂದಾಗಿ ಬಿಜೆಪಿ ಈ ಚುನಾವಣೆಗಳಲ್ಲಿ ಗಳಿಸಿದ ಒಟ್ಟು ಮತ 30%ಕ್ಕೇರಿದೆಯಷ್ಟೇ.

ನಿಜ, ಇತರ ಪಕ್ಷಗಳಿಗೆ ಹೋಲಿಸಿದರೆ ಅದು ಮುಂದಿದೆ. ಪಕ್ಷೇತರರು ಗಮನಾರ್ಹ ಸ್ಥಾನಗಳಲ್ಲಿ ಗೆದ್ದಿರುವುದು, ಅದರಲ್ಲೂ ನಗರಸಭೆಗಳು ಮತ್ತು ನಗರಪಂಚಾಯತುಗಳಲ್ಲಿ ಬಿಜೆಪಿಗಿಂತಲೂ ಬಹಳ ಹೆಚ್ಚು ಸ್ಥಾನಗಳಲ್ಲಿ ಗೆದ್ದಿರುವುದು ಭಾರೀ ಬಹುಮತ ಪಡೆದು ಸರಕಾರ ನಡೆಸುತ್ತಿರುವ ಪಕ್ಷದ ಬಗ್ಗೆ ಬಹಳಷ್ಟು ನಗರಗಳು ಮತ್ತು ಪಟ್ಟಣಗಳಲ್ಲಿ ಮತದಾರರಿಗೆ ಒಲವು ಉಳಿದಿಲ್ಲ ಎಂದು ತೋರಿಸುವುದಿಲ್ಲವೇ?

ಅಂದರೆ, ಕಾರ್ಪೊರೇಟ್ ಮಾಧ್ಯಮಗಳು ಬಿಂಬಿಸಿರುವುದಕ್ಕೆ ತದ್ವಿರುದ್ಧವಾಗಿ ಒಂಭತ್ತು ತಿಂಗಳಲ್ಲೇ ಬಿಜೆಪಿ ಬಗ್ಗೆ ಭ್ರಮನಿರಸನ ಕಾಣಲಾರಂಭಿಸಿದೆ. ಆರೆಸ್ಸೆಸ್ ಬಲ ಇರುವ ಮತ್ತು ಮೋದಿಯವರ ಮಾತುಗಳ ಅಬ್ಬರದ ಪ್ರಭಾವದಿಂದ ಇನ್ನೂ ಹೊರಬಂದಿರದ ಮಧ್ಯಮವರ್ಗಗಳಲ್ಲಿ ಇದರ ಪ್ರಮಾಣ ಕಡಿಮೆಯಿದ್ದರೂ, ನಗರಗಳ ಹೊರವಲಯಗಳತ್ತ ಸರಿದಂತೆ ಹೆಚ್ಚೆಚ್ಚು ಪ್ರಮಾಣದಲ್ಲಿ ಭ್ರಮನಿರಸನವಾಗಿರುವುದು ಸ್ಪಷ್ಟವಾಗಿ ಕಾಣುತ್ತದೆ. ಬಹುಶಃ ನೋಟುರದ್ಧತಿ ಮತ್ತು ಜಿಎಸ್‌ಟಿಯ ಮತ್ತು ಬಿಜೆಪಿ ಸರಕಾರದ ಕಿರು ಉತ್ಪಾದಕರ–ವಿರೋಧಿ ಧೋರಣೆಗಳ ದುಷ್ಟಭಾವದಿಂದ ದೊಡ್ಡ ನಗರಗಳ ಮಂದಿ ಅಷ್ಟೋ ಇಷ್ಟೋ ಹೇಗೋ ತಪ್ಪಿಸಿಕೊಂಡಿದ್ದಾರೆ, ಆದರೆ ದೊಡ್ಡ ನಗರಗಳಿಂದ ಹೊರ ಹೋದಂತೆ ಜನಗಳು, ಸಣ್ಣ ಉತ್ಪಾದಕರು ಮತ್ತು ಸಣ್ಣ ವ್ಯಾಪಾರಿಗಳು, ಕೃಷಿ ಮತ್ತು ಕೃಷಿ ಉತ್ಪನ್ನಗಳನ್ನು ಹೆಚ್ಚಾಗಿ ಅವಲಂಬಿಸಿರುವವರು ಇವುಗಳ ಕೆಟ್ಟ ಪರಿಣಾಮಗಳನ್ನು ಹೆಚ್ಚೆಚ್ಚು ಎದುರಿಸಬೇಕಾಗಿ ಬಂದಿದೆ ಎಂಬುದನ್ನು ಇದು ತೋರಿಸುತ್ತಿದೆ ಎಂದು ಕೆಲವು ವಿಶ್ಲೇಷಕರು ಹೇಳುತ್ತಾರೆ.(ನ್ಯೂಸ್ ಕ್ಲಿಕ್.ಇನ್, ಡಿಸೆಂಬರ್ 2)

ವಿಧಾನಸಭಾ ಚುನಾವಣೆಗಳಲ್ಲಿ 61% ಮತದಾನವಾಗಿತ್ತು, ಇಲ್ಲಿ ಆಗಿರುವ ಮತದಾನ 53%. ದೊಡ್ಡ-ಸಣ್ಣ ನಗರಗಳ ಮತದಾರರಲ್ಲಿ ಬಿಜೆಪಿ ಆಡಳಿತದ ಬಗ್ಗೆ ಉತ್ಸಾಹ ಕುಂದಿದೆಯೇ ಹೊರತು ಖಂಡಿತಾ ಹೆಚ್ಚಿಲ್ಲ ಎಂಬುದನ್ನು ತೋರಿಸುತ್ತದೆಯೇ?

ಅರ್ಧದಷ್ಟು ಬಿಜೆಪಿ ಅಭ್ಯರ್ಥಿಗಳ ಠೇವಣಿ ನಷ್ಟ

ಇನ್ನೂ ಕುತೂಹಲಕಾರೀ ಸಂಗತಿ ಎಂದರೆ ಬಿಜೆಪಿ ಅಭ್ಯರ್ಥಿಗಳಲ್ಲಿ 45%, ಅಂದರೆ ಸುಮಾರು ಅರ್ಧದಷ್ಟು ಮಂದಿ ಠೇವಣಿ ಕಳಕೊಂಡಿದ್ದಾರೆ. ವಾಸ್ತವವಾಗಿ ಒಟ್ಟಾಗಿ ಗೆದ್ದವರಿಗಿಂತ ಠೇವಣಿ ಕಳಕೊಂಡವರೇ ಹೆಚ್ಚು. ನಿಜ, ಬೇರೆ ಪಕ್ಷಗಳಲ್ಲಿ ಈ ಪ್ರಮಾಣ ಇನ್ನೂ ಹೆಚ್ಚಿದೆ. ಅದರೆ ಅವರೇನೂ ಬಿಜೆಪಿ ಮುಖಂಡರಂತೆ ತಾವು ಬಾರೀ ಗೆಲುವು ಸಾಧಿಸಿದ್ದೇವೆ ಎಂದೇನೂ ಹೇಳಿಕೊಂಡಿಲ್ಲವಲ್ಲ!

ಇಲ್ಲಿಯೂ ಮಹಾನಗರ ಸಭೆಗಳಿಂದ ಕೆಳಗೆ ಸಾಗಿದಂತೆ ಠೇವಣಿ ನಷ್ಟದ ಪ್ರಮಾಣ ಹೆಚುತ್ತ ಹೋಗಿದೆ ಮತ್ತು ಮತಗಳಿಕೆಯ ಪ್ರಮಾಣ ಇಳಿಯುತ್ತ ಹೋಗಿದೆ.

ಮಹಾನಗರಸಭೆಗಳಲ್ಲಿ ಠೇವಣಿ ನಷ್ಟ ಇಲ್ಲ, ನಗರಸಭೆಗಳಲ್ಲಿ ಅದರ ಗೆದ್ದವರ ಎರಡು ಪಟ್ಟು ಅಭ್ಯರ್ಥಿಗಳು ಠೇವಣಿ ಕಳಕೊಂಡರೆ, ನಗರ ಪಂಚಾಯತುಗಳಲ್ಲಿ ಠೇವಣಿ ಕಳಕೊಂಡ ಬಿಜೆಪಿ ಅಭ್ಯರ್ಥಿಗಳ ಪ್ರಮಾಣ ಗೆದ್ದವರ ಸಂಖ್ಯೆಯ ದುಪ್ಪಟ್ಟಿಗಿಂತಲೂ ಹೆಚ್ಚು.

ಇಲ್ಲಿ ಗಮನಿಸಬೇಕಾದ ಇನ್ನು ಕೆಲವು ಸಂಗತಿಗಳು:

* ಬಿಜೆಪಿ ಬಹುಮತ ಪಡೆದಿರುವ ಸ್ಥಳೀಯ ಸಂಸ್ಥೆಗಳ ಸಂಖ್ಯೆ ಇನ್ನೂ ಕಡಿಮೆ. ಉದಾಹರಣೆಗೆ ಅಲಹಾಬಾದ್, ವಾರಣಾಸಿ ಗೋರಖ್ಪುರನಲ್ಲಿ ಬಿಜೆಪಿ ಮೇಯರ್ ಹುದ್ದೆಗಳನ್ನು ಪಡೆದರೂ ಅಲ್ಲಿ ಅದಕ್ಕೆ ಬಹುಮತ ದೊರೆತಿಲ್ಲ.
* 16 ಮಹಾನಗರಸಭೆಗಳಲ್ಲಿ 14ರಲ್ಲಿ ಬಿಜೆಪಿ ಮೇಯರ್ ಹುದ್ದೆಯನ್ನು ಪಡೆದಿದೆ. ಉಳಿದೆರಡನ್ನು ಬಿಎಸ್‌ಪಿ ಪಡೆದಿದೆ. ಮೇರಠ್‌ನಲ್ಲಿ ಅದು ಮೇಯರ್ ಹುದ್ದೆಯನ್ನು ಬಿಜೆಪಿಯಿಂದ ಕಸಿದುಕೊಂಡಿದೆ. ಬಹುಶಃ ಭಾರತ ಅಂದರೆ ಮಹಾನಗರಗಳು ಮಾತ್ರ ಎಂದು ಭಾವಿಸುವ ಕಾರ್ಪೊರೇಟ್ ಮಾಧ್ಯಮಗಳಿಗೆ ಇದು ಮಾತ್ರ ಕಂಡಿದೆ. ಹಾಗೆ ನೋಡಿದರೆ 2012ರಲ್ಲಿ ಸಮಾಜವಾದಿ ಪಕ್ಷ ಭಾರೀ ಗೆಲುವ ಪಡೆದ ನಂತರ ನಡೆದ ಪುರಸಭಾ ಚುನಾವಣೆಗಳಲ್ಲೂ ಬಿಜೆಪಿ ಈ 16 ರಲ್ಲಿ 12ರಲ್ಲಿ ಈ ಹುದ್ದೆಗಳನ್ನು ಗಳಿಸಿತ್ತು.
* 98 ನಗರಸಭೆಗಳಲ್ಲಿ 70ರಲ್ಲಿ ಮಾತ್ರ ಬಿಜೆಪಿ ನಗರಸಭಾ ಅಧ್ಯಕ್ಷರ ಹುದ್ದೆ ಗೆಲ್ಲಲು ಸಾಧ್ಯವಾಗಿದೆ. ಎಸ್‌ಪಿ 45, ಬಿಎಸ್ಪಿ 29 ಮತ್ತು ಕಾಂಗ್ರೆಸ್ 9ನ್ನು ಪಡೆದಿವೆ. 43ರಲ್ಲಿ ಪಕ್ಷೇತರರು ಅಧ್ಯಕ್ಷ ಸ್ಥಾನ ಗೆದ್ದಿದ್ದಾರೆ.
* 438 ನಗರ ಪಂಚಾಯತುಗಳಲ್ಲಿ ಬಿಜೆಪಿ ಅಧ್ಯಕ್ಷ ಸ್ಥಾನ ಪಡೆದಿರುವುದು 100ರಲ್ಲಿ ಮಾತ್ರ. ಎಸ್ಪಿ 83 ಮತ್ತು ಬಿಎಸ್ಪಿ 43 ಪಡೆದಿವೆ. ಕಾಂಗ್ರೆಸ್ 17 ರಲ್ಲಿ ಪಕ್ಷೇತರರು 182ರಲ್ಲಿ ಅಧ್ಯಕ್ಷ ಸ್ಥಾನ ಗೆದ್ದಿದ್ದಾರೆ.

ವಿಐಪಿ ಕ್ಷೇತ್ರಗಳ ಕುತೂಹಲಕಾರಿ ಫಲಿತಾಂಶಗಳು

ಈ ಚುನಾವಣೆಗಳಲ್ಲಿ ಹೆಚ್ಚಿನ ಗಮನ ಸೆಳೆದಿರುವ ಸ್ಥಳಗಳೆಂದರೆ ಮುಖ್ಯಮಂತ್ರಿಗಳ ಸ್ವಂತ ಕ್ಷೇತ್ರ ಮತ್ತು ಭದ್ರ ನೆಲೆಯೆನಿಸಿರುವ ಗೋರಖಪುರ, ಉಪಮುಖ್ಯಮಂತ್ರಿಗಳ ಕ್ಷೇತ್ರ ಕೌಶಾಂಬಿ, ಪ್ರಧಾನ ಮಂತ್ರಿಗಳನ್ನು ಆರಿಸಿದ ಕ್ಷೇತ್ರ ವಾರಣಾಸಿ, ಕಾಂಗ್ರೆಸ್ ಉಪಾಧ್ಯಕ್ಷರನ್ನು ಆರಿಸಿದ ಅಮೇಥಿ ಹಾಗೂ ಉತ್ತರಪ್ರದೇಶದ ಮುಖ್ಯ ನಗರವಾದ ಅಲಹಾಬಾದ್. (ದಿಕ್ವಿಂಟ್, ಡಿಸೆಂಬರ್ 2)

* ಗೋರಖಪುರದಲ್ಲಿ ಮೇಯರ್ ಸ್ಥಾನವನ್ನು ಪಡೆದರೂ, ಬಿಜೆಪಿಗೆ ಬಹುಮತ ಸಿಕ್ಕಿಲ್ಲ. 70 ವಾಡುಗಳಲ್ಲಿ 28ರಲ್ಲಿ ಮಾತ್ರ ಅದು ಗೆದ್ದಿದೆ. ಎಸ್ಪಿಗೆ 19, ಬಿಎಸ್‌ಪಿಗೆ 4 ಮತ್ತು ಕಾಂಗ್ರೆಸ್‌ಗೆ 2 ಸ್ಥಾನಗಳು, 17ರಲ್ಲಿ ಪಕ್ಷೇತರರು ಗೆದ್ದಿದ್ದಾರೆ.
* ವಾರಣಾಸಿಯಲ್ಲಿಯೂ ಮೇಯರ್ ಸ್ಥಾನ ಪಡೆದರೂ ಬಹುಮತ ಸಿಕ್ಕಿಲ್ಲ. ಬಿಜೆಪಿಗೆ ಸಿಕ್ಕಿದ್ದು 90ರಲ್ಲಿ 36 ಮಾತ್ರ. 22 ಪಡೆದು ಕಾಂಗ್ರೆಸ್ 2ನೇ ಸ್ಥಾನದಲ್ಲಿದೆ, ಎಸ್ಪಿಗೆ 13 ಮತ್ತು ಪಕ್ಷೇತರರಿಗೆ 11.
* ಅಲಹಾಬಾದ್ ಮಹಾನಗರಸಭೆಯಲ್ಲಿ ಮೇಯರ್ ಸ್ಥಾನವನ್ನು ಬಿಜೆಪಿ ಉಳಿಸಿಕೊಂಡಿದೆ. ಆದರೆ ಅಲ್ಲಿಯೂ ಬಹುಮತ ಪಡೆದಿಲ್ಲ, ಮಾತ್ರವಲ್ಲ, ಎಸ್ಪಿ ಹೆಚ್ಚಿನ ಸೀಟುಗಳನ್ನು ಗೆದ್ದಿದೆ. ಅದು 24 ಗೆದ್ದರೆ, ಬಿಜೆಪಿ ಪಡೆದಿರುವುದು 22 ಮಾತ್ರ. ಶಿವಸೇನೆ 1 ಮತ್ತು ಪಕ್ಷೇತರರು 18 ಗೆದ್ದಿದ್ದಾರೆ. ಕಾಂಗ್ರೆಸ್ 11 ಮತ್ತು ಬಿಎಸ್ಪಿ 3 ಪಡೆದಿವೆ
* ಅಮೇಥಿಯಲ್ಲಿರುವುದು ನಗರ ಪಂಚಾಯತ್. ಇಲ್ಲಿ ಕಾಂಗ್ರೆಸ್ ಕಳಪೆ ಫಲಿತಾಂಶ ಪಡೆದಿದೆ. ಅಧ್ಯಕ್ಷ ಸ್ಥಾನವನ್ನು ಬಿಜೆಪಿ ಪಡೆದಿದೆ.
* ಕೌಶಾಂಬಿ ಕೂಡ ನಗರ ಪಂಚಾಯತ್ ಹೊಂದಿರುವ ಸ್ಥಳ. ಇಲ್ಲಿ ಆರೂ ಸೀಟುಗಳನ್ನು ಬಿಜೆಪಿ ಕಳಕೊಂಡಿದೆ.

ಮತ್ತೊಂದು ಕುತೂಹಲಕಾರೀ ಸಂಗತಿಯೆಂದರೆ ಅಯೋಧ್ಯೆ ಮತ್ತು ಸುತ್ತಮುತಲ ಪುರಸಭಾ ಚುನಾವಣೆಗಳ ಫಲಿತಾಂಶ. ಅಯೋಧ್ಯೆಯಲ್ಲಿ ಬಿಜೆಪಿ ಗೆದ್ದಿದೆ, ಆದರೆ ಅದರ ಸುತ್ತಮುತ್ತಲಿನ ಸೀಟುಗಳಲ್ಲಿ ಗಮನಾರ್ಹ ಸೋಲು ಅನುಭವಿಸಿದೆ. 'ದಿ ವೈರ್' ಪತ್ರಿಕೆ ನಡೆಸಿದ ಚುನಾವಣಾ ಫಲಿತಾಂಶದ ಅಧ್ಯಯನದ ಪ್ರಕಾರ ಅಯೋಧ್ಯೆಯ ಸುತ್ತಲಿನ ಏಳು ಜಿಲ್ಲೆಗಳ 33 ಸೀಟುಗಳಲ್ಲಿ ಬಿಜೆಪಿ ಗೆದ್ದಿರುವುದು 6 ಮಾತ್ರ. ಎಸ್ಪಿ 12, ಬಿಎಸ್ಪಿ 5 ಮತ್ತು ಕಾಂಗ್ರೆಸ್ 3 ಗೆದ್ದಿವೆ, 7 ಪಕ್ಷೇತರರು ಗೆದ್ದಿದ್ದಾರೆ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಅಯೋಧ್ಯೆಯಲ್ಲಿ ಮತದಾನ ಯಂತ್ರವನ್ನು ಬಳಸಲಾಗಿತ್ತು, ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಮತಪತ್ರಗಳ ಮೂಲಕವೇ ಮತದಾನವಾಗಿದೆ.

ಉತ್ತರಪ್ರದೇಶದ ಪುರಸಭಾ ಚುನಾವಣೆಗಳ ಫಲಿತಾಂಶಗಳು ದೇಶದಲ್ಲಿರುವ ಭಾವನೆಗಳ ಅಳತೆಗೋಲು ಎಂದು ಬಿಜೆಪಿ ರಾಷ್ಟ್ರಾಧ್ಯಕ್ಷರು ಹೇಳಿದ್ದಾರೆ. ಗುಜರಾತ್ ಚುನಾವಣೆಗಳ ಮೇಲೂ ಇದರ ಪ್ರಭಾವ ಕಾಣಲಿದೆ ಎಂಬುದು ಅವರ ಅಭಿಪ್ರಾಯ. ಅವರು ದೊಡ್ಡ ಮಾಧ್ಯಮಗಳ ಮತ್ತು ತಮ್ಮ ಸ್ವಂತ ಪ್ರಚಾರಯಂತ್ರಗಳ ಅರೆಸತ್ಯಗಳನ್ನು, ಹಸಿ ಸುಳ್ಳುಗಳನ್ನು ನಂಬಿ ಇದನ್ನು ಹೇಳುತ್ತಿರಬಹುದು. ಆದರೆ, ಬಹುಶಃ ಈ ಬಾರಿ ಅವರು ಸತ್ಯ ಹೇಳುತ್ತಿದ್ದಾರೆ. ಬಿಜೆಪಿಯ ಬಗ್ಗೆ ಜನಗಳಲ್ಲಿ ಭ್ರಮನಿರಸನ ಅರಂಭವಾಗಿದೆ. ಎಂಬುದನ್ನು ಬಹುಶಃ ತಮಗರಿ ವಿಲ್ಲದೆಯೇ ಅವರು ಒಪ್ಪಿಕೊಳ್ಳುತ್ತಿದ್ದಾರೆ.

	ಮಹಾನಗರಸಭೆಗಳು	ನಗರಸಭೆಗಳು	ನಗರ ಪಂಚಾಯತುಗಳು
ಒಟ್ಟು ಸಂಖ್ಯೆ	16	198	438
ಒಟ್ಟುವಾರ್ಡುಗಳು	1300*	5261*	5434*
ಬಿಜೆಪಿ	596 (46%)	922(18%)	664 (12%)
ಎಸ್‌ಪಿ	202 (16%)	477 (9%)	453 (8%)
ಬಿಎಸ್‌ಪಿ	147 (11%)	262 (5%)	218 (4%)
ಕಾಂಗ್ರೆಸ್	110 (8%)	158 (3%)	126 (2%)
ಪಕ್ಷೇತರರು	245 (17%)	3442 64%)	3985 (71%)

*1 ಮಹಾನಗರ ಸಭೆ, 1 ನಗರ ಸಭೆ ಮತ್ತು 1 ನಗರ ಪಂಚಾಯತಿನ ಫಲಿತಾಂಶ ಇಲ್ಲ

ಗೆದ್ದಿದ್ದೆಷ್ಟು–ಠೇವಣಿ ನಷ್ಟ ಎಷ್ಟು

(ಕೃಪೆ: ಟೈಂಸ್ ಆಫ್ ಇಂಡಿಯ, ಡಿಸೆಂಬರ್7, 2017)

		ಬಿಜೆಪಿ	ಎಸ್‌ಪಿ	ಬಿಎಸ್‌ಪಿ	ಕಾಂಗ್ರೆಸ್
ಮೇಯರ್(16)	ಗೆದ್ದ ಸೀಟು	14	0	2	0
	ಠೇವಣಿ ನಷ್ಟ	0	10	11	10
	ಮತಗಳಿಕೆ	41.4	15.9	17.3	16.6
ಮಹಾನಗರಸಭೆ ಸದಸ್ಯರು(1299)	ಗೆದ್ದ ಸೀಟು	596	202	147	110
	ಠೇವಣಿ ನಷ್ಟ	339	750	712	846
	ಮತಗಳಿಕೆ	27.1	15.6	11.8	11.2
ನಗರಸಭೆಗಳ ಅಧ್ಯಕ್ಷರು(198)	ಗೆದ್ದ ಸೀಟು	70	45	29	9
	ಠೇವಣಿ ನಷ್ಟ	44	83	131	147
	ಮತಗಳಿಕೆ	28.6	21.7	14.3	6.8
ನಗರಸಭೆ ಸದಸ್ಯರು (5260)	ಗೆದ್ದ ಸೀಟು	922	477	262	158
	ಠೇವಣಿ ನಷ್ಟ	1,612	1,103	1,075	1,024
	ಮತಗಳಿಕೆ	16.0	8.8	5.8	3.9
ನಗರ ಪಂಚಾಯತ್ ಅಧ್ಯಕ್ಷರು(438)	ಗೆದ್ದ ಸೀಟು	100	83	45	17
	ಠೇವಣಿ ನಷ್ಟ	199	207	268	230
	ಮತಗಳಿಕೆ	19.8	16.6	10.9	5.3
ನಗರ ಪಂಚಾಯತ್ ಸದಸ್ಯರು(5433)	ಗೆದ್ದ ಸೀಟು	664	453	218	126
	ಠೇವಣಿ ನಷ್ಟ	1,462	769	713	513
	ಮತಗಳಿಕೆ	11.1	7.4	4.4	2.8
ಒಟ್ಟು(12, 644)	ಗೆದ್ದ ಸೀಟು	2,366	1,260	703	420
	ಠೇವಣಿ ನಷ್ಟ	3,656	2,922	2,910	2,770
	ಮತಗಳಿಕೆ	30.8	18.0	14.3	10.0



ಯಶಸ್ವಿ 22ನೇ ಕಲಬುರ್ಗಿ ಸಿಪಿಐ(ಎಂ) ಜಿಲ್ಲಾ ಸಮ್ಮೇಳನ



22ನೇ ಕಲಬುರ್ಗಿ ಸಿಪಿಐ(ಎಂ) ಜಿಲ್ಲಾ ಸಮ್ಮೇಳನ ಡಿಸೆಂಬರ್ 3 ರಿಂದ 5ರ ವರೆಗೆ ಕಮಲಾಪುರದಲ್ಲಿ ನಡೆಯಿತು. ಬಹಿರಂಗ ಸಭೆ ಕಮಲಾಪುರ ಬಸವೇಶ್ವರ ಚೌಕದ ಪಕ್ಕದಲ್ಲಿರುವ ಸರ್ಕಾರಿ ಶಾಲೆಯ ಆಟದ ಮೈದಾನದಲ್ಲಿ ನಡೆಯಿತು. ಸಮ್ಮೇಳನವನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾ. ಜಿ.ವಿ.ಶ್ರೀರಾಮರೆಡ್ಡಿ ಉದ್ಘಾಟಿಸಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕಾ/ ವಿ.ಜೆ. ಕೆ.ನಾಯರ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಬಹಿರಂಘ ಸಭೆಯ ಮೊದಲು ಆಕರ್ಷಕ ಮೆರವಣಿಗೆ ನಡೆಯಿತು.

ಪ್ರತಿನಿಧಿ ಅಧಿವೇಶನದ ಮೊದಲು. ಅಪ್ಪಾರಾಯ ವಾಡಿ ಧ್ವಜಾರೋಹಣವನ್ನು ಮಾಡಿದರು. ಪ್ರತಿನಿಧಿ ಅಧಿವೇಶನವನ್ನು ಕಾ. ಜಿ.ವಿ.ಶ್ರೀರಾಮರೆಡ್ಡಿ ಉದ್ಘಾಟಿಸಿದರು. ಕಾ.ಎಂ.ಬಿ.ಸಜ್ಜನ, ಕಾ.ಗಂಗಮ್ಮ ಬಿರಾದರ ಮತ್ತು ಕಾ. ಭಿಮಶಾ ದಂಡಗುಳಕರ ಇರುವ ಅಧ್ಯಕ್ಷೀಯ ಮಂಡಳಿ ಪ್ರತಿನಿಧಿ ಸಭೆಯನ್ನು ನಡೆಸಿತು. ಜಿಲ್ಲಾ ಕಾರ್ಯದರ್ಶಿ ಶರಣಬಸಪ್ಪ ಮಮಶೆಟ್ಟಿ ಕರಡು ವರದಿಯನ್ನು ಮಂಡಿಸಿದರು. ಕರಡು ವರದಿಯ ಬಗ್ಗೆ ಗುಂಪು ಚರ್ಚೆ ನಂತರ 13 ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದರು. ಜಿಲ್ಲಾ ಕಾರ್ಯದರ್ಶಿ ಚರ್ಚೆಗೆ ಉತ್ತರಿಸಿದರು.

ಈ ಕೆಳಗಿನ ನಿರ್ಣಯುಗಳನ್ನು ಸಮ್ಮೇಳನ ಅಂಗೀಕರಿಸಿತು:

1. ಹೈ. ಕರ್ನಾಟಕ ಪ್ರದೇಶದ 371ಜೆ ಕಲಮಿನಡಿ ಅನುದಾನ ನೀಡಬೇಕೆಂದು ಒತ್ತಾಯಿಸಿ
2. ಅಸಂಘಟಿತ ಕಾರ್ಮಿಕರಿಗೆ ರೂ. 18 ಸಾವಿರ ಕನಿಷ್ಟ ಕೊಡಲು ಒತ್ತಾಯಿಸಿ
3. ತೊಗರಿ ಬೇಳೆಗೆ ಬೆಂಬಲ ಬೆಲೆ ನೀಡಲು ಒತ್ತಾಯಿಸಿ
4. ಬಗರ್ ಹುಕುಂ ಸಾಗುವಳೀದಾರರಿಗೆ ಭೂಮಿ ಹಕ್ಕು ಪತ್ರ ಕೊಡಲು ಒತ್ತಾಯಿಸಿ
5. ಕಲಬುರ್ಗಿ ಜಿಲ್ಲೆಯಲ್ಲಿ ನೀರಾವರಿ ರೈತರಿಗೆ ಮತ್ತು ನಿರಾಶ್ರಿತರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಒತ್ತಾಯಿಸಿ



ಶರಣಬಸಪ್ಪ ಮಮಶೆಟ್ಟಿ

ಜಿಲ್ಲಾ ಸಮ್ಮೇಳನ 17 ಸದಸ್ಯರಿರುವ ಜಿಲ್ಲಾ ಸಮಿತಿ, 7 ಸದಸ್ಯರಿರುವ ಕಾರ್ಯದರ್ಶಿ ಮಂಡಳಿ ಮತ್ತು ರಾಜ್ಯ ಸಮ್ಮೇಳನಕ್ಕೆ 10 ಪ್ರತಿನಿಧಿಗಳನ್ನು ಆಯ್ಕೆ ಚುನಾಯಿಸಿತು. ಕಾ. ಶರಣಬಸಪ್ಪ ಮಮಶೆಟ್ಟಿ ಜಿಲ್ಲಾ ಕಾರ್ಯದರ್ಶಿಯಾಗಿ ಪುನರಾಯ್ಕೆಯಾದರು. ●

ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರುದ್ಧ

ಡಿಸೆಂಬರ್ 13ರಂದು ದೇಶದ್ಯಾಂತ ಪ್ರತಿಭಟನೆಗೆ ಸಿಐಟಿಯು ಕರೆ

ನಿರಂತರವಾಗಿ ಹೆಚ್ಚಳವಾಗುತ್ತಿರುವ ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರುದ್ಧ ಸಿಐಟಿಯು ಎಲ್ಲಾ ಗ್ರಾಮ ಸಮಿತಿಗಳು ಸ್ವತಂತ್ರ ಕೈಗಾರಿಕೆ ಪ್ರದೇಶ ನಗರ ಪಟ್ಟಣಗಳಲ್ಲಿ ಪ್ರಚಾರಾಂದೋಲನಕ್ಕೆ ಸಿಐಟಿಯು ಕೇಂದ್ರ ಸಮಿತಿ ಕರೆ ನೀಡಿದೆ. ಈ ಪ್ರಚಾರಾಂದೋಲನವು ಸಮಾರೋಪವು ಡಿಸೆಂಬರ್ 13ರಂದು ಪ್ರತಿಭಟನಾ ಪ್ರದರ್ಶನ, ನರೇಂದ್ರ ಮೋದಿಯ ಪ್ರತಿಕೃತಿ ದಹನದಂತಹ ಕಾರ್ಯಕ್ರಮಗಳ ಮೂಲಕ ನಡೆಸಲು ಕರೆ ನೀಡಿದೆ.

ಕೇಂದ್ರದ ಬಿಜೆಪಿ ಸರ್ಕಾರವು ಮೊಸದಾಟದ ಮೂಲಕ ಬೆಲೆಗಳು ಇಳಿಕೆಯಾಗಿದೆ ಎಂದು ಬಿಂಬಿಸಲು ಯತ್ನಿಸುತ್ತಿದೆ. ಆದರೆ ವಾಸ್ತವದಲ್ಲಿ ಎಲ್ಲಾ ಅಗತ್ಯ ವಸ್ತುಗಳಾದ ಆಹಾರ ಧ್ಯಾನ್ಯಗಳ, ತರಕಾರಿ, ಸಾರಿಗೆ, ಆರೋಗ್ಯ ಸೇವೆಗಳು, ಶಿಕ್ಷಣ ಇತ್ಯಾದಿಗಳ ಬೆಲೆಗಳು ನಿರಂತರವಾಗಿ ಹೆಚ್ಚಿಸಲಾಗುತ್ತಿದೆ. ಇದು ಮೋದಿ ಸರ್ಕಾರದ ನೀತಿಗಳು ಹಾಗೂ ವಿಫಲತೆಯು ಈ ಬೆಲೆ ಏರಿಕೆಗೆ ಕಾರಣವಾಗಿದೆ. ಬೆಲೆಗಳು ತನ್ನಿಂದ

ತಾನೇ ಏರಿಕೆಯಾಗುತ್ತಿಲ್ಲ ಅದು ಸರ್ಕಾರದ ನೀತಿಗಳಿಂದಾಗಿ ಮಧ್ಯವರ್ತಿಗಳು, ದೊಡ್ಡ ವ್ಯಾಪಾರಿಗಳು, ಕಾಳ ಸಂತೆಕೋರರ ನಿರ್ಬಂಧ ಮುಕ್ತ ವ್ಯಾಪಾರುಗಾರರಿಗೆ ಲಾಭ ಹೆಚ್ಚಿಸಲು ಬೇಕಾಗಿ ಬೆಲೆಗಳನ್ನು ಏರಿಸಲಾಗುತ್ತಿದೆ. ಆ ಮೂಲಕ ಜನ ಸಾಮಾನ್ಯರನ್ನು ದೋಚಲಾಗುತ್ತಿದೆ.

ದೇಶದಲ್ಲಿ ಮೋದಿ ಸರ್ಕಾರ ಆಡಳಿತಕ್ಕೆ ಬಂದ ನಂತರ ದೊಡ್ಡ ವ್ಯಾಪಾರರನ್ನು ನಿರ್ಬಂಧ ಮುಕ್ತ ವ್ಯಾಪಾರಕ್ಕೆ ಅವಕಾಶ ಕಲ್ಪಿಸುವಲ್ಲಿ ಮುಂಚೂಣಿಯಲ್ಲಿದೆ ಹಸಿವಿನ ಸೂಚ್ಯಂಕ ತಳ ಮುಟ್ಟಿದೆ. ಪೆಟ್ರೋಲ್–ಡೀಸೆಲ್‌ಗಳ ದರಗಳನ್ನು ನಿರಂತರವಾಗಿ ಹೆಚ್ಚಿಸಲಾಗುತ್ತಿದೆ. ಕಚ್ಚಾ ತೈಲ ಬೆಲೆಗಳು ತೀವ್ರ ಇಳಿಕೆ/ಮಧ್ಯಸ್ಥಿಕೆ ಇದ್ದರೂ ಸಹ ಜನ ಸಾಮಾನ್ಯರ ಉರುವಲು ಅಡಿಗೆ ಅನಿಲ ದರ ಸಹಾಯಧನ ಕಡಿತ ಮಾಡಲಾಗಿದೆ. ಈ ಕ್ರಮಗಳಿಂದಾಗಿ ಎಲ್ಲಾ ಅಗತ್ಯ ಸಾಮಾಗ್ರಿಗಳ ಬೆಲೆಗಳು ಗಗನ ಮುಟ್ಟಿದೆ. ನೋಟು ಅನಾಣ್ಯೀಕರಣ ಹಾಗೂ ಜಿಎಸ್‌ಟಿ ತಂದಿರುವ ಸರ್ಕಾರದ ಕ್ರಮಗಳು ಬೆಲೆ ಏರಿಕೆಗೆ ಪೂರಕವಾಗಿದೆ.

ಸಾರ್ವಜನಿಕ ಪಡಿತರ ವ್ಯವಸ್ಥೆಯು ಕುಸಿದು ಬಿದ್ದಿದೆ. ರೇಷನ್ ಕಾರ್ಡ್‌ನಲ್ಲಿ ಪಡಿತರ ಪಡೆಯಲು ಆಧಾರ್ ಕಾರ್ಡ್ ಲಿಂಕ್ ಒಳಗೊಂಡಂತೆ ಹಲವು ಶರತ್ತುಗಳನ್ನು ವಿಧಿಸಲಾಗುತ್ತಿದೆ. ಇದರಿಂದಾಗಿ ದೊಡ್ಡ ಸಂಖ್ಯೆಯ ಬಡ ಜನರು ಸಾರ್ವಜನಿಕ ಪಡಿತರ ವ್ಯವಸ್ಥೆ ವ್ಯಾಪ್ತಿಯಿಂದ ಹೊರದೂಡಲಾಗುತ್ತಿದೆ.

ಸರ್ಕಾರದ ಈ ನಡೆಗಳು ಆಹಾರ ಭದ್ರತಾ ಕಾಯಿದೆಗೆ ಅಪಹಾಸ್ಯ ಮಾಡಿದಂತೆ.

ರೈತರಿಗೆ ತಮ್ಮ ಉತ್ಪನ್ನಗಳಿಗೆ ನ್ಯಾಯ ಸಮ್ಮತವಾದ ಬೆಲೆಗಳು ಸಿಗುತ್ತಿಲ್ಲ. ಕೃಷಿ ಉತ್ಪನ್ನಗಳ ಧಾರಣೆಯು ಅತಿ ಕಡಿಮೆ ಬೆಲೆಗೆ ನಿಗದಿಪಡಿಸಲಾಗುತ್ತಿದೆ. ಸರ್ಕಾರ ಕನಿಷ್ಠ ವೇತನವನ್ನು ಹಾಗೂ ಕಲ್ಯಾಣ ಕಾರ್ಯಕ್ರಮಗಳ ವೆಚ್ಚಗಳನ್ನು ಕಡಿತ ಮಾಡುವ ಮೂಲಕ ಸಂಕಷ್ಟಗಳನ್ನು ಹೆಚ್ಚಿಸುತ್ತಿದೆ. ಉದ್ಯೋಗ ಖಾತರಿ ಯೋಜನೆಯಲ್ಲಿ ಸಿಗುವ ಕೆಲಸದ ದಿನಗಳು ಸರ್ಕಾರದ ಅನುದಾನದ ಕಡಿತವಾಗುತ್ತಿದೆ.

ಈ ಕೂಡಲೇ ಎಲ್ಲಾ ಜಿಲ್ಲಾ ಸಮಿತಿಗಳೂ ಜಿಲ್ಲಾ ಕೇಂದ್ರಗಳಲ್ಲಿ ಡಿಸೆಂಬರ್ 13ರಂದು ವ್ಯಾಪಕವಾದ ಬೃಹತ್ ಪ್ರತಿಭಟನೆ ಪ್ರದರ್ಶನವನ್ನು ನಡೆಸಲು ಕ್ರಮಕೈಗೊಳಲು ಸಿಐಟಿಯು ಕರೆ ನೀಡಿದೆ. ●

ಪುಟ 8 ರಿಂದ

........'ಮೋದಿ ಮ್ಯಾಜಿಕ್'ಗೆ ಈಗ ಸತ್ವ ಪರೀಕ್ಷೆ

ಯಾಜ್ಞಿಕ್ ಹೇಳುತ್ತಾರೆ.

7% ದಷ್ಟಿರುವ ದಲಿತರು ಭೂಹೀನರಾಗೇ ಉಳಿದಿದ್ದು, ಅವರ ಪಾರಂಪರಿಕ ಜೀವನಾಧಾರಗಳೂ ಮೋದಿ ಸರಕಾರದ ಧೋರಣೆಗಳಿಂದಾಗಿ ಬೆಳೆದಿರುವ 'ಗೋರಕ್ಷಕ ಹಾವಳಿಕೋರತನದಿಂದ ಬೆದರಿಕೆ ಗೊಳಗಾಗಿದೆ.

ರೈತರಲ್ಲಿ ಅಸಂತುಷ್ಟಿ, ಪಾಟಿದಾರರ ಆಕ್ರೋಶ, ಬುಡಕಟ್ಟು ಜನಗಳು, ದಲಿತರು, ಮೀನುಗಾರರು, ಉಪ್ಪು ತಯಾರಕರು ಮತ್ತಿತರ ಅಂಚಿಗೆ ತಳ್ಳಲ್ಪಟ್ಟಿರುವ ಸಮುದಾಯಗಳಲ್ಲಿ ಹರಡಿರುವ ಅಸಂತೃಪ್ತಿಯಿಂದಾಗಿ ಗ್ರಾಮೀಣ ಪ್ರದೇಶದ 98 ಸ್ಥಾನಗಳು ಬಿಜೆಪಿಯನ್ನು ಮುಂದಿನ ಐದು ವರ್ಷಗಳು ಯಾರು ಆಳಬೇಕು ಎಂಬುದನ್ನು ನಿರ್ಧರಿಸುತ್ತದೆ ಎಂದು ಕೆಲವು ವೀಕ್ಷಕರು ಅಭಿಪ್ರಾಯ ಪಡುತ್ತಾರೆ.

ಮತ್ತೆ ಮೋದಿ 'ಮ್ಯಾಜಿಕ್'?

ನಗರಪ್ರದೇಶಗಳಲ್ಲೂ ಬಿಜೆಪಿ ತನ್ನ ಪ್ರಭಾವ ಉಳಿಸಿಕೊಂಡಿದೆ ಎನ್ನಲು ಸಾಧ್ಯವೇ ಎಂಬ ಪ್ರಶ್ನೆಯೂ ಎದ್ದಿದೆ. ನೋಟುರದ್ಧತಿ ಮತ್ತು ಜಿಎಸ್‌ಟಿಗೆ ಜನಬೆಂಬಲ ದೊರೆತಿದೆ, ಈ ಕ್ರಮಗಳ ದುಷ್ಪರಿಣಾಮಗಳೇನೇ ಇದ್ದರೂ ನಿವಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಬಿಜೆಪಿ ಮತ್ತು ಅದರ ಸಮರ್ಥಕರು ಹೇಳುತ್ತಿದ್ದರೂ ವ್ಯಾಪಾರಿಗಳು ಮತ್ತು ಸಣ್ಣ ಉದ್ದಿಮೆಗಳವರ ನಡುವೆ ಇರುವ ಆಕ್ರೋಶವನ್ನು ಇದು ಎದುರಿಸಬಲ್ಲುದೇ? ಬಿಜೆಪಿಯ ಇತ್ತೀಚಿನ ಕಾರ್ಯತಂತ್ರದಂತೆ ಈ ರಾಜ್ಯದಲ್ಲೂ ಅದು ಬಹಳಷ್ಟು ಕಾಂಗ್ರೆಸ್ ಪಕ್ಷಾಂತರಿಗಳಿಗೆ ಟಿಕೆಟ್ ಕೊಟ್ಟಿದೆ.



ವ್ಯಂಗ್ಯಚಿತ್ರ ಕೃಪೆ: ಕೇಶವ್, ದಿ ಹಿಂದು

ಅತ್ತ ಕಾಂಗ್ರೆಸಿಗೂ ಬಿಜೆಪಿಯ ಇಂತಹ ಪರಿಸ್ಥಿತಿಯಿಂದಾಗಿ ಪ್ರಯೋಜನ ಸಿಗಬಹುದಾದರೂ ಗೆಲುವು ಅಷ್ಟೇನೂ ಸುಲಭವಲ್ಲ ಎನ್ನಲಾಗುತ್ತಿದೆ. ಈ ಚುನಾವಣೆಯಲ್ಲಿ ಅದು ಬಿಜೆಪಿಯ ತಂತ್ರಗಳನ್ನೆಲ್ಲವನ್ನು ಬಳಸುತ್ತಿದೆ, ಜತೆಗೆ ಕಳೆದ ಕೆಲವು ವರ್ಷಗಳಿಂದ ಹೆಚ್ಚುತ್ತಿರುವ ತನ್ನ ಮತಗಳಿಕೆಯನ್ನು ಬಿಜೆಪಿಯನ್ನು ಅಧಿಕಾರದಿಂದ ಇಳಿಸಬಹುದಾದಷ್ಟು ಪ್ರಮಾಣದಲ್ಲಿ ಗಮನಾರ್ಹವಾಗಿ ಹೆಚ್ಚಿಸಿಕೊಳ್ಳಲು ಅದಕ್ಕೆ ಸಾಧ್ಯವಾಗಬಹುದೇ ಎಂಬ ಪ್ರಶ್ನೆಯೂ ಇದೆ. ಇದರೊಂದಿಗೇ ಪ್ರತಿಯಾಗಿ ಗುಜರಾತ್ 'ಮಾದರಿ'ಯ ವಿಫಲತೆಯಿಂದ ಹರಡಿರುವ ಆಕ್ರೋಶವನ್ನು ಮೋದಿ ಮ್ಯಾಜಿಕ್ ಎಷ್ಟರ ಮಟ್ಟಿಗೆ ನಿವಾರಿಸಬಲ್ಲದು ಎಂಬ ಪ್ರಶ್ನೆಯೂ ಇದೆ. ಮೋದಿ–ಷಾ ಜೋಡಿಯ ರಾಜಕಾರಣದಿಂದಾಗಿ ಎರಡನೇ ಹಂತದ ಮುಖಂಡತ್ವ ಬೆಳೆದಿಲ್ಲ ಎಂಬ ಅಂಶ ಎಷ್ಟರ ಮಟ್ಟಿಗೆ ನಿಜ ಎಂಬುದಕ್ಕೂ ಈ ಚುನಾವಣೆಯಲ್ಲಿ ಉತ್ತರ ಸಿಗಬಹುದು.

ನೋಟು ರದ್ಧತಿ ಮತ್ತು ಜಿಎಸ್‌ಟಿಯನ್ನು ಜನತೆ ಬೆಂಬಲಿಸಿದೆ ಎಂಬುದನ್ನು ಉತ್ತರ ಪ್ರದೇಶದ ಪುರಸಭಾ ಚುನಾವಣೆಗಳು ತೋರಿಸಿವೆ ಎಂದು ಬಿಜೆಪಿ ಮುಖಂಡರು ಮತ್ತು ಅವರ ಸಮರ್ಥಕ ರಾಜಕೀಯ ವಿಶ್ಲೇಷಕರು ಹೇಳಿದ್ದರು. ಆದರೆ ಅದು ಶುದ್ಧ ಸುಳ್ಳು ಎಂದೀಗ ಸಾಬೀತಾಗಿದೆ (ಪುಟ 9ರಲ್ಲಿರುವ ಲೇಖನ ನೋಡಿ). ಗುಜರಾತಿನ ಮತದಾರರೂ ಅದನ್ನು ಅನುಮೋದಿಸಿ ಭಾರತದ ರಾಜಕೀಯದ ದಿಕ್ಕನ್ನು ಬದಲಿಸುತ್ತಾರೆಯೇ, ಕಾದು ನೋಡಬೇಕಾಗಿದೆ. ●

ಪಾನನಿಷೇಧದ ರಾಜ್ಯದಲ್ಲಿ 23 ಕೋಟಿ ರೂ.ಮೌಲ್ಯದ ಮದ್ಯ ವಶ

ಚುನಾವಣಾ ಆಯೋಗದ ಉಸ್ತುವಾರಿಯ ಜಾರಿ ಸಂಸ್ಥೆಗಳು ಗುಜರಾತಿನ ಮೊದಲ ಹಂತದ ಚುನಾವಣಾ ಪ್ರಚಾರದ ಅವಧಿಯಲ್ಲಿ 23 ಕೋಟಿ ರೂ.ಗಳ ಮದ್ಯ–ಸಾರಾಯಿಯನ್ನು ವಶಪಡಿಸಿಕೊಂಡಿದ್ದಾರೆ ಎಂದು ಪತ್ರಿಕೆಗಳು ವರದಿ ಮಾಡಿವೆ. ಗುಜರಾತಿನಲ್ಲಿ ಪಾನನಿಷೇಧ ಜಾರಿಯಲ್ಲಿದೆ ಎಂಬುದನ್ನು ಗಮನಿಸಬೇಕು.

ರಾಜ್ಯದ ವಿವಿಧ ಭಾಗಗಳಿಂದ 9.85 ಲೀಟರ್ ಮದ್ಯದ ಬಾಟಲಿಗಳಲ್ಲದೆ 27 ಕೆಜಿ ಚಿನ್ನ ಮತ್ತು 8.13 ಕೋಟಿ ರೂ. ಮೌಲ್ಯದ ಬೆಳ್ಳಿಯನ್ನೂ ವಶಪಡಿಸಿಕೊಳ್ಳಲಾಗಿದೆಯಂತೆ.

ಸಿಪಿಐ(ಎಂ) ಕೊಡಗು ಜಿಲ್ಲಾ ಸಮ್ಮೇಳನ
ಜನಾಂದೋಲನ ಹಾಗೂ ಪಕ್ಷದ ವಿಸ್ತರಣೆಗೆ ನಿರ್ಧಾರ

ಎಸ್.ವೈ. ಗುರುಶಾಂತ್

"ವಿಸ್ತರಣೆ..ವಿಸ್ತರಣೆ..., ಜಿಲ್ಲೆಯ ವಿದ್ಯಮಾನಗಳಲ್ಲಿ ಶಕ್ತಿಯುತ ಮಧ್ಯಪ್ರವೇಶ" ಇದು ಕೊಡಗು ಜಿಲ್ಲೆಯ ಸಿಪಿಐ(ಎಂ) ನ ಸಮ್ಮೇಳನದ ಪ್ರಮುಖ ಕರೆ. ಹೆಚ್ಚುತ್ತಿರುವ ಸಂಕಷ್ಟಗಳ ಸ್ಥಿತಿಗಳಿಗೆ ಎದುರಾಗಿ ಜನತೆಯ ಆಂದೋಲನ ವಿಸ್ತಾರಗೊಳ್ಳಬೇಕು. ಮುಖ್ಯವಾಗಿ ಸುಮಾರು ಆರೂವರೆ ದಶಕದ ಇತಿಹಾಸವಿರುವ ಕಮ್ಯುನಿಸ್ಟ್ ಪಕ್ಷದ ಮುನ್ನಡೆಗೆ ಈಗಿನ ತನ್ನ ನೆಲೆಯಿಂದ ಮತ್ತಷ್ಟೂ ಎಲ್ಲೆಡೆ ವಿಸ್ತರಣೆ ಆಗಬೇಕು. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ನಂತಹ ಪಕ್ಷಗಳ ವೈಫಲ್ಯಗಳು ಜನರನ್ನು ಹಾದಿ ತಪ್ಪಿಸುವ ಶೋಷಿಸುವ ನೀತಿಗಳ ಎದುರಲ್ಲಿ ಪರ್ಯಾಯ ರೂಪಿಸಲು ಸಿಪಿಐ(ಎಂ) ಪಕ್ಷ ವಿಸ್ತರಣೆಗೊಂಡು, ಮಹಾನ್ ಹೋರಾಟಗಳನ್ನು ನಡೆಸುವುದು ಅತೀ ಅಗತ್ಯ. ಇದನ್ನು ನೆರವೇರಿಸಲು ಸಿಪಿಐ(ಎಂ) ಪಕ್ಷ ತನ್ನ ಸಂಘಟನಾ ನೆಲೆ, ರಾಜಕೀಯ ಪ್ರಭಾವದ ವಿಸ್ತರಣೆ ಪ್ರಮುಖವಾಗಿದೆ ಎಂದು ಸಮ್ಮೇಳನವು ಈ ದೆಸೆಯ ಪ್ರಯತ್ನಗಳಿಗೆ ಒತ್ತು ನೀಡಿತು.

22 ನೆಯ ಅಖಿಲ ಭಾರತ ಮಹಾಧಿವೇಶನದ ಪೂರ್ವಭಾವಿಯಾಗಿ ನಡೆಯುತ್ತಿರುವ ಸಮ್ಮೇಳನಗಳಂತೆ ಸಿಪಿಐ(ಎಂ) ನ ಕೊಡಗು ಜಿಲ್ಲಾ ಸಮ್ಮೇಳನವು ಇದೇ 2017 ರ ನವೆಂಬರ್ 26 ಮತ್ತು 27 ರಂದು ವಿರಾಜಪೇಟೆ ತಾಲೂಕಿನಲ್ಲಿ ಸಿದ್ಧಾಪುರದಲ್ಲಿ ಯಶಸ್ವಿಯಾಗಿ ಜರುಗಿತು. 26 ರಂದು ನೆಲ್ಲುಹುದಿಕೇರಿಯಿಂದ ಬೆಳಿಗ್ಗೆ ಆರಂಭಗೊಂಡ ಅತ್ಯಂತ ಆಕರ್ಷಕ ಬೃಹತ್ ಮೆರವಣಿಗೆ ಸಿದ್ಧಾಪುರದ ಬಸ್ ನಿಲ್ದಾಣದ ಬಳಿಯ ವೇದಿಕೆ ತಲುಪಿ ಬಹಿರಂಗ ಸಭೆ ನಡೆಯುವ ಮೂಲಕ ಆರಂಭಗೊಂಡಿತು.



ಬಳಿಕ ಶ್ರೀ ನಾರಾಯಣ ಗುರು ಸಭಾಂಗಣದಲ್ಲಿ ಪ್ರತಿನಿಧಿಗಳ ಅಧಿವೇಶನ ಜರುಗಿತು. ಸಮ್ಮೇಳನದ ಪ್ರದೇಶಕ್ಕೆ ಕ್ರಾಮೇಡ್ ಎಸ್. ಪ್ರಸನ್ನಕುಮಾರ್ ನಗರ ಎಂತಲೂ, ಬಹಿರಂಗ ಸಭೆಯ ವೇದಿಕೆಗೆ ಕ್ರಾಂತಿಕಾರಿ ಫಿಡೆಲ್ ಕ್ಯಾಸ್ಟ್ರೋ ವೇದಿಕೆ ಎಂತಲೂ, ಸಮ್ಮೇಳನದ ಸಭಾಂಗಣಕ್ಕೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಕಾಂ. ಐ.ಆರ್. ಅಸ್ರಣ್ಣನವರ ಹೆಸರಿಸುವ ಮೂಲಕ ಅವರ ಕೊಡುಗೆಗಳನ್ನು ಆಂದೋಲನದ ಹೆಜ್ಜೆ ಗುರುತುಗಳನ್ನು ಸ್ಮರಿಸಲಾಯಿತು.

ಸಮ್ಮೇಳನದ ಧ್ವಜಾರೋಹಣವನ್ನು ಹಿರಿಯ ಸಂಗಾತಿ ಪಿ.ಎಲ್. ಅಬ್ದುಲ್ಲಾ ರವರು ಮಾಡುವ ಮೂಲಕ ಕಲಾಪಗಳಿಗೆ ಚಾಲನೆ ನೀಡಿದರು. ಹುತಾತ್ಮ ಸಂಗಾತಿಗಳಿಗೆ ಕ್ರಾಂತಿಕಾರಿ ಶ್ರದ್ಧಾಂಜಲಿ, ನಮನ ಸಲ್ಲಿಸಲಾಯಿತು. ಉದ್ಘಾಟನಾ ಸಮಾರಂಭದಲ್ಲಿ ಪ್ರತಿನಿಧಿಗಳು, ಹಿತೈಷಿಗಳೂ ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಅಧಿವೇಶನವನ್ನು ರಾಜ್ಯ ಸಮಿತಿಯ ಸದಸ್ಯರಾದ ಎಸ್.ವೈ ಗುರುಶಾಂತ್ ಉದ್ಘಾಟಿಸಿದರು. ಜಿಲ್ಲಾ ಸಂಘಟನಾ ಸಮಿತಿಯ ಕಾರ್ಯದರ್ಶಿ ಡಾ. ಐ.ಆರ್. ದುರ್ಗಾ ಪ್ರಸಾದ್ ರವರು ವಹಿಸಿದ್ದರು.



ಡಾ. ಐ.ಆರ್. ದುರ್ಗಾಪ್ರಸಾದ್

ಈ ಎರಡು ದಿನಗಳ ಸಮ್ಮೇಳನವನ್ನು ನಡೆಸಿಕೊಡಲು ಕಾಂ. ಮಹಾದೇವ, ಕಾಂ. ಪದ್ಮಿನಿ ಯವರ ಅಧ್ಯಕ್ಷೀಯ ಮಂಡಳಿಯನ್ನು ಚುನಾಯಿಸಲಾಯಿತು. ಹಾಗೆಯೇ ಅರ್ಹತಾ ಪರಿಶೀಲನಾ ಮಂಡಳಿ, ನಿರ್ಣಯ ಮಂಡಳಿ, ಕಲಾಪ ದಾಖಲಾತಿ ಮಂಡಳಿಗಳನ್ನು ಚುನಾಯಿಸಲಾಯಿತು.



ಸಮ್ಮೇಳನಕ್ಕೆ ಕಂಡು ವರದಿಯನ್ನು ಚರ್ಚೆಗಾಗಿ ಕಾರ್ಯದರ್ಶಿಯವರು ಮಂಡಿಸಿದರು. ಕಳೆದ ಸಮ್ಮೇಳನದಿಂದೀಚೆಗಿನ ಬೆಳವಣಿಗೆಗಳನ್ನು ಸಂಘಟನಾ ರಾಜಕೀಯ ವಿದ್ಯಾಮಾನಗಳನ್ನು ಈ ವರದಿಯು ಒಳಗೊಂಡಿದೆ.

ಈ ವರದಿ ಆರಂಭದಲ್ಲಿ ಅಂತರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯ ವಿದ್ಯಮಾನಗಳನ್ನು ಸಂಕ್ಷಿಪ್ತವಾಗಿ ಹಿನ್ನಲೆಯಾಗಿ ನೀಡಲಾಗಿದೆ. ಮುಖ್ಯವಾಗಿ ಕೊಡಗು ಜಿಲ್ಲೆಯ ಕುರಿತ ವಿಸ್ತೃತವಾದ ವಿಷಯಗಳಿಗೆ ಆದ್ಯತೆ ನೀಡಲಾಗಿದೆ. ಕೊಡಗು ಜಿಲ್ಲೆಯ ಭೌಗೋಳಿಕತೆ, ಗಡಿ ಪ್ರಾಕೃತಿಕ ಸಂಪತ್ತು, ಜನಜೀವನ, ಐತಿಹಾಸಿಕ, ಧಾರ್ಮಿಕ, ಭಾಷಾ ಸಂಯೋಜನೆಗಳು, ಮುಖ್ಯವಾಗಿ ಉತ್ಪಾದನಾ ವ್ಯವಸ್ಥೆ, ಶ್ರಮಿಕರ ನೀತಿ ಸಾಮಾಜಿಕ ಸನ್ನಿವೇಶಗಳು, ಇತ್ಯಾದಿಗಳ ವಿವರ ವಿಶ್ಲೇಷಣೆ ಇದೆ. ಸಾಮಾಜಿಕ ಸಂಯೋಜನೆಯ ವಿಶ್ಲೇಷಣೆ ಪಕ್ಷದ ಆಂದೋಲನ ನೀಡಬೇಕಾಗದ ಗಮನಕ್ಕೆ ಆಧಾರ ನೀಡುವಂತಿದೆ. ಹಿಂದು, ಮುಸ್ಲಿಂ, ಕ್ರಿಶ್ಚಿಯನ್, ಜೈನ ಧಾರ್ಮಿಕರು 18 ಮೂಲ ನಿವಾಸಿಗಳಾದ, ಗಣನೀಯ ಬುಡಕಟ್ಟು ಸಮುದಾಯಗಳು, ದಲಿತರೂ ಪ್ರಧಾನವಾಗಿ ಇರುವುದು ವಿಶೇಷ. ಅಲ್ಲದೇ ಹತ್ತಾರು ವಿಭಿನ್ನ ಭಾಷೆ ಇರುವುದು ಸಹ ವಿಶೇಷ: ಆರ್ಥಿಕವಾಗಿ ಕೃಷಿಯೇ ಪ್ರಧಾನ.. ಕಾಫಿ, ಭತ್ತ, ಮೆಣಸು ಇತ್ಯಾದಿ ಬೆಳೆಗಳು ಪ್ರಮುಖ. ಶೇ. 80ರಷ್ಟು ಕಾಫಿ ರಫ್ತಾಗುತ್ತದೆ. ಚಹಾ ಉತ್ಪಾದನೆಯೂ ಇದೆ. ಕಾಫಿ–ಟೀ ಉತ್ಪಾದನಾ ವಲಯ ಟಾಟಾ, ಬಿಬಿಟಿಸಿ ಯಂತಹ ಬಹುರಾಷ್ಟ್ರೀಯ ಕಂಪನಿಗಳ ಹಿಡಿತದಲ್ಲಿದೆ. ಇದೂ ಸೇರಿ ಉಳಿದಂತೆ ಪ್ಲಾಂಟೇಶನ್‌ಗಳಲ್ಲಿ ಒಂದು ಲಕ್ಷ ತೋಟ ಕಾರ್ಮಿಕರಿದ್ದಾರೆ. ಬಹುತೇಕರು ಆದಿವಾಸಿಗಳೂ ಹಗೂ ಹೊರಗಿನಿಂದ ವಲಸೆ ಬಂದಿರುವವರು. ಅವರ – ಮುಖ್ಯವಾಗಿ ಆದಿವಾಸಿಗಳ, ಕಾರ್ಮಿಕರ – ಜೀವನ ಜೀತದಾಳುಗಳದ್ದಾಗಿದೆ ಎಂಬ ಅಂಶ ಒಳಗೊಂಡ ವಿಸ್ತೃತವಾಗಿ ಶೋಷಣೆಯ ತೀವ್ರತೆಯನ್ನು ವರದಿ ಗಮನಿಸಿದೆ. ಕೃಷಿ ಬಿಕ್ಕಟ್ಟಿಗೆ ಪರಿಹಾರ ನೀಡದ ಆಳುವವರು ಪ್ರವಾಸೋದ್ಯಮಕ್ಕೆ ಒತ್ತು ನೀಡುತ್ತಿರುವುದು ಕೊಡಗು ಜಿಲ್ಲೆಯ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ವಲಯಗಳ ಮೇಲೆ ದುಷ್ಪರಿಣಾಮ ಬೀರುತ್ತಿರುವುದನ್ನು ಗುರುತಿಸಿ, ಸಾಮಾಜಿಕ ಕ್ಷೋಭೆಗೆ ಇದು ಹಾದಿ ಮಾಡುತಿದೆ. ಇದನ್ನು ಕೋಮುವಾದಿ ಮತೀಯ ಮೂಲಭೂತವಾದಿಗಳು ತಮ್ಮ ನೆಲೆ ವಿಸ್ತರಿಸಿಕೊಂಡು ರಾಜಕೀಯ ಆಡಳಿತ ಹಿಡಿತ ಬಲಗೊಳಿಸುತ್ತಿರುವ ವಿದ್ಯಮಾನಗಳನ್ನು ವಿಶ್ಲೇಷಿಸಿದೆ.

ಇಂತಹ ಬೆಳವಣಿಗೆಯಲ್ಲಿ ಜಿಲ್ಲೆಯ ರಾಜಕೀಯ ನೀತಿಗಳನ್ನು ವಿಶ್ಲೇಷಿಸಲಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿ ಇದ್ದರೂ, ಅಲ್ಲಿ ಮೇಲುಗೈ ಇದ್ದರೂ ಕೊಡಗಿನಲ್ಲಿ ಬಿಜೆಪಿ ಪಕ್ಷವೇ ಮೇಲುಗೈ ಸಾಧಿಸಿದೆ. ಕೋಮುವಾದಿ ಬಿಜೆಪಿಯ ವಿರುದ್ಧ ಜನತೆ ಕಾಂಗ್ರೆಸ್ ಗೆ ಬೆಂಬಲ ಕೊಟ್ಟರೂ ಅದನ್ನು ಬಳಸಿಕೊಳ್ಳುವ ಸ್ಥಿತಿಯಲ್ಲಿ ಕಾಂಗ್ರೆಸ್ ಇಲ್ಲ. ಬದಲಾಗಿ, ಬಿಜೆಪಿಯ ಪರ–ಸಂಘಪರಿವಾರ ಪರವಾಗಿರುವ ಶಕ್ತಿಗಳು ಇರುವುದನ್ನು ಕಂಡು ವರದಿ ಗುರುತಿಸಿದೆ. ಹೀಗಾಗಿ ಕೋಮುವಾದಿಗಳನ್ನು ಎದುರಿಸಲು ಕಾಂಗ್ರೆಸ್ ವಿಫಲವಾಗಿದೆ. ವರದಿ ಜನತೆ ದೃಢವಾದ ಪರ್ಯಾಯ ನಿರೀಕ್ಷಿಸುತ್ತಿದ್ದಾರೆ ಎಂದಿದೆ. ಜೆ.ಡಿ.ಎಸ್. ವೈಫಲ್ಯ, ಮೂಲಭೂತವಾದಿಯಾದ ಎಸ್.ಡಿ.ಪಿ.ಐ. ಪಕ್ಷವು ಜನತೆಯನ್ನು ಸೆಳೆಯುತ್ತಿರುವ ಅಂಶಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಲಾಗಿದೆ.

ಕೊಡಗಿನ ಒಟ್ಟು ಸನ್ನಿವೇಶದಲ್ಲಿ ಸಿಪಿಐ(ಎಂ) ಹಾಗೂ ಸಾಮೂಹಿಕ ಸಂಘಟನೆಗಳು ಹಲವಾರು ಗಮನಾರ್ಹ ಮಧ್ಯಪ್ರವೇಶ ಮಾಡಿದ್ದರು. ಪರ್ಯಾಯದ ನೀತಿಗಳನ್ನು ಪ್ರತಿಪಾದಿಸಿದೆ. ಒಟ್ಟು ಸಂಘಟನಾ ಅಂಶಗಳನ್ನು ವಿಶ್ಲೇಷಿಸಿರುವ ವರದಿಯು ಈಗಿನ ಮಧ್ಯಪ್ರವೇಶ ಸಾಲದು. ನಿರ್ದಿಷ್ಟ ವಿಭಾಗಗಳ ಆಂದೋಲನಕ್ಕೆ ಗಮನ ನೀಡಬೇಕು. ಜನ ಸಮೂಹಗಳ ನಡುವೆ ಪಕ್ಷಕ್ಕೆ ಇರುವ ಪ್ರಭಾವ, ಭಾಗಿತ್ವಕ್ಕೆ ಅನುಗುಣವಾಗಿ ಪಕ್ಷ ಸಂಘಟನೆ ವಿಸ್ತರಣೆ ಆಗಿಲ್ಲದಿರುವ ದೌರ್ಬಲ್ಯ, ಕೊರತೆಗಳನ್ನು ಗುರುತಿಸಿದ್ದು, ವಿಸ್ತರಣೆ ನಮ್ಮ ಆದ್ಯತೆಯಾಗಬೇಕೆಂದು ಹೇಳಿದೆ.

ಈ ವರದಿಯ ಮೇಲೆ ಪ್ರತಿನಿಧಿಗಳು ಮುಕ್ತವಾಗಿ ಚರ್ಚಿಸಿ ಪೂರ್ಣಗೊಳಿಸಿದರು.

ಸಮ್ಮೇಳನವು ಒಟ್ಟು 9 ಜನರ ಸಂಘಟನಾ ಸಮಿತಿಯನ್ನು ಆರಿಸಿತು. ಕಾರ್ಯದರ್ಶಿಯಾಗಿ ಡಾ. ಐ.ಆರ್. ದುರ್ಗಾಪ್ರಸಾದ್ ರವರನ್ನು ಸರ್ವಾನುಮತದಿಂದ ಆಯ್ಕೆಯಾದರು. (ಮೂರನೆಯ ಅವಧಿ ಮುಗಿದಿದ್ದು ರಾಜ್ಯ ಸಮಿತಿ ಅನೋಮೋದನೆ ಬೇಕಿದೆ.) ಸಾಬು, ಮಹಾದೇವ, ಹೆಚ್.ಪಿ. ರಮೇಶ್, ಎನ್.ಡಿ.ಕುಟ್ಟಪ್ಪ, ಜೋಸ್, ಶಿವಪ್ಪ, ವೈ.ಕೆ.ಗಣೇಶ್ ರವರನ್ನು ಬಹುಮತದಿಂದ ಆರಿಸಿತು. ರಾಜ್ಯ ಸಮೇಳನಕ್ಕೆ ಪ್ರತಿನಿಧಿ, ವೀಕ್ಷಕರೂ ಸರ್ವಾನುಮತದಿಂದ ಆಯ್ಕೆಯಾದರು. ಸಮ್ಮೇಳನದ ಸಮಾರೋಪವನ್ನೂ ಎಸ್.ವೈ.ಗುರುಶಾಂತ್ ಮಾಡಿದರು.

ಸಮ್ಮೇಳನದ ನಿರ್ಣಯಗಳು :

ಕೊಡಗು ಜಿಲ್ಲೆಯ ಜನತೆಯ ಪ್ರಮುಖ ಪ್ರಶ್ನೆಗಳ ಆಧಾರದಲ್ಲಿ ವ್ಯಾಪಕವಾದ ಚಳುವಳಿಗೆ ನಿರ್ಧಾರ; ಭೂಮಿ, ನಿವೇಶನಕ್ಕೆ ಒತ್ತು; ಪ್ಲಾಂಟೇಶನ್ ಕಾರ್ಮಿಕರು, ಬೆಳೆಗಾರರ ಉಳಿವಿಗಾಗಿ ಚಳುವಳಿ; ಕಸ್ತೂರಿ ರಂಗನ್ ವರದಿ ಒಳಗೊಂಡ ಹಲವಾರು ಪ್ರಶ್ನೆಗಳ ಬಗ್ಗೆ ಕೇಂದ್ರ ರಾಜ್ಯ ಸರಕಾರಗಳೂ, ಆಳುವ ಪಕ್ಷಗಳೂ ಎಡಬಿಡಂಗಿ ಆಟವಾಡಿ ವಂಚಿಸುತ್ತಿರುವುದರ ವಿರುದ್ಧ ಜಾಗೃತಿ ಆಂದೋಲನಕ್ಕೆ ನಿರ್ಧಾರ; ಕೋಮು ಸಾಮರಸ್ಯ, ಶಾಂತಿ ಕಾಪಾಡಲು ವಿಶಾಲ ನೆಲೆಯ ಕಾರ್ಯಕ್ರಮಗಳು; ವಿವಿಧ ಸಾಮಾಜಿಕ ಶಕ್ತಿಗಳ ಸಮಸ್ಯೆಗಳಿಗೆ ಸ್ಪಂದನೆ – ಹೀಗೆ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಗಿದೆ.

ಬಹಿರಂಗ ಸಭೆ :

26 ರಂದು ನಡೆದ ಬಹಿರಂಗ ಸಭೆಗೆ ಮುನ್ನ ಅತ್ಯಂತ ಆಕರ್ಷಕ ಮೆರವಣಿಗೆ ನಡೆಯುತ್ತಾ ತಲ್ಲಿಚೇರಿಯ ವಾದ್ಯ ತಂಡ ಮುಂದೆ ಸಾಗುತ್ತಿರುವಂತೆ ಹಿಂದೆ ನೂರಾರು ಕೆಂಪು ಸಮವಸ್ತ್ರಧಾರಿ ಸ್ವಯಂ ಸೇವಕರ ಪಥ ಸಂಚಲನ ಜನತೆಯನ್ನೂ ಸೆಳೆಯಿತು. ರಸ್ತೆಗಳ ಇಕ್ಕೆಲಗಳಲ್ಲಿ ಜನತೆ ನಿಂತು ಹರ್ಷದಿಂದ ವೀಕ್ಷಿಸಿದರು. ಬಹಿರಂಗ ಸಭೆಯನ್ನೂ ರಾಜ್ಯ ಸಮಿತಿ ಸದಸ್ಯರಾದ ಎಸ್.ವೈ. ಗುರುಶಾಂತ್ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ತಲ್ಲಿಚೇರಿ ಸಿಪಿಐ(ಎಂ) ಶಾಸಕ, ಯುವ ನಾಯಕ ಕಾಂ: ಶಂಶೀರ್ ಭಾಗವಹಿಸಿ ಮಾತನಾಡಿದ್ದು ಜನಮನ ಸೆಳೆಯಿತು. ಕಣ್ಣೂರಿನ ಜಿಲ್ಲಾ ಸಮಿತಿ ಸದಸ್ಯರಾದ ಕಾಂ:ಶ್ರೀಧರನ್, ಇರಿಟಿ ಸಹ ಪಾಲ್ಗೊಂಡಿದ್ದರು. ಸಭೆಯಲ್ಲಿ ಸ್ವಾಗತ ಅಧ್ಯಕ್ಷರಾದ ಹಿರಿಯ ವಕೀಲರೂ ಆದ ಐ.ಆರ್. ಪ್ರಮೋದ್, ಪ್ರಧಾನ ಕಾರ್ಯದರ್ಶಿ ಎನ್.ಟಿ. ಕುಟ್ಟಪ್ಪ, ಹೆಚ್.ವಿ. ರಮೇಶ್, ದುರ್ಗಾಪ್ರಸಾದ್ ರವರೂ ಸಹ ಮಾತನಾಡಿದರು. ●



ಕಾರ್ಪೋರೇಟ್‌ಗಳ ಸಾಲಮನ್ನಾಕ್ಕೆ ಇನ್ನು ಜನಸಾಮಾನ್ಯರ ಠೇವಣಿಗಳಿಗೇ ಕೈಹಾಕಲು ಅವಕಾಶ!



ಅಚ್ಛೇ ದಿನ್ ಬಗ್ಗೆ ಮಾತಾಡುವುದನ್ನೇ ಬಿಟ್ಟಿರುವ ಸರಕಾರ ಕಳೆದ ಜೂನ್‌ನಲ್ಲಿ ಸಂಸತ್ತಿನಲ್ಲಿ ಒಂದು ಮಸೂದೆಯನ್ನು ಮಂಡಿಸಿತು. ಅದರ ಹೆಸರು 'ಹಣಕಾಸು ನಿಯಂತ್ರಣ ಮತ್ತು ಠೇವಣಿ ವಿಮಾ ಮಸೂದೆ' ಅಥವ ಎಫ್‌ಆರ್‌ಡಿಐ ಬಿಲ್, 2017. ಅದರ ಘೋಷಿತ ಉದ್ದೇಶ ಬ್ಯಾಂಕ್, ವಿಮೆ, ಮತ್ತು ಹಣಕಾಸು ವಲಯದ ಇತರ ಸಂಸ್ಥೆ/ಕಂಪನಿಗಳು ತಮ್ಮ ವ್ಯವಹಾರಗಳಲ್ಲಿ ವಿಫಲವಾದಾಗ ಅದನ್ನು ಇತ್ಯರ್ಥ ಮಾಡುವುದು ಹೇಗೆ ಎಂಬುದಕ್ಕೆ ಒಂದು ಚೌಕಟ್ಟನ್ನು ರೂಪಿಸುವುದು. 2008ರ ಜಾಗತಿಕ ಹಣಕಾಸು ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ದೊಡ್ಡ ದೊಡ್ಡ ಹಣಕಾಸು ವ್ಯವಹಾರಗಳ ಕಂಪನಿಗಳು ದಿವಾಳಿಯಾದರೆ ಅವುಗಳಿಗೆ ಮಾತ್ರವಲ್ಲ ಆರ್ಥಿಕ ವ್ಯವಸ್ಥೆಗೂ ತೊಂದರೆಯಾಗುತ್ತದೆ ಎಂದು ಅವು ದಿವಾಳಿ ಯಾಗದಂತೆ ಪಾರು ಮಾಡಲು ಸರಕಾರಗಳು ಹಲವು ಕ್ರಮಗಳನ್ನು ಕೈಗೊಳ್ಳಬೇಕೆಂದು ಜಿ–7 ಅಂದರೆ ಜಗತ್ತಿನ ಶ್ರೀಮಂತ ದೇಶಗಳ ಕೂಟ ನಿರ್ಧರಿಸಿತು. ನಂತರ ಇದು ಜಿ–20 ಕೂಟವನ್ನೂ ಪ್ರವೇಶಿಸಿತು. ಇದರ ಸದಸ್ಯನಾಗಿರುವ ಭಾರತ ಈಗ ಇಂತಹ ಕಾನೂನೊಂದನ್ನು ತರಬೇಕಾಗಿದೆ. ಈ ಮಸೂದೆ ಅದಕ್ಕಾಗಿ ಎನ್ನಲಾಗಿದೆ, ಹಾಗೂ ಕೇವಲ 15 ದಿನಗಳ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಇದನ್ನು ತರಾತುರಿಯಿಂದ ಪಾಸು ಮಾಡಿಸಿಕೊಳ್ಳಬೇಕೆಂದಿದೆ.

ಇದರಲ್ಲಿ ಕಾರ್ಪೊರೇಟ್ ಸಾಲಮನ್ನಾದಂತಹ ದೊಡ್ಡ ಕಾರ್ಪೊರೇಟ್‌ಗಳು ದಿವಾಳಿಯಾಗದಂತೆ ಸಾರ್ವಜನಿಕ ಖಜಾನೆಯನ್ನು ಬಳಸುವ ಬೇಲ್–ಔಟ್ ಕ್ರಮಗಳಲ್ಲದೆ, ಈ ರೀತಿ ಸಾರ್ವಜನಿಕ ಹಣದ ಬಳಕೆಗೆ ಮಿತಿ ಹಾಕುವ ಹೆಸರಲ್ಲಿ ಠೇವಣಿದಾರರ ಹಣವನ್ನು ಬಳಸಲು ಅವಕಾಶ ನೀಡುವ 'ಬೇಲ್–ಇನ್' ಅಂಶಗಳೂ ಇವೆ ಎನ್ನಲಾಗಿದೆ. ಇವುಗಳಲ್ಲಿ ಠೇವಣಿದಾರರ ಠೇವಣಿಗಳಲ್ಲಿ ನಿರ್ದಿಷ್ಟ ಅಂಶವನ್ನು ಬಳಸಿಕೊಂಡು ಇಲ್ಲದಂತೆ ಮಾಡುವುದು, ಇಕ್ವಿಟಿಗಳಾಗಿ ಪರಿವರ್ತಿಸುವುದು, ಉಳಿತಾಯ ಖಾತೆಗಳನ್ನು 5ವರ್ಷಗಳ ಎಫ್‌ಡಿಗಳಾಗಿ ಪರಿವರ್ತಿಸುವುದು ಇತ್ಯಾದಿ ಸೇರಿವೆ.

ಇತ್ತೀಚೆಗೆ ಸೈಪ್ರಸ್‌ನಲ್ಲಿ ಬ್ಯಾಂಕ್ ದಿವಾಳಿಯನ್ನು ತಪ್ಪಿಸಲು ಸಾಮಾನ್ಯ ಠೇವಣಿದಾರರ 45%ದಷ್ಟು ಠೇವಣಿಗಳನ್ನು ಕಸಿದುಕೊಂಡ ನಿರ್ದಿಷ್ಟ ಉದಾಹರಣೆಯೂ ಇದೆ.

ಭಾರತದಲ್ಲಿ ಇನ್ನೂ ಬ್ಯಾಂಕಿಂಗ್ ಮತ್ತು ವಿಮಾ ವಲಯಗಳಲ್ಲಿ ಸಾರ್ವಜನಿಕ ವಲಯದ ಪಾಲೇ ದೊಡ್ಡದಾಗಿರುವುದರಿಂದ ಇದು ಅಪಾಯಕಾರಿಯೇನೂ ಆಗಬಾರದಿತ್ತು. ಆದರೆ ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಪಡೆದ ಸಾಲಗಳನ್ನು ದೊಡ್ಡ ಕಾರ್ಪೊರೇಟ್‌ಗಳು ಮರುಪಾವತಿ ಮಾಡದೆ ಅದು 10ಲಕ್ಷ ಕೋಟಿ ರೂ.ಗಳನ್ನು ದಾಟಿರುವುದು, ಅವನ್ನು ವಸೂಲಿ ಮಾಡುವ ಬದಲು, ಮನ್ನಾ ಮಾಡುವಲ್ಲಿಯೇ ಈ ಸರಕಾರ ಹಿಂದಿನ ಸರಕಾರಕ್ಕಿಂತಲೂ ಹೆಚ್ಚಿನ ಮುತುವರ್ಜಿ ವಹಿಸಿರುವುದು ಮತ್ತು ಆರ್ಥಿಕ ವ್ಯವಹಾರಗಳಲ್ಲೂ ಮತ್ತೆ–ಮತ್ತೆ ವ್ಯಕ್ತವಾಗುತ್ತಿರುವ ಜಾಗತಿಕ ಬಂಡವಾಳಿಗರ ಪರವಾದ ಸರ್ವಾಧಿಕಾರಶಾಹಿ ಪ್ರವೃತ್ತಿ ಖಂಡಿತಾ ಈ ಹಣಕಾಸು ಸಂಸ್ಥೆಗಳಲ್ಲಿ ತಮ್ಮ ಸುರಕ್ಷಿತ ಭವಿಷ್ಯಕ್ಕೆಂದು ತಾವು ಕಷ್ಟಪಟ್ಟು ಉಳಿಸಿಟ್ಟ ಹಣಕ್ಕೆ ಸಂಚಕಾರ ತರಬಹುದೆಂಬ ಭೀತಿ ಜನಸಾಮಾನ್ಯರಲ್ಲಿ ಉಂಟಾಗಿದ್ದರೆ ಅದಕ್ಕೆ ಆಶ್ಚರ್ಯ ಪಡಬೇಕಿಲ್ಲ.

ಇದಲ್ಲದೆ ಈ ಮಸೂದೆ ಸರಕಾರಕ್ಕೆ ಕೊಡುವ ವ್ಯಾಪಕ ಅಧಿಕಾರವನ್ನು ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಖಾಸಗೀಕರಿಸಲು ಕೂಡ ದುರುಪಯೋಗ ಪಡಿಸಿಕೊಳ್ಳಬಹುದು ಎಂಬ ಸಂದೇಹಕ್ಕೂ ಬಹಳಷ್ಟು ಆಧಾರಗಳಿವೆ. ಆದ್ದರಿಂದಲೇ ಬ್ಯಾಂಕ್ ನೌಕರರ, ಅಧಿಕಾರಿಗಳ ಸಂಘಟನೆಗಳು ಕೂಡ ಇದನ್ನು ಬಲವಾಗಿ ವಿರೋಧಿಸುತ್ತಿವೆ.

ಪರ್ಮನೆಂಟ್ ನೋಟುರದ್ಧತಿ–ಎಫ್‌ಆರ್‌ಡಿಐ



ವ್ಯಂಗ್ಯಚಿತ್ರ: ಶೇಖರ್ ಗುರೇರ

ಕಳೆದ 6 ತಿಂಗಳಲ್ಲೇ 55 ಸಾವಿರ ಕೋಟಿ ರೂ.ಗಳ ಬ್ಯಾಂಕ್ ಸಾಲ 'ರೈಟ್ ಆಫ್'

ಸಾರ್ವಜನಿಕ ವಲಯದ ಬ್ಯಾಂಕುಗಳು 2017–18ರ ಹಣಕಾಸು ವರ್ಷದ ಮೊದಲ ಆರುತಿಂಗಳಲ್ಲಿ ಒಟ್ಟು 55,356 ಕೋಟಿರೂ.ಗಳಷ್ಟು ಸಾಲಗಳನ್ನು 'ರೈಟ್–ಆಫ್' ಅಂದರೆ ತಮ್ಮ ಲೆಕ್ಕದಿಂದ ತೆಗೆದು ಹಾಕಿವೆ. ಆರ್ಥಿಕ ಮಂದಗತಿಯಿಂದಾಗಿ ಉದ್ದಿಮೆಗಳು, ಕಂಪನಿಗಳು ಸಾಲ ಬಾಕಿ ಇಟ್ಟುಕೊಳ್ಳುತ್ತಿರುವುದು ಹೆಚ್ಚುತ್ತಿರುವುದರಿಂದ ಬ್ಯಾಂಕುಗಳ ಲೆಕ್ಕಪತ್ರಗಳನ್ನು 'ಸ್ವಚ್ಛ'ಗೊಳಿಸಲು ಇಷ್ಟು ಹಣವನ್ನು ತೆಗೆದು ಬಿಡಲಾಗಿದೆ ಎಂದು ಸಾಲ ಅರ್ಹತೆ ಮಾಪನ ಮಾಡುವ ಸಂಸ್ಥೆ ಐಸಿಆರ್‌ಎ ಹೇಳಿದೆ.

ಕಳೆದ ವರ್ಷ ಇದೇ ಅವಧಿಯಲ್ಲಿ 35,986 ಕೋಟಿ ರೂ.ಗಳ ರೈಟ್–ಆಫ್ ಆಗಿತ್ತು. ಅಂದರೆ ಈ ಆರು ತಿಂಗಳಲ್ಲಿ ಅದರ ಒಂದೂವರೆ ಪಟ್ಟು ಬ್ಯಾಂಕ್‌ಗಳ ಲೆಕ್ಕಕ್ಕೆ ಬರದೇ ಹೋಗಿದೆ. ಬಹುಶಃ ಈ ಹಣಕಾಸು ವರ್ಷದಲ್ಲಿ ಹೀಗೆ 1ಲಕ್ಷ'ಕೋಟಿ ರೂ.ಗಳಷ್ಟು ಸಾಲಬಾಕಿ ಲೆಕ್ಕದಿಂದ ಹೊರಹೋಗಬಹುದು.

ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಮಾಹಿತಿ ಹಕ್ಕಿನ ಅಡಿಯಲ್ಲಿ ರಿಝರ್ವ್ ಬ್ಯಾಂಕಿನಿಂದ ಪಡೆದ ಅಂಕಿ–ಅಂಶಗಳ ಆಧಾರದಲ್ಲಿ ಲೆಕ್ಕ ಹಾಕಿದಾಗ ಕಳೆದ ಹತ್ತು ವರ್ಷಗಳಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳು ತಮ್ಮ ಲೆಕ್ಕಪತ್ರದಿಂದ ತೆಗೆದು ಹಾಕಿದ ಹಣದ ಮೊತ್ತ 3.6 ಲಕ್ಷ ಕೋಟಿ ರೂ. ದಾಟಿದೆ.

ರಿಝರ್ವ್ ಬ್ಯಾಂಕ್ ಮತ್ತು ಇತರ ಪರಿಣಿತರ ಪ್ರಕಾರ ಈ ರೈಟ್–ಆಫ್ ಸಾಲಮನ್ನಾ ಅಲ್ಲ.. ಇದನ್ನು ವಸೂಲಿ ಮಾಡಲಾಗುವುದು. ಇದು ಬ್ಯಾಂಕ್‌ಗಳ ಲೆಕ್ಕಪತ್ರವನ್ನು 'ಸ್ವಚ್ಛ'ಗೊಳಿಸಲು ಆಗಾಗ ಕೈಗೊಳ್ಳುವ ಕೇವಲ 'ತಾಂತ್ರಿಕ ಕ್ರಮ' ಎನ್ನುತ್ತಾರೆ ಅವರು. ಆದರೆ ಹತ್ತು ವರ್ಷಗಳ ಹಿಂದೆ ಕೇವಲ 8000 ಕೋಟಿರೂ.ಗಳಷ್ಟಿದ್ದ ಇದೀಗ ವರ್ಷೇ –ವರ್ಷೇ ತೀವ್ರವಾಗಿ ಏರುತ್ತಿದೆ, **ಇದರಲ್ಲಿ 2ಲಕ್ಷ ಕೋಟಿರೂ.ಗಿಂತಲೂ ಹೆಚ್ಚು ಅಂದರೆ 60% ದಷ್ಟು ಈ 'ಅಚ್ಛೇದಿನ್'ಗಳಲ್ಲೇ ಆಗಿದೆ ಎಂದು ಇಲ್ಲಿರುವ ಕೋಷ್ಟಕದಲ್ಲಿ ಕಾಣುತ್ತದೆ. ಅಂದರೆ ಇದೂ 'ಸ್ವಚ್ಛ ಭಾರತ್'ನ ಭಾಗವೇ?**

ಆದರೆ ಈ ರೀತಿ ಬ್ಯಾಂಕ್ ಲೆಕ್ಕಪತ್ರಗಳನ್ನು 'ಸ್ವಚ್ಛ'ಗೊಳಿಸುವುದರ ಅರ್ಥವಾದರೂ ಏನು? ಉದಾ: ವಿಜಯ ಮಲ್ಯರ ಸಾಲವನ್ನು 'ರೈಟ್–ಆಫ್' ಮಾಡಿದ್ದಾರೆ. ಅದನ್ನು ಈಗ ಹೇಗೆ ವಸೂಲಿ ಮಾಡುತ್ತಾರೆ ಎಂದೊಬ್ಬ ನಿವೃತ್ತ ರಿಝರ್ವ್ ಬ್ಯಾಂಕ್ ಅಧಿಕಾರಿಯೇ ಕೇಳಿದ್ದಾರೆ. ಇದು ತಾಂತ್ರಿಕ ಕ್ರಮವಷ್ಟೆ ಆಗಿದ್ದರೆ ಬಹಳ ಅಪರೂಪವಾಗಿ ಬಳಕೆಯಾಗಬೇಕು, ಪ್ರತಿ 3–6 ತಿಂಗಳೂ ಬಳಕೆಯಾಗುವಂತಾಗಬಾರದು, ಸಾಲಕ್ಕೆ ಪರಭಾರೆಯಾಗಿರುವ ಆಸ್ತಿಗಳಿರುವಾಗ ಈ ರೀತಿ 'ರೈಟ್–ಆಫ್' ಮಾಡಬಾರದು, ಅಲ್ಲದೆ ಇಂತಹ ರೈಟ್–ಆಫ್‌ಗಳು ಆಗಾಗ ಪರೀಕ್ಷಣೆಗೊಳಪಡಬೇಕು ಎನ್ನುತ್ತಾರೆ ಅವರು. ಈಗ ನಿಜವಾಗಿಯೂ ರೈಟ್–ಆಫ್ ಗೂ ಸಾಲಮನ್ನಾಕ್ಕೂ ವ್ಯತ್ಯಾಸ ಉಳಿದಿದೆಯೇ ಎಂಬುದು ಗಂಭೀರವಾದ ಪ್ರಶ್ನೆ.

ಹತ್ತು ವರ್ಷಗಳಲ್ಲಿ ಸಾಲ ರೈಟ್–ಆಫ್

ವರ್ಷ	ಮೊತ್ತ (ಕೋಟಿ ರೂ.ಗಳಲ್ಲಿ)
2007-08	8,019
2008-09	7,461
2009-10	11,185
2010-11	17,794
2011-12	15,551
2012-13	27,231
2013-14	34,409
2014-15	49,018
2015-16	57,585
2016-17*	77,123
2017-18*	55,356**
TOTAL	360,912

** Half year. Source: RBI *Source: ICRA

ರಾಜಸ್ಥಾನದಲ್ಲಿ ಮತ್ತೊಂದು ಭೀಕರ ಹತ್ಯೆ

–ಲವ್ ಜಿಹಾದ್ ಹೆಸರಲ್ಲಿ ಸಾಯಿಸಿ ವೀಡಿಯೋ ಮಾಡುವ ಭಂಡತನ

ಪಶ್ಚಿಮ ಬಂಗಾಲದ ಮಾಲ್ದಾದಿಂದ ಹೊಟ್ಟೆಪಾಡಿಗೆ ರಾಜಸ್ತಾನದ ರಜ್ಸಾಮಂದ್ ಜಿಲ್ಲೆಗೆ ಬಂದು ಕಳೆದ 12 ವರ್ಷದಿಂದ ದುಡಿಯುತ್ತಿದ್ದ ಮಹಮ್ಮದ್ ಅಫ್ರಝುಲ್ ಎಂಬ 48 ವರ್ಷದ ವಲಸೆ ಕಾರ್ಮಿಕನನ್ನು ಡಿಸೆಂಬರ್ 6ರಂದು ಶಂಭುಲಾಲ್ ರೇಗರ್ ಎಂಬಾತ ಕೊಡಲಿಯಿಂದ ಕಡಿದು ಸಾಯಿಸಿ ಆತನ ಹೆಣವನ್ನು ಸುಟ್ಟು ಹಾಕಿದ್ದೇ ಅಲ್ಲದೆ, ಈ ಹೊಲಸು ಕೃತ್ಯವನ್ನು ತನ್ನ 14 ವರ್ಷದ ಅಳಿಯನಿಂದಲೇ ವೀಡಿಯೋ ಮಾಡಿಸಿಕೊಂಡಿದ್ದಾನೆ. ನಂತರ ಹತ್ತಿರದ ದೇವಸ್ಥಾನಕ್ಕೆ ಹೋಗಿ ಇದು ಲವ್ ಜಿಹಾದಿಗಳಿಗೆ ತಾನು ಕಲಿಸುವ ಪಾಟ, ಬಾಬ್ರಿ ಮಸೀದಿ ಧ್ವಂಸದ ನಂತರವೂ ಇವರೆಲ್ಲ ಪಾಟ ಕಲಿತಿಲ್ಲ ಎಂದೆಲ್ಲ ಅಬ್ಬರಿಸಿದ್ದಾನೆ. ಈ ಎರಡೂ ವೀಡಿಯೋಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದು ಅದನ್ನು ತಡೆಯಲು ಜಿಲ್ಲೆಯಲ್ಲಿ ಇಂಟರ್ನೆಟ್ ಸೇವೆಗಳನ್ನು ಸದ್ಯಕ್ಕೆ ನಿಲ್ಲಿಸಲಾಗಿದೆ, ಆತನನ್ನು ಬಂಧಿಸಲಾಗಿದೆ ಎಂದು ಪೋಲೀಸರು ಹೇಳಿದ್ದಾರೆ.

ಇತ್ತೀಚಿನ ತಿಂಗಳುಗಳಲ್ಲಿ ಇಂತಹ ದ್ವೇಷ ಹತ್ಯೆಗಳಿಗೆ ಕುಖ್ಯಾತವಾಗುತ್ತಿರುವ ರಾಜಸ್ತಾನದ ಗೃಹಮಂತ್ರಿಗಳಿಗೂ ಈ ಬಾರಿ ಈ ವ್ಯಕ್ತಿ ಒಬ್ಬನನ್ನು ಕಡಿದು ಹಾಕಿದ್ದೇ ಅಲ್ಲದೆ ಅದರ ವೀಡಿಯೋ ಮಾಡಿರುವುದು ಆಘಾತ ಉಂಟು ಮಾಡಿದೆಯಂತೆ. ಈ ರಾಜ್ಯದ ಡಿಜಿಪಿ "ಇದೊಂದು ಅಮಾನುಷ ಕೃತ್ಯ, ಬುದ್ಧಿ ನೆಟ್ಟಗಿರುವ ಯಾವುದೇ ವ್ಯಕ್ತಿಯ ಕೃತ್ಯ ಇದಲ್ಲ ಎಂದು ಮೇಲ್ನೋಟಕ್ಕೇ ಕಾಣುತ್ತದೆ" ಎಂದಿದ್ದಾರಂತೆ.


ಆದರೆ ಪೆಹ್ಲೂ ಕಾನ್, ಅಹ್ಮದ್ ಖಾನ್, ಉಮ್ಮರ್ ಖಾನ್, ಝುಫರ್ ಹುಸೇನ್ ಮತ್ತು ಉಮರ್ ಅಹ್ಮದ್ ಹತ್ಯೆಗಳು ಕೂಡ ಬುದ್ಧಿ ನೆಟ್ಟಗಿರುವವರು ಮಾಡಿರುವ ಕೃತ್ಯಗಳಂತೆ ಕಾಣುತ್ತಿದೆಯೇ ಗೊತ್ತಿಲ್ಲ. ಇವರ ಕೊಲೆಗಡುಕರಲ್ಲಿ ಹಲವರನ್ನು ರಕ್ಷಿಸುವ ಪ್ರಯತ್ನವನ್ನು ಪೋಲೀಸರೇ ಮಾಡುತ್ತಿದ್ದಾರೆ ಎಂದೂ ವರದಿಯಾಗಿತ್ತು.

ನಿಜ, ಇಂತಹ ದ್ವೇಷ ಹತ್ಯೆಗಳು ದಿನೇದಿನೇ ಹೆಚ್ಚೆಚ್ಚು ಕ್ರೂರ ರೂಪ ತಳೆಯುತ್ತಿವೆ. ಹೀಗೇಕೆ, ಇಂತಹ ವಾತಾವರಣವೊಂದು ಸೃಷ್ಟಿಯಾಗಿದೆಯೇ, ಆಗಿದ್ದರೆ ಅದನ್ನು ಮಾಡಿರುವವರು ಯಾರು ಎಂದು ಕಾನೂನು ವ್ಯವಸ್ಥೆಯ ಗುರುತರ ಹೊಣೆಯಿರುವವರೆಲ್ಲ ಯೋಚಿಸಬೇಕಾಗಿದೆ.

"ಏನಿದು ಲವ್‌ಜಿಹಾದ್, ನಮಗೆ ಗೊತ್ತಿಲ್ಲ. ಅವರಿಗೆ ಮೊಮ್ಮಕ್ಕಳಿದ್ದಾರೆ. ನನ್ನಪ್ಪನನ್ನು ಪ್ರಾಣಿಯಂತೆ ಕೊಚ್ಚಿ ಹಾಕಿದ್ದಾರೆ. ನಾನು ವೀಡಿಯೋ ನೋಡಿದೆ. ಅಸಹಾಯಕನಾದ ನನ್ನಪ್ಪನ ಕೂಗನ್ನು ಕೇಳಿದೆ" ಎನ್ನುತ್ತಾಳೆ ಅಫ್ರಝುಲ್‌ರ ಮಗಳು ರೆಜಿನಾ ಖಾತುಮ್.

"ಒಂದು ದೊಡ್ಡ ಪಿತೂರಿ ನಡೆದಿದೆ. ದೊಡ್ಡ–ದೊಡ್ಡವರೆಲ್ಲ ಇದರಲ್ಲಿದ್ದಾರೆ. ನಾವು ಕೂಲಿಯವರು, ಏನು ಮಾಡಲು ಸಾಧ್ಯ" ಎನ್ನುತ್ತಾಳೆ ಅಸಹಾಯಕತೆಯಿಂದ ಸೋದರ ಸೊಸೆ ಝೀನತ್ ಖಾನ್.

ಹೌದು, ರಾಜಸ್ತಾನದ ಡಿಜಿಪಿ ಹೇಳುವಂತೆ ಇದು ಬುದ್ಧಿ ನೆಟ್ಟಗಿರುವವರು ಮಾಡುವಂತದ್ದಲ್ಲ. ಆದರೆ ಆ ವ್ಯಕ್ತಿಯ ಬುದ್ಧಿ ಕೆಡಿಸಿದವರು ಯಾರು? ಅವರ ರಾಜ್ಯದಲ್ಲೇ ಮೇಲೆ ಹೇಳಿದಂತೆ ದ್ವೇಷ ಹತ್ಯೆಗಳ ಸರಣಿಯೇ ಇರುವಾಗ "ದೊಡ್ಡ–ದೊಡ್ಡವರೆಲ್ಲರ ಪಿತೂರಿ" ಎಂಬ ಸಂದೇಹವನ್ನು ಕಾನೂನುಪಾಲಕರೆನಿಸಿಕೊಂಡವರು ತಳ್ಳಿ ಹಾಕಿ ಇಂತಹ ಕುಕೃತ್ಯಗಳಿಗೆ ತಡೆ ಹಾಕಲು ಸಾಧ್ಯವೇ?



ವ್ಯಂಗ್ಯಚಿತ್ರ: ಕರ್ನಿಕ, ಇಂಡಿಯನ್ ಕಾರ್ಟೂನ್ ಗ್ಯಾಲರಿ

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಜಿಎಸ್‌ಟಿಯೂ ಜಾಗತೀಕರಣವಾದಿ ಮನುವೂ

* ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಜಿಎಸ್‌ಟಿ ಯ ಸ್ವರೂಪದ ಬಗ್ಗೆ ಒಂದು ಪ್ರಬಂಧ ಬರೆಯಿರಿ. * ಮನು ಜಾಗತೀಕರಣದ ಮೊದಲ ಚಿಂತಕ–ಚರ್ಚಿಸಿ. ಇದು ಬನಾರಸ್ ಹಿಂದೂ ವಿಶ್ವವಿದ್ಯಾಲಯದ ರಾಜಕೀಯಶಾಸ್ತ್ರದ ಈ ಬಾರಿಯ ಪ್ರಶ್ನೆ ಪತ್ರಿಕೆಯಲ್ಲಿನ 15 ಮಾರ್ಕಿನ ಎರಡು ಪ್ರಶ್ನೆಗಳು.

'ಪ್ರಾಚೀನ ಮತ್ತು ಮಧ್ಯಯುಗೀನ ಭಾರತದಲ್ಲಿ ಸಾಮಾಜಿಕ ಮತ್ತು ರಾಜಕೀಯ ಚಿಂತನೆ' ವಿಷಯದ ಪಠ್ಯಕ್ರಮದಲ್ಲಿ ಇವು ಇಲ್ಲ ಎಂದು ವಿದ್ಯಾರ್ಥಿಗಳು ಹೇಳುತ್ತಾರೆ. ಆದರೆ ಈ ಪ್ರಶ್ನೆಪತ್ರಿಕೆ ರಚಿಸಿದ ಪ್ರೊ. ಕೆ.ಕೆ.ಮಿಶ್ರ ವಿದ್ಯಾರ್ಥಿಗಳಿಗೆ ಈ ಉದಾಹರಣೆಗಳನ್ನು ಪರಿಚಯಿಸಬೇಕು ಎಂಬುದು ನನ್ನ ಯೋಚನೆ, ಪಠ್ಯದಲ್ಲಿ ಇಲ್ಲದ್ದರೇನಂತೆ, ವಿದ್ಯಾರ್ಥಿಗಳಿಗೆ ಹೊಸ ವಿಚಾರಗಳನ್ನು ಪರಿಚಯಿಸುವುದು ನಮ್ಮ ಕೆಲಸ ಎಂದಿದ್ದಾರೆ ಇವರು.

ಕೆಲವು ವಿದ್ಯಾರ್ಥಿಗಳು ಸರ್ ನಮಗೆ ಈ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳಿ ಬರೆಸಿದ್ದರು, ಈ ಪ್ರಶ್ನೆಗಳು ಬರುತ್ತವೆ ಎಂದು ಹೇಳಿದ್ದರು ಎಂದಿರುವುದಾಗಿ ಇಂಡಿಯನ್ ಎಕ್ಸ್‌ಪ್ರೆಸ್(ಡಿ.7) ವರದಿ ಮಾಡಿದೆ. ಆದರೆ ಈ ವಿವಿಗೆ ಸಂಬದ್ಧವಾದ ಕಾಲೇಜುಗಳ ವಿದ್ಯಾರ್ಥಿಗಳು ಈ ಬಗ್ಗೆ ನಮಗೇನೂ ಕಲಿಸಿಲ್ಲ ಎಂದೂ ಹೇಳಿದ್ದಾರಂತೆ. ಅಂದರೆ ಈ ಪ್ರಾಧ್ಯಾಪಕರು ಪ್ರಶ್ನೆ ಪತ್ರಿಕೆಯನ್ನು ಲೀಕ್ ಮಾಡಿದ್ದಾರೆಯೇ? ಅದಿರಲಿ, ಇದೊಂದು ಸೆಲ್ಫ್‌ಗೋಲ್, ಸಂಸ್ಕೃತಿಯ ಜಾಗತೀಕರಣಕ್ಕೆ ವಿರುದ್ಧವಾಗಿರುವವರು; ಅದು ಭಾರತೀಯ ಸಂಸ್ಕೃತಿಯನ್ನು ಕುಲಗೆಡಿಸುತ್ತಿದೆ ಎನ್ನುವವರು ಮನು ಜಾಗತೀಕರಣ ಪ್ರತಿಪಾದಿಸಿದ ಎಂದು ಹೇಗೆ ಹೇಳುತ್ತಾರೆ ಎಂದು ದಿಲ್ಲಿ ವಿವಿಯ ಭಾರತೀಯ ರಾಜಕೀಯ ಚಿಂತನೆಯ ಪಾಧ್ಯಾಪಕ ಪ್ರೊ. ಎನ್.ಶ್ರೀಕುಮಾರ್ ಕೇಳಿದ್ದಾರೆ.

6.3% ಜಿಡಿಪಿ ದರ ಜನಸಾಮಾನ್ಯರಲ್ಲಿ ಆಶಾಭಾವನೆ ಮೂಡಿಸುವಂತೆ ಇಲ್ಲ



ಎರಡನೆ ತ್ರೈಮಾಸಿಕದಲ್ಲಿ ಜಿಡಿಪಿ ಏರಿದೆ ಎಂದು ಅರ್ಥ ಮಂತ್ರಿ ಅರುಣ್ ಜೆಟ್ಲಿಯವರು ಸಂಭ್ರಮಿಸುತ್ತಿದ್ದಾರೆ, ನಮ್ಮ ಅರ್ಥ ವ್ಯವಸ್ಥೆ ಬೆಳವಣಿಗೆಯ ಹಾದಿಗೆ ಮರಳಿದೆ ಎನ್ನುತ್ತಿದ್ದಾರೆ. ನಿಜವಾಗಿಯೂ ಹೀಗಾಗಿದೆಯೇ? ಇದು ಸಾಮಾನ್ಯ ಭಾರತೀಯ ಪ್ರಜೆಯಲ್ಲಿ ಅರ್ಥವ್ಯವಸ್ಥೆಯ ಬಗ್ಗೆ ಆಶಾದಾಯಕ ಭಾವನೆ ಉಂಟು ಮಾಡುತ್ತದೆಯೆ? ಪ್ರತಿ ವಲಯದ ಸಾಧನೆಯನ್ನು ಪ್ರತ್ಯೇಕವಾಗಿ ನೋಡಿದಾಗ ಇಂತಹ ಯಾವ ಅಂಶವೂ ಕಾಣುವುದಿಲ್ಲ. ಈ ಅಂಕಿ–ಅಂಶಗಳು ಏನಾದರೂ ಚೇತರಿಕೆ ತೋರಿಸುತ್ತಿದ್ದರೆ ಅದು ಈಗಾಗಲೇ ತನ್ನ ಲಾಭಗಳನ್ನು ಹೆಚ್ಚಿಸಿಕೊಳ್ಳುತ್ತಿರುವ ಕಾರ್ಪೊರೇಟ್ ವಲಯದ್ದು ಮಾತ್ರ ಎನ್ನುತ್ತಾರೆ ಆರ್ಥಿಕ ತಜ್ಞೆ

ಬಿ. ಸೃಜನಾ. **ಅನುವಾದ: ಕೆ.ಎಂ. ನಾಗರಾಜ್**

2017–18 ಸಾಲಿನ ಎರಡನೇ ತ್ರೈಮಾಸಿಕದಲ್ಲಿ ದೇಶದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆ ದರ ಶೇ..6.3 ಇತ್ತೆಂದು ತ್ವರಿತ ಅಂದಾಜಿನ ಘೋಷಣೆಯಾಗಿದೆ. ಮೊದಲ ತ್ರೈಮಾಸಿಕದ ಶೇ.5.7 ರ ಬೆಳವಣಿಗೆ ದರಕ್ಕೆ ಹೋಲಿಸಿದರೆ, ಎರಡನೆ ತ್ರೈಮಾಸಿಕದಲ್ಲಿ ಇದು ತುಸು ಏರಿರುವಂತೆ ಕಾಣುತ್ತದೆ. ಇದರ ಅರ್ಥ ಅರುಣ್ ಜೆಟ್ಲಿಯವರೂ ಸೇರಿದಂತೆ ಹಲವರ ಪ್ರಕಾರ, ಅರ್ಥವ್ಯವಸ್ಥೆಯು ಬೆಳವಣಿಗೆಯ ಹಾದಿಗೆ ಮರಳಿದೆ; ನೋಟು ರದ್ದತಿಯ ದಿನಗಳು ಗತಿಸಿವೆ; ಹಿಂದಿನ ಐದು ತ್ರೈಮಾಸಿಕಗಳಲ್ಲಿದ್ದ ಮಂದ ಬೆಳವಣಿಗೆ ಈಗ ಚುರುಕಾಗಿದೆ.

ಜಿಡಿಪಿ ಬೆಳವಣಿಗೆಯ ದರ ತುಸು ಹೆಚ್ಚಾಗಿರುವುದು ಒಬ್ಬ ಸಾಮಾನ್ಯ ಭಾರತೀಯ ಪ್ರಜೆಯಲ್ಲಿ ಅರ್ಥವ್ಯವಸ್ಥೆಯ ಬಗ್ಗೆ ಆಶಾದಾಯಕ ಭಾವನೆ ಉಂಟು ಮಾಡುತ್ತದೆಯೆ? ಬಹಳ ಮಟ್ಟಿಗೆ ಇಲ್ಲವೆಂದೇ ಕಾಣುತ್ತದೆ. ಏಕೆಂದರೆ, ಬೆಳವಣಿಗೆ ತುಸು ಹೆಚ್ಚಾಗಲು ಕಾರಣವಾಗಿರುವ ವಿವಿಧ ವಲಯಗಳ ಸಾಧನೆಯನ್ನು ಹತ್ತಿರದಿಂದ ಪರಿಶೀಲಿಸಿದಾಗ ಕಾಣುವ ಚಿತ್ರಣವೇ ಬೇರೆ. ಈ ಚಿತ್ರಣದಲ್ಲಿ ಶೇ.6.3 ರ ಬೆಳವಣಿಗೆ ಮಬ್ಬಾಗಿ ಕಾಣುತ್ತದೆ.

ಏಕೆಂದರೆ, ಕೃಷಿ ಕ್ಷೇತ್ರದಲ್ಲಿ ಒಟ್ಟು ಮೌಲ್ಯ ಸೇರಿಕೆ(ಜಿವಿಎ) ದರದ ಬೆಳವಣಿಗೆಯ ದರವು ಮೊದಲ ತ್ರೈಮಾಸಿಕದ ಶೇ2.3 ರಿಂದ ಎರಡನೆ ತ್ರೈಮಾಸಿಕದಲ್ಲಿ ಶೇ.1.7ಕ್ಕೆ ಕುಸಿದಿದೆ. ಕೃಷಿ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಶ್ರಮ ಶಕ್ತಿಯ ಸುಮಾರು ಅರ್ಧದಷ್ಟು ಮಂದಿಯ ಜೀವನದ ಮೇಲೆ ಈ ಬೆಳವಣಿಗೆ ಒಳ್ಳೆಯ ಪರಿಣಾಮ ಬೀರುವುದಿಲ್ಲ.

ಅದೇ ರೀತಿಯಲ್ಲಿ, ವ್ಯಾಪಾರ; ಪ್ರವಾಸೋದ್ಯಮ; ಹೊಟೆಲ್ ಮುಂತಾದವುಗಳನ್ನೊಳಗೊಂಡ ಸೇವಾ ವಲಯದ ಬೆಳವಣಿಗೆ ದರವೂ ಮೊದಲ ತ್ರೈಮಾಸಿಕದ ಶೇ.11.9 ರಿಂದ ಎರಡನೆ ತ್ರೈಮಾಸಿಕದಲ್ಲಿ ಶೇ.9.9 ಕ್ಕೆ ಕುಸಿದಿದೆ. ಅದೇ ರೀತಿಯಲ್ಲಿ, ಹಣಕಾಸು; ವಿಮೆ; ಗೃಹ ನಿರ್ಮಾಣ ಮತ್ತು ವೃತ್ತಿಪರ ಸೇವೆಗಳ ಬೆಳವಣಿಗೆಯ ದರವೂ ಶೇ.6.4 ರಿಂದ ಶೇ.5.7ಕ್ಕೆ ಕುಸಿದಿದೆ. ಈ ಎರಡು ವಲಯಗಳಲ್ಲಿ ಕೆಲಸಮಾಡುವವರ ಸಂಖ್ಯೆಯು ಕೃಷಿಯೇತರ ವಲಯದಲ್ಲಿರುವ ಒಟ್ಟು ಉದ್ಯೋಗದ ಶೇ.40ರಷ್ಟಿದೆ. ಅಂದರೆ, ಭಾರತದ ದುಡಿಯುವ ಜನ ಸಂಖ್ಯೆಯ ಶೇ.70ರಷ್ಟು ಮಂದಿ ಕೆಲಸಮಾಡುತ್ತಿರುವ ಈ ಎರಡು ವಲಯಗಳಲ್ಲಿ ಬೆಳವಣಿಗೆಯು ಎರಡನೆ ತ್ರೈಮಾಸಿಕದಲ್ಲಿ ಕುಸಿದಿದೆ.



ದುಡಿಯುವವವರ ಒಟ್ಟು ಜನ ಸಂಖ್ಯೆಯ ಶೇ.10.6 ರಷ್ಟು ಮಂದಿ ಕೆಲಸಮಾಡುತ್ತಿರುವ ನಿರ್ಮಾಣ ವಲಯದ ಬೆಳವಣಿಗೆಯು ಶೇ.2 ರಿಂದ ಶೇ. 2.6ಕ್ಕೆ ಏರಿದೆ. ಈ ವಲಯದ ಬೆಳವಣಿಗೆಯಲ್ಲಿ ಆಗಿರುವ ತುಸು ಹೆಚ್ಚಳ ಏನೇನೂ ಅಲ್ಲ. ಅನುಭವಿಸಿದ ನಷ್ಟವನ್ನು ಮರಳಿ ಪಡೆದಷ್ಟು ಅಲ್ಲವೇ ಅಲ್ಲ. ಏಕೆಂದರೆ, ನೋಟು ರದ್ದತಿಯಿಂದಾಗಿ ಈ ವಲಯಕ್ಕೆ ಉಂಟಾಗಿದ್ದ ನಷ್ಟ ಅಪಾರವಾಗಿತ್ತು. ಹಾಗಾಗಿ, ಈ ವಲಯದಲ್ಲಿ ಆಗಿರುವ ಶೇ.2.6 ರ ಬೆಳವಣಿಗೆಯು ನಷ್ಟ ಪರಿಹಾರದ ಲೆಕ್ಕದಲ್ಲಿ ಹೇಳುವುದಾದರೆ ನಗಣ್ಯ.

ಮೊದಲ ತ್ರೈಮಾಸಿಕದ ಜಿಡಿಪಿ ಬೆಳವಣಿಗೆಯ ದರಕ್ಕೆ ಹೋಲಿಸಿದರೆ, ಎರಡನೆ ತ್ರೈಮಾಸಿಕದಲ್ಲಿ ಆಗಿರುವ ಹೆಚ್ಚಳದಲ್ಲಿ ತಯಾರಿಕಾ ವಲಯದ ಕೊಡುಗೆ ದೊಡ್ಡದಾಗಿದೆ. ದೇಶದ ಒಟ್ಟು ಜಿವಿಎ ದಲ್ಲಿ ಶೇ.18ರಷ್ಟು ಪಾಲು ಹೊಂದಿರುವ ತಯಾರಿಕಾ ವಲಯದಲ್ಲಿ ದುಡಿಯುವ ಒಟ್ಟು ಜನ ಸಂಖ್ಯೆಯ ಶೇ.12ರಷ್ಟು ಮಂದಿ ಕೆಲಸಮಾಡುತ್ತಿದ್ದಾರೆ. ಈ ವಲಯದಲ್ಲಿ, ಈ ವರ್ಷದ ಎರಡನೆ ತ್ರೈಮಾಸಿಕದಲ್ಲಿ ಬೆಳವಣಿಗೆಯ ದರ ಹಿಂದಿನ ತ್ರೈಮಾಸಿಕದಲ್ಲಿ ಆಗಿದ್ದ ಶೇ.1.2 ರಿಂದ ಶೇ.7 ಕ್ಕೆ ಏರಿದೆ. ನಿಜಕ್ಕೂ ಇದೊಂದು ಗಣನೀಯ ಪ್ರಮಾಣದ ಬೆಳವಣಿಗೆಯೇ.

ಆದರೆ, ಅನೇಕ ಮಂದಿ ಬೊಟ್ಟು ಮಾಡಿ ತೋರಿಸಿರುವಂತೆ, ಕೇಂದ್ರೀಯ ಅಂಕಿ–ಸಂಖ್ಯೆಗಳ ಸಂಸ್ಥೆಯು(ಸಿ.ಎಸ್.ಓ) ತಯಾರಿಕಾ ವಲಯದ ಜಿಡಿಪಿಗೆ ಸಂಬಂಧಿಸಿದ ಅಂಕಿ–ಅಂಶಗಳನ್ನು ಕಲೆಹಾಕಲು ಅನುಸರಿಸುತ್ತಿರುವ ಹೊಸ ವಿಧಾನದಲ್ಲಿ ಗಂಭೀರವಾದ ಸಮಸ್ಯೆಗಳಿವೆ. ಈ ಸಂಸ್ಥೆಯು ಹಾಕಿರುವ ಲೆಕ್ಕಾಚಾರದಂತೆ ತಯಾರಿಕಾ ವಲಯದ ಜಿಡಿಪಿ ಬೆಳವಣಿಗೆ ದರವು, ಕೈಗಾರಿಕಾ ಉತ್ಪಾದನಾ ಸೂಚ್ಯಂಕವು ತೋರಿಸುವ ಬೆಳವಣಿಗೆ ದರಕ್ಕಿಂತಲೂ ಬಹಳ ಹೆಚ್ಚಾಗಿದೆ. ಕೈಗಾರಿಕಾ ಉತ್ಪಾದನಾ ಸೂಚ್ಯಂಕದ ಪ್ರಕಾರ, ಇದೇ ಅವಧಿಯಲ್ಲಿ, ತಯಾರಿಕಾ ವಲಯದ ಬೆಳವಣಿಗೆ ದರವು ಮೊದಲ ತ್ರೈಮಾಸಿಕದ ಶೇ.1.1ರಿಂದ ಎರಡನೆ ತ್ರೈಮಾಸಿಕದಲ್ಲಿ ಸಾಧಾರಣ ಎನ್ನಬಹುದಾದ ಶೇ. 2.2ಕ್ಕೆ ಏರಿದೆ. ಅಂದರೆ ಬೆಳವಣಿಗೆಯ ದರ ಶೇ.1.1 ರಿಂದ ಶೇ.7ಕ್ಕೆ ಏರಿದೆ ಎನ್ನುವುದಕ್ಕೂ ಇದಕ್ಕೂ ತಾಳಮೇಳವಿಲ್ಲದಾಗಿದೆ.

ಮಿಗಿಲಾಗಿ, ಸಿ.ಎಸ್.ಓ ಅನುಸರಿಸುತ್ತಿರುವ ಹೊಸ ವಿಧಾನದ ಪ್ರಕಾರ, ತಯಾರಿಕಾ ವಲಯದ ಸುಮಾರು ಶೇ.70ರಷ್ಟು ಉತ್ಪಾದನೆಯ ಅಂದಾಜು ಷೇರು ವಿನಿಮಯ ಕೇಂದ್ರದ ಪಟ್ಟಿಯಲ್ಲಿ ನಮೂದಿತವಾದ ಕಂಪೆನಿಗಳು ಘೋಷಿಸಿದ ವರಮಾನದ ಅಂಕಿ–ಸಂಖ್ಯೆಗಳ ಮೇಲೆ ನಿಂತಿದೆ ಮತ್ತು ಅದರಲ್ಲಿ ವಾಸ್ತವಿಕ ಉತ್ಪಾದನೆಯ ಅಂಕಿ ಅಂಶಗಳು ಗಣನೆಯಾಗಿರುವುದಿಲ್ಲ. ಹಾಗಾಗಿ, ಈ ಕಂಪೆನಿಗಳ ಉತ್ಪಾದನೆಯ ಹೆಸರಿನಲ್ಲಿ ಬಿಂಬಿಸಿದ ಅಂಕಿ ಅಂಶಗಳು ಅತಿರಂಜಿತ ಅಂದಾಜಿನಿಂದ ಕೂಡಿರುತ್ತವೆ. ಏಕೆಂದರೆ, ಈ ಕಂಪೆನಿಗಳು ಘೋಷಿಸಿದ ವರಮಾನದಲ್ಲಿ ಉತ್ಪಾದನೆಯಿಂದ ಹೊರತಾದ ಬೇರೆ ಮೂಲಗಳಿಂದ ಸಂಪಾದಿಸಿದ ಆದಾಯವೂ ಸೇರಿರುತ್ತದೆ.

ಅಲ್ಲದೆ, ಅಸಂಘಟಿತ ವಲಯದ ಉತ್ಪಾದನೆಯ ಮೌಲ್ಯದ ಅಂದಾಜನ್ನು ಪ್ರತ್ಯೇಕವಾಗಿ ಮಾಡುವುದೇ ಇಲ್ಲ. ಬದಲಿಗೆ, ಅದು ಕೈಗಾರಿಕಾ ಉತ್ಪಾದನಾ ಸೂಚ್ಯಂಕವನ್ನು ಆಧರಿಸಿದೆ. ಈ ಸೂಚ್ಯಂಕವು ಸಂಘಟಿತ ಮತ್ತು ಅಸಂಘಟಿತ ವಲಯಗಳ ನಡುವಿನ ಭಿನ್ನತೆಗಳನ್ನು ಗುರುತಿಸುವುದಿಲ್ಲ. ಹಾಗಾಗಿ, ಕೈಗಾರಿಕಾ ಉತ್ಪಾದನಾ ಸೂಚ್ಯಂಕವು ಬಿಂಬಿಸುವ ಅಂಕಿ–ಸಂಖ್ಯೆಗಳು ಅತಿ ಅಂದಾಜಿನಿಂದ ಕೂಡಿರುವ ಸಂಭಾವ್ಯತೆ ಹೆಚ್ಚಾಗಿದೆ.

ಮಾನವ ಸಂಪನ್ಮೂಲವೇ ಪ್ರಧಾನವಾಗಿರುವ ಅಸಂಘಟಿತ ವಲಯದ ಪಾಲು ಒಟ್ಟು ಉತ್ಪಾದನೆಯಲ್ಲಿ ಎಷ್ಟಿದೆಯೊ ಅದಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಅಲ್ಲಿ ದುಡಿಯುತ್ತಿದ್ದಾರೆ. ನೋಟು ರದ್ದತಿಯ ದುಷ್ಪರಿಣಾಮಗಳು ಅಸಂಘಟಿತ ವಲಯವನ್ನು ಬಹಳವಾಗಿ ಕಾಡಿದವು. ಅದೆಷ್ಟು ಸಣ್ಣ ಪುಟ್ಟ ಘಟಕಗಳು ನಿರ್ನಾಮವಾದವು; ಅದೆಷ್ಟು ಲಕ್ಷ ಕೆಲಸಗಾರರು ನಿರುದ್ಯೋಗಿಗಳಾದರು ಎಂಬುದನ್ನು ನಿಖರವಾಗಿ ಇನ್ನೂ ಲೆಕ್ಕ ಹಾಕಿಲ್ಲ. ಗಾಯದ ಮೇಲೆ ಬರೆ ಎಳೆದಂತೆ, ತರಾತುರಿಯಲ್ಲಿ ಜಾರಿ ಮಾಡಿದ ಜಿ.ಎಸ್.ಟಿ ಅಸಂಘಟಿತ ವಲಯದ ಮೇಲೆ ಮತ್ತಷ್ಟು ಹಾನಿ ಉಂಟು ಮಾಡಿದೆ. ಈ ಎರಡು ಕ್ರಮಗಳಿಂದಾಗಿರುವ ಹಾನಿಯ ಬಗ್ಗೆ ಕೀಳಂದಾಜು ಮಾಡಿರುವ ಸಂಭಾವ್ಯತೆ ಇದೆ.

ಒಟ್ಟಿನಲ್ಲಿ, ಪ್ರತಿ ವಲಯದ ಸಾಧನೆಯನ್ನು ಪ್ರತ್ಯೇಕವಾಗಿ ನೋಡಿದಾಗ ಒಬ್ಬ ಭಾರತೀಯ ಸಾಮಾನ್ಯ ಪ್ರಜೆಯಲ್ಲಿ 6.3% ಬೆಳವಣಿಗೆ ಬಗ್ಗೆ ಆಶಾ ಭಾವನೆ ಮೂಡಿಸುವಂತಹ ಯಾವ ಅಂಶವೂ ಕಾಣುವುದಿಲ್ಲ. ಈ ಅಂಕಿ–ಅಂಶಗಳು ಏನಾದರೂ ಚೇತರಿಕೆ ತೋರಿಸುತ್ತಿದ್ದರೆ ಅದು ಕಾರ್ಪೊರೇಟ್ ವಲಯದ್ದು ಮಾತ್ರ. ಈ ವಲಯದ ಲಾಭ ಇತ್ತೀಚೆಗೆ ಏರುತ್ತಲೇ ಇದೆ.

ನವಪ್ರಕಾಶನ

ನೋಟುರದ್ಧತಿ ಮತ್ತು ಜಿಎಸ್‌ಟಿ:
ಕಿರು ಉತ್ಪಾದಕರ ಮೇಲೆ ವರ್ಗಪ್ರಹಾರ

ಇದು ಈ ವಿಷಯದ ಮೇಲೆ ಪ್ರೊ.ಪ್ರಭಾತ್ ಪಟ್ನಾಯಕ್‌ರವರ ಲೇಖನಗಳ ಕನ್ನಡ ಅನುವಾದಗಳ ಒಂದು ಸಂಗ್ರಹ. ಹೆಸರೇ ಸೂಚಿಸುವಂತೆ ಒಂದು ವರ್ಷದ ಹಿಂದೆ ಬಂದ ನೋಟುರದ್ಧತಿ ಮತ್ತು ಏಳು ತಿಂಗಳ ನಂತರ ಭಾರೀ ಪ್ರಚಾರದೊಂದಿಗೆ ತಂದಿರುವ ಸರಕು ಮತ್ತು ಸೇವಾ ತೆರಿಗೆ ಅಥವ ಜಿಎಸ್‌ಟಿ ಕುರಿತಾದ ವಿಶ್ಲೇಷಣಾತ್ಮಕ ಲೇಖನಗಳು ಇದರಲ್ಲಿವೆ.

ನೋಟು ರದ್ಧತಿಯ ಘೋಷಣೆಯ ನಿಜ ಹೂರಣ ಮತ್ತು ಪರಿಣಾಮಗಳು ಈಗ ಸಾಕಷ್ಟು ಬಯಲಿಗೆ ಬಂದಿವೆ ಇದನ್ನು ಮುಂಗಂಡ ಒಬ್ಬ ಅರ್ಥಶಾಸ್ತ್ರಜ್ಞ ಎಂದರೆ ಪ್ರೊ. ಪ್ರಭಾತ್ ಪಟ್ನಾಯಕ್. ಹೆಚ್ಚಿನ 'ಪರಿಣಿತರು' ಇದೊಂದು ದಿಟ್ಟತನದ ಕ್ರಮ ಎಂದು ಹಾಡಿ ಹೊಗಳಲಾರಂಭಿಸುವ ಮೊದಲೇ ಇದೊಂದು ವಿಚಾರಶೂನ್ಯವಾದ ಜನ–ವಿರೋಧಿ ಕ್ರಮ ಎಂದು ಅವರು ಹೇಳಿದ್ದರು. ನಂತರ ಈ 'ದಿಟ್ಟ ಕ್ರಮ'ಕ್ಕೆ ಸಮರ್ಥನೆಗಳು ದಿನದಿಂದ ದಿನಕ್ಕೆ ವಿಧ–ವಿಧ ರೂಪಗಳನ್ನು ಪಡೆಯುತ್ತಿದ್ದಂತೆಯೇ ಅವನ್ನು ಒಂದೊಂದಾಗಿ ಬಯಲಿಗೆಳೆಯುತ್ತ ಬಂದಿರುವ ಪ್ರೊ. ಪಟ್ನಾಯಕ್, ಈ ಕ್ರಮದ ಪರಿಣಾಮಗಳು, ವರದಿಗಳನ್ನು, ಇತರ ಬೆಳವಣಿಗೆಗಳನ್ನು ಸತತವಾಗಿ ತೀಕ್ಷ್ಣ ವಿಶ್ಲೇಷಣೆಯ ಒರೆಗೆ ಹಚ್ಚಿದ್ದಾರೆ.

ಅದೇ ರೀತಿ, ಜಿಎಸ್‌ಟಿಯನ್ನು ಕೂಡ ಅವರು ಪ್ರಖರ ವಿಶ್ಲೇಷಣೆಗೆ ಗುರಿಪಡಿಸಿದ್ದಾರೆ. ಅಷ್ಟೇ ಅಲ್ಲ, ಇವೆರಡರ ನಡುವಿನ ನಿಜವಾದ ಸಂಬಂಧಗಳನ್ನು ತೆರೆದಿಟ್ಟಿದ್ದಾರೆ. ಜನಗಳಲ್ಲಿ 'ಆಘಾತ ಮತ್ತು ಭಯ–ಭಕ್ತಿ' ಹುಟ್ಟಿಸುವ ಈ ಎರಡೂ ಪ್ರಯತ್ನಗಳು ಜಾಗತಿಕ ಹಣಕಾಸು ಬಂಡವಾಳಿಗರು ಮತ್ತು ದೇಶೀ ಕಾರ್ಪೊರೇಟ್ ಕುಳಗಳ ಪರವಾಗಿ 'ಅನೌಪಚಾರಿಕ ವಲಯ' ಎಂದು ಕರೆಯುತ್ತಿರುವ, ರೈತರೂ ಸೇರಿದಂತೆ ಕಿರು ಉತ್ಪಾದಕರು ಮತ್ತು ಸಣ್ಣ ವ್ಯಾಪಾರಿಗಳು ಆರ್ಥಿಕ ಚಟುವಟಿಕೆಗಳನ್ನು ನಡೆಸುತ್ತಿರುವ ವಲಯದ ಮೇಲೆ ಭಾರೀ ಹೊಡೆತ ನೀಡಿರುವ ಕ್ರಮಗಳು, ವಾಸ್ತವವಾಗಿ ಇಂದಿನ ಸರಕಾರದ ಕೈಗಳಲ್ಲಿ ಈಗ ಭಾರತದಲ್ಲಿ ಆದಿಮ ಬಂಡವಾಳವನ್ನು ಬಲವಂತದಿಂದ ಶೇಖರಣೆ ಮಾಡುವ ಪ್ರಕ್ರಿಯೆಯನ್ನು ತರುವ ಅಸ್ತ್ರಗಳಾಗಿ ಬಳಕೆಯಾಗಿವೆ ಎನ್ನುತ್ತಾರೆ ಅವರು.

ನವಂಬರ್ 8, 2016ರಂದು ನೋಟುರದ್ದತಿಯ ಕ್ರಮದ ಪ್ರಕಟಣೆಯ ಮರುದಿನದಿಂದ ಈ ಕ್ರಮದ ಮೊದಲ ವಾರ್ಷಿಕದ ವರೆಗೆ ಒಂದು ವರ್ಷದಲ್ಲಿ ಅವರು ಹಲವಾರು ಲೇಖನಗಳನ್ನು ಬರೆದಿದ್ದಾರೆ. ಜಿಎಸ್‌ಟಿಯ ಮೇಲೂ ಪ್ರತಿಯೊಂದು ಮಹತ್ವದ ಬೆಳವಣಿಗೆಯಾದಾಗಲೂ ಅದರ ಮರ್ಮವನ್ನು ತೆರೆದಿಡುತ್ತಿದ್ದಾರೆ. ಇವು ಪೀಪಲ್ಸ್ ಡೆಮಾಕ್ರಸಿ, ನ್ಯೂಸ್‌ಕ್ಲಿಕ್, ದಿ ಸಿಟಿಝನ್, ದಿ ವೈರ್ ಮುಂತಾದ ಪ್ರಿಂಟ್/ವೆಬ್ ಪತ್ರಿಕೆಗಳಲ್ಲಿ ಪ್ರಕಟವಾಗಿ ಎಲ್ಲ ಪ್ರಜಾಪ್ರಭುತ್ವವಾದಿಗಳ ಗಮನ ಸೆಳೆದಿವೆ. 'ಜನಶಕ್ತಿ' ವಾರಪತ್ರಿಕೆ ಅವುಗಳಲ್ಲಿ ಹಲವನ್ನು ಕನ್ನಡದಲ್ಲಿ ಅನುವಾದಿಸಿ ಆಗಾಗ ಪ್ರಕಟಿಸುತ್ತ ಬರುತ್ತಿದೆ. ಈ ಎರಡು ಕ್ರಮಗಳ ವಿವಿಧ ಮುಖಗಳು, ಪರಿಣಾಮಗಳು ಅನಾವರಣಗೊಳ್ಳುತ್ತಿದ್ದಂತೆಯೇ ಅವನ್ನು ವಿಶ್ಲೇಷಿಸಿರುವ 14 ಲೇಖನಗಳು ಇದರಲ್ಲಿವೆ.

ಡಿಸೆಂಬರ್ 10, 2017ರಂದು ಹಾಸನದಲ್ಲಿ ನಡೆಯಲಿರುವ 'ನೋಟ್‌ಬ್ಯಾನ್ ಜಿಎಸ್‌ಟಿ ಮತ್ತು ದೇಶದ ಆರ್ಥಿಕ ತಲ್ಲಣಗಳು' ಎಂಬ ವಿಷಯದ ಮೇಲಿನ ರಾಜ್ಯಮಟ್ಟದ ವಿಚಾರಸಂಕಿರಣದಲ್ಲಿ ಇದರ ಬಿಡುಗಡೆ ನಡೆಯಲಿದೆ. ಸ್ವತಃ ಪ್ರೊ. ಪ್ರಭಾತ್ ಪಟ್ನಾಯಕ್ ಇದರಲ್ಲಿ ಒಬ್ಬ ಪ್ರಮುಖ ಉಪನ್ಯಾಸಕರಾಗಿರುತ್ತಾರೆ.



ಪ್ರಕಟಣೆ: ಕ್ರಿಯಾ ಪುಸ್ತಕ

ಬೆಲೆ: ರೂ.55

ಪ್ರತಿಗಳಿಗಾಗಿ ಇವರನ್ನು ಸಂಪರ್ಕಿಸಿ:
ಪುಸ್ತಕ ಪ್ರೀತಿ
4ನೇ ಅಡ್ಡರಸ್ತೆ,
ಮಹಾಲಕ್ಷ್ಮಿ ಬಡಾವಣೆ,
ಬೆಂಗಳೂರು–560086
email : pusthakapreethi@gmail.com
kriyamadhyama@gmail.com
Ph:080-23494488 Mob:9036082005

ಅಸ್ಸಾಂ: ಬಡ ಸ್ಥಳೀಯ ಬುಡಕಟ್ಟು ಜನಗಳ ಅಮಾನುಷ ಉಚ್ಚಾಟನೆ







ನವಂಬರ್ 27. ಅಸ್ಸಾಂ ರಾಜಧಾನಿ ಗುವಾಹಾಟಿ ಬಳಿಯ ಅಮ್ಸಂಗ್ ಪ್ರದೇಶ. ಅಶ್ರುವಾಯು ಶೆಲ್‌ಗಳು, 15 ಆನೆಗಳು, 20 ಮಣ್ಣೆತ್ತುವ ಯಂತ್ರಗಳೊಂದಿಗೆ 1500 ಸಶಸ್ತ್ರ ಪೋಲಿಸರ ಲಗ್ಗೆ, ಜತೆಗೆ 20 ಕಾರ್ಯಕಾರಿ ಮ್ಯಾಜಿಸ್ಟ್ರೇಟರು, ಸಮಸ್ತ ಆರನ್ಯ ಇಲಾಖೆ, ಜಿಲ್ಲಾ ಆಡಳಿತ, ಇನ್ನೂ ಹಲವು ಪಡೆಗಳು. ತುರ್ತು ಪರಿಸ್ತಿತಿಯನ್ನು ನೆನಪಿಸುವ ಈ ಸನ್ನಿವೇಶ 400 ಸ್ಥಳೀಯ ಬುಡಕಟ್ಟು ಕುಟುಂಬಗಳನ್ನು ಒಕ್ಕಲೆಬ್ಬಿಸಲಿಕ್ಕಾಗಿ. 'ಜಾತಿ-ಮಾಟಿ-ಭೇಟಿ'(ಸಮುದಾಯ-ಮಣ್ಣಿನ ಮಕ್ಕಳು) ಎಂಬ ಘೋಷಣೆಯೊಂದಿಗೆ ಇದೇ ಜನಗಳ ಮತಗಳನ್ನು ಪಡೆದು ಅಧಿಕಾರಕ್ಕೆ ಬಂದ ಬಿಜೆಪಿ ಸರಕಾರ ದಮನ ಚಕ್ರ.ವನ್ನೇ ಹರಿಯ ಬಿಟ್ಟಿತು.

ಇವರೆಲ್ಲ ಅರಣ್ಯಪ್ರದೇಶವನ್ನು ಕಾನೂನು ಬಾಹಿರವಾಗಿ ಒತ್ತುವರಿ ಮಾಡಿಕೊಂಡಿದ್ದಾರೆ ಎಂಬದು ಸರಕಾರದ ವಾದ. ಅಸ್ಸಾಂನ ಆರೇಳು ಮೂಲ ಬುಡಕಟ್ಟುಗಳಿಗೆ ಸೇರಿದ ಈ ಜನಗಳು 12 ವರ್ಷಗಳ ಹಿಂದೆ ಧೆಮಾಜಿ ಮತ್ತು ಮಂಜುಲಿಯಲ್ಲಿ ಭೀಕರ ನೆರೆಗೆ ತುತ್ತಾಗಿ ನಿರಾಶ್ರಿತರಾಗಿ ಇಲ್ಲಿ ಬಂದು ನೆಲೆಸಿದವರು. ಈ ಪ್ರವಾಹಪೀಡಿತ ಜನಗಳಿಗೆ ಸರಕಾರ ಏನೂ ಪರಿಹಾರ ಕೊಟ್ಟಿರಲಿಲ್ಲ. ಆದ್ದರಿಂದ ಇದು ಅವರೇ ಕಂಡುಕೊಮಡ ಪರಿಹಾರ. 12 ವರ್ಷಗಳ ಕಾಲ ಸರಕಾರವೂ ಆ ಬಗ್ಗೆ ಸುಮ್ಮನಿತ್ತು. ಕಳೆದ ವರ್ಷ ಅದೆ 'ಜಾತಿ-ಮಾಟಿ-ಭೇಟಿ' ಘೋಷಣೆ ಹೇಳಿಕೊಂಡು ಬಿಜೆಪಿಯ ಅತುಲ್ ಬೋರ ಇಲ್ಲಿಂದ ಎಂಎಲ್‌ಎ ಆಗಿದ್ದಾರೆ. ನಮ್ಮ ಮತ ಕೇಳಲಿಕ್ಕೆ ಈತ ಕಾಡಿನೊಳಕ್ಕೆ ಈ ಕಾನೂನುಬಾಹಿರ ಜಾಗಕ್ಕೆ ಏಕೆ ಬಂದರು ಎಂಬುದು ಮನೆಮಾರು ಕಳಕೊಂಡು ಬೀದಿಯಲ್ಲಿ ಬಿದ್ದು ಚಳಿಯಲ್ಲಿ ನಡುಗುತ್ತಿರುವ ಒಬ್ಬ ನಿವಾಸಿಯ ಪ್ರಶ್ನೆ.

ವಾಸ್ತವವಾಗಿ ಇಲ್ಲಿ ನಾಲ್ಕಾರು ಸಿಮೆಂಟ್ ಕಂಪನಿಗಳು, ಇಟ್ಟಿಗೆ ಗೂಡುಗಳು ಕಾನುನುಬಾಹಿರವಾಗಿ ಒತ್ತುವರಿ ಮಾಡಿ ಸಮೀಪದ ಸುರಕ್ಷಿತ ವನ್ಯಜೀವಿ ಧಾಮದಲ್ಲಿ ಪರಿಸರ ಹಾನಿ ಉಂಟುಮಾಡುತ್ತಿವೆ. ಆದರೆ 'ಜಾತಿ-ಮಾಟಿ-ಭೇಟಿ' ಸರಕಾರದ ಅರಣ್ಯ ಮಂತ್ರಿಗಳು ಪರಿಸರ ಹಾಳುಗೈಯುತ್ತಿರುವ ಆ ಸಿಮೆಂಟ್ ಕಂಪನಿಗಳ, ಇಟ್ಟಿಗೆಗೂಡುಗಳ ಮಾಲಕರು ಒತ್ತುವರಿದಾರರಲ್ಲ, ಈ ಬಡ ಆದಿವಾಸಿಗಳೇ ಒತ್ತುವರಿದಾರರು.

"ಉತ್ತರಪ್ರದೇಶ ಈಗ ಅಪರಾಧ-ಮುಕ್ತ' ಎಂದ ಮೂರನೇ ದಿನವೇ ಪತ್ರಕರ್ತನ ಕೊಲೆ

ನವಂಬರ್ 30ರ ಸಂಜೆ ಉತ್ತರಪ್ರದೇಶದ ಕಾನ್ಪುರದಲ್ಲಿ ಹಿಂದಿ ದೈನಿಕ 'ಹಿಂದುಸ್ತಾನ್' ಜತೆ ಕೆಲಸ ಮಾಡುತ್ತಿದ್ದ 38 ವರ್ಷದ ಪತ್ರಕರ್ತ ನವೀನ್ ಗುಪ್ತ ಎಂಬವರನ್ನು ಮೂವರು ಬೈಕ್‌ಸವಾರರು ಗುಂಡಿಟ್ಟು ಕೊಂದು ಓಡಿ ಹೋದರು ಎಂದು ವರದಿಯಾಗಿದೆ.

ಎರಡು ದಿನಗಳ ಹಿಂದೆಯಷ್ಟೇ ತಾನು ಉತ್ತರಪ್ರದೇಶವನ್ನು ಅಪರಾಧ-ಮುಕ್ತಗೊಳಿಸಿದ್ದೇನೆ ಎಂದು ಹೇಳಿಕೊಂಡಿದ್ದ ರಾಜ್ಯದ ಮುಖ್ಯಮಂತ್ರಿಗಳು ನವೀನ್ ಗುಪ್ತ ಸಾವಿಗೆ ಸಂತಾಪ ವ್ಯಕ್ತಪಡಿಸಿದ್ದಾರೆ, ಡಿಜಿಪಿಯವರಿಗೆ ಈ ಬಗ್ಗೆ ತನಿಖೆ ನಡೆಸುವಂತೆ ಆದೇಶಿಸಿದ್ದಾರೆ ಎಂದು ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಗಳು ಮಾಧ್ಯಮಗಳಿಗೆ ಹೇಳಿದ್ದಾರೆ.

ಮುಖ್ಯಮಂತ್ರಿಗಳು ರಾಜ್ಯದಲ್ಲಿ ಹೂಡಿಕೆಗಳನ್ನು ಆಹ್ವಾನಿಸುವ ಕುರಿತು ಮಾತಾಡುತ್ತ ತಾನು ಅಧಿಕಾರಕ್ಕೆ ಬಂದ ಮೇಲೆ ಕ್ರಿಮಿನಲ್‌ಗಳನ್ನು ಅವರು ಇರಬೇಕಾದ ಸ್ಥಳಕ್ಕೆ ಕಳಿಸಿದ್ದೇನೆ ಎಂದಿದ್ದರು.

ಮಹಾನಗರಸಭೆಯ ಚುನಾವಣೆಗಳಲ್ಲಿ ಗೆದ್ದ ಸ್ಥಳೀಯ ಅಭ್ಯರ್ಥಿಗಳ ಫೋಟೋ ಕೇಳುವ ನೆವದಲ್ಲಿ ನವೀನ್ ಗುಪ್ತರೊಡನೆ ಕೆಲವು ಯುವಕರು ಮಾತಡುತ್ತಿದ್ದಾಗ ಬಂದ ಬೈಕ್ ಸವಾರರು ಹತ್ತಿರದಿಂದಲೇ ಗುಂಡು ಹಾರಿಸಿ ಅವರನ್ನು ಕೊಂದಿದ್ದಾರೆ ಎಂದು ವರದಿಯಾಗಿದೆ.

ತನ್ನ ಪತಿ ಸ್ಥಳೀಯ ಮುಖಂಡರ, ಬಲಿಷ್ಟ ವ್ಯಕ್ತಿಗಳ ದುಷ್ಕೃತ್ಯಗಳ ಬಗ್ಗೆ ಬರೆಯುತ್ತಿದ್ದರು, ಅವರಲ್ಲಿ ಯಾರೋ ಸುಪಾರಿ ಕೊಟ್ಟು ಅವರ ಹತ್ಯೆ ಮಾಡಿಸಿದ್ದಾರೆ ಎನ್ನುವ ಅವರ ಪತ್ನಿ ಕಿರಣ ಗುಪ್ತ ಡಿಸೆಂಬರ್ 13ರೊಳಗೆ ಕೊಲೆಗಾರರನ್ನು ಬಂಧಿಸದಿದ್ದರೆ ನ್ಯಾಯ ಕೊಡಿಸಿ ಎಂದು ಗ್ರಾಂಡ್ ಟ್ರಂಕ್‌ರಸ್ತೆಯಲ್ಲಿ ನನ್ನ ಮಕ್ಕಳ ಜತೆ ಕೂರುತ್ತೇನೆ" ಎಂದಿರುವುದಾಗಿಯೂ ವರದಿಯಾಗಿದೆ.

ಮಹಾರಾಷ್ಟ್ರ: ಮತ್ತೆ 2414 ರೈತರ ಆತ್ಮಹತ್ಯೆಗಳ ನಡುವೆ ಸಾಲಮನ್ನಾದಲ್ಲಿ 10,200 ಕೋಟಿ ರೂ. ಕಡಿತದ ಯೋಚನೆ!

ಮಹಾರಾಷ್ಟ್ರದಲ್ಲಿ ಈ ವರ್ಷದ ಜನವರಿ1 ರಿಂದ ಅಕ್ಟೋಬರ್ 31 ರ ನಡುವೆ ಇನ್ನೂ 2414 ರೈತರು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ರಾಜ್ಯದ ಆರು ಡಿಸಿಗಳು ವರದಿ ಮಾಡಿದ್ದಾರಂತೆ. ಅತಿ ಹೆಚ್ಚು ಅಂದರೆ 907 ಆತ್ಮಹತ್ಯೆಗಳು ವಿದರ್ಭ ಪ್ರದೇಶದ ಐದು ಜಿಲ್ಲೆಗಳಿಂದ, ಮತ್ತು ಮರಾಠವಾಡ ಪ್ರದೇಶದಿಂದ 789 ಆತ್ಮಹತ್ಯೆಗಳು ವರದಿಯಾಗಿವೆ. ಬಹಳ ಕಡಿಮೆ ಕೃಷಿ ಬೆಲೆಗಳು, ರಾಜ್ಯ ಸರಕಾರದ ಉಪೇಕ್ಷೆ ಮತ್ತು ಸಾಲಮನ್ನಾ ಯೋಜನೆಯಲ್ಲಿ ಎದ್ದು ಬಂದಿದೆ ಎನ್ನಲಾದ 'ತಾಂತ್ರಿಕ ತೊಡಕುಗಳು', ಈ ಪ್ರದೇಶಗಳಲ್ಲಿ ಮತ್ತು ಇಡೀ ರಾಜ್ಯದಲ್ಲಿ ಇದ್ದ ಕೃಷಿ ಬಿಕ್ಕಟ್ಟನ್ನು ಮತ್ತಷ್ಟು ಉಲ್ಬಣಗೊಳಿಸಿದೆ ಎಂದು ಹೇಳಲಾಗಿದೆ.


ಮಹಾರಾಷ್ಟ್ರದ ರೈತರ ಸಾರ್ವತ್ರಿಕ ಮುಷ್ಕರದಿಂದಾಗಿ ಬಿಜೆಪಿ ರಾಜ್ಯ ಸರಕಾರ ಪ್ರಕಟಿಸಬೇಕಾಗಿ ಬಂದ ಸಾಲಮನ್ನಾ ಯೋಜನೆಯ ಜಾರಿಯಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ ರೈತರಲ್ಲಿ ಒಂದೆಡೆ ಹತಾಶೆ ಮತ್ತು ಇನ್ನೊಂದೆಡೆಯಲ್ಲಿ ಮತ್ತೆ ಆಕ್ರೋಶ ಹೆಚ್ಚುತ್ತಿದೆ.

ಇದು ದೇಶದಲ್ಲಿ ಮೊದಲ 'ಆಧಾರ್-ಆಧಾರಿತ ಸಾಲಮನ್ನಾ ಎಂದು ರಾಜ್ಯ ಸರಕಾರ ಬೆನ್ನು ತಟ್ಟಿಕೊಂಡಿತ್ತು. ಆದರೆ ಈಗ ಅದೇ ಜಾರಿಯ ವಿಳಂಬಕ್ಕೆ ಕಾರಣ ಎನ್ನಲಾಗುತ್ತಿದೆ. ಒಂದು ರಾಷ್ಟ್ರೀಕೃತ ಬ್ಯಾಂಕ್ ಕೊಟ್ಟ ರೈತರ ಪಟ್ಟಿಯಲ್ಲಿ 253 ಹೆಸರುಗಳು ಒಂದೇ ರೀತಿಯ ಆಧಾರ್ ನಂಬರ್ ಪಡೆದಿವೆಯಂತೆ.

ಇದಲ್ಲದೆ ಈಗ ರಾಜ್ಯಮಟ್ಟದ ಬ್ಯಾಂಕರುಗಳ ಸಮಿತಿ ಸಲ್ಲಿಸಿದ ಪಟ್ಟಿಯಲ್ಲಿ 22ಲಕ್ಷ 'ಪ್ರೇತ' ಅಕೌಂಟ್‌ಗಳಿವೆ ಎಂದು ಸರಕಾರ ಹೇಳುತ್ತಿದೆ. ಇದರಿಂದಾಗಿ 34,200 ಕೋಟಿ ರೂ.ಗಳನ್ನು ಸಾಲಮನ್ನಾಕ್ಕೆ ನೀಡುತ್ತೇನೆ ಎಂದು ರೈತರಿಗೆ ಭರವಸೆ ಕೊಟ್ಟಿದ್ದ ಬಿಜೆಪಿ ಸರಕಾರ ಅದನ್ನು 24,000 ಕೋಟಿ ರೂ.ಗೆ ಇಳಿಸುವ, ಅಂದರೆ 10,2000 ಕೋಟಿ ರೂ. ಕಡಿತ ಮಾಡುವ ಯೋಚನೆ ಮಾಡುತ್ತಿದೆ ಎಂದು ವರದಿಯಾಗಿದೆ.

ಡಿಸೆಂಬರ್6: ಕೊಲ್ಕತಾದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ

ಬಾಬ್ರಿ ಮಸೀದಿ ಧ್ವಂಸ ಮಾಡಿದ ಕರಾಳ ಘಟನೆಯ 25ನೇ ವಾರ್ಷಿಕದಂದು ಪಶ್ಚಿಮ ಬಂಗಾಲದ ರಾಜಧಾನಿ ಕೊಲ್ಕತಾದಲ್ಲಿ ಸಾವಿರಾರು ಮಂದಿ ಒಂದು ಬೃಹತ್ ಮೆರವಣಿಗೆಯಲ್ಲಿ ಭಾಗವಹಿಸಿದರು. ಎಡರಂಗ ಮತ್ತು ಇತರ ಎಡಪಕ್ಷಗಳು ಇದಕ್ಕೆ ಕರೆ ನೀಡಿದ್ದವು. ವಿಶೇಷವಾಗಿ ವಿದ್ಯಾರ್ಥಿಗಳು ಮತ್ತು ಯುವಜನರು ಇದರಲ್ಲಿ ನವೀನ ಘೋಷಣೆಗಳೊಂದಿಗೆ ಭಾಗವಹಿಸಿದರು. ಪಶ್ಚಿಮ ಬಮಗಾಲದ ಇತರ ಹಲವೆಡೆಗಳಲ್ಲಿಯೂ ಇಂತಹ ಮೆರವಣಿಗೆ, ಸಭೆಗಳು ನಡೆದವು. ಸಿಪಿಐ(ಎಂ) ಮತ್ತು ಎಡರಂಗ ಕಳೆದ ಕೆಲವು ದಿನಗಳಿಂದ ಈ ಬಗ್ಗೆ ವ್ಯಾಪಕ ಪ್ರಚಾರ ನಡೆಸಿದ್ದವು. ಈ ಕರಾಳ ಕೃತ್ಯವನ್ನು, ಅದರ ಹಿನ್ನೆಲೆ, ಪರಿಣಾಮಗಳನ್ನು ನೆನಪಿಸುವ ಕಿರುಪುಸ್ತಕಗಳು ಮತ್ತು ಕರಪತ್ರಗಳನ್ನು ವ್ಯಾಪಕವಾಗಿ ಪ್ರಕಟಿಸಲಾಯಿತು. 'ಗಣಶಕ್ತಿ' ದೈನಿಕ ಈ ಕುರಿತ ಒಂದು ಪುರವಣಿಯನ್ನು, ಲೇಖನಮಾಲೆಯನ್ನು ಪ್ರಕಟಿಸಿತು.



ಜುನೈದನಿಗೆ ನ್ಯಾಯ ಕೊಡಿಸಿ, ಆತನ ಕುಟುಂಬಕ್ಕೆ ಕೊಡುವುದಾಗಿ ಹೇಳಿದ ಪರಿಹಾರವನ್ನು ಕೊಡಿ-ಹರ್ಯಾಣ ಮುಖ್ಯಮಂತ್ರಿಗಳಿಗೆ ಬೃಂದಾ ಕಾರಟ್ ಪತ್ರ

ಕಳೆದ ಜೂನ್ 22 ರಂದು ಹರ್ಯಾಣದಲ್ಲಿ ರೈಲಿನೊಳಗೆ ಕೋಮುವಾದ ಪ್ರೇರಿತ ಗುಂಪೊಂದು 15 ವರ್ಷದ ಜುನೈದ್ ಖಾನ್‌ನನ್ನು ಇರಿದು, ಥಳಿಸಿ ಕೊಂದಿತು. ಆತನ ಸೋದರರಾದ ಹಾಸಿಮ್ ಮೋಯ್ನ್ ಮತ್ತು ಶಕೀರ್ ಮೋಯ್ನ್‌ನನ್ನು ತೀವ್ರವಾಗಿ ಗಾಯಗೊಳಿಸಿತು.

ಈ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತವಾದಾಗ, ಒಂದು ವಾರದ ನಂತರ ಹರ್ಯಾಣದ ಬಿಜೆಪಿ ಸರಕಾರ ಜುನೈದನ ಕುಟುಂಬಕ್ಕೆ 10 ಲಕ್ಷ ರೂ.ಗಳ ಪರಿಹಾರ ಮೊತ್ತ ನೀಡುವುದಾಗಿ ಪ್ರಕಟಿಸಿತ್ತು. ಆದರೆ ಈಗ ಆರು ತಿಂಗಳಾಗುತ್ತ ಬರುತ್ತಿದ್ದರೂ ಸರಕಾರದಿಂದ ಆ ಪರಿಹಾರ ಮೊತ್ತ ಬಂದೇ ಇಲ್ಲ.

ಈ ಬಗ್ಗೆ, ಈ ಮೊದಲು ಜುನೈದನ ಮನೆಗೆ ಹೋಗಿ ಆತನ ತಾಯಿ-ತಂದೆಯನ್ನು ಭೇಟಿಮಾಡಿ ಬಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಹರ್ಯಾಣ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಈ ಭೀಕರ ಘಟನೆ ಮತ್ತು ಸ್ವತಃ ಅವರೇ ಮಾಡಿದ ಪ್ರಕಟಣೆಯನ್ನು ನೆನಪಿಸಿದ್ದಾರೆ.

"ತೀವ್ರವಾಗಿ ಗಾಯಗೊಂಡಿದ್ದ ಜುನೈದನ ಒಬ್ಬ ಸೋದರ ಈಗ ಯಾವ ಕೆಲಸ ಮಾಡುವ ಪರಿಸ್ಥಿತಿಯಲ್ಲೂ ಇಲ್ಲ. ದುರದೃಷ್ಟವಶಾತ್ ಈ ಕುಟುಂಬಕ್ಕೆ ಸರಕಾರದಿಂದ ಯಾವ ಪರಿಹಾರವೂ ದೊರೆತಿಲ್ಲ. ಜಿಲ್ಲಾ ಕಲೆಕ್ಟರ್ ರೆಡ್‌ಕ್ರಾಸ್ ನಿಧಿಯಿಂದ 5 ಲಕ್ಷ ರೂ. ಕೊಟ್ಟಿದ್ದಾರೆ. ಆದರೆ ಮುಖ್ಯಮಂತ್ರಿಗಳಿಂದ 10 ಲಕ್ಷ ರೂ. ಕೊಡಬೇಕೆಂಬ ಆದೇಶವೇನೂ ಬಂದಿಲ್ಲ ಎಂದು ಅವರು ಹೇಳುತ್ತಾರೆ." ಎಂದು ಬೃಂದಾ ಕಾರಟ್ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಇನ್ನೊಂದೆಡೆಯಲ್ಲಿ ಪಂಜಾಬ್ ಮತ್ತು ಹರ್ಯಾಣ ಹೈಕೋರ್ಟ್ ವಿಭಾಗೀಯ ಪೀಠ ಈ ಕೇಸಿನಲ್ಲಿ ವಿಚಾರಣಾ ಕೋರ್ಟಿನ ಕಲಾಪಗಳಿಗೆ ತಡೆಯಾಜ್ಞೆ ನೀಡಿದೆ.

ಜುನೈದ್ ತಂದೆ ಜಲಾಲುದ್ದೀನ್ ಹರ್ಯಾಣ ಪೋಲೀಸ್‌ನ ತನಿಖೆ ದೋಷಪೂರ್ಣವಾಗಿದೆ, ಅದನ್ನು ಸಿಬಿಐಗೆ ಒಪ್ಪಿಸಬೇಕು ಎಂದು ಕೋರಿ ಹೈಕೋರ್ಟಿಗೆ ಅರ್ಜಿ ಸಲ್ಲಿಸಿದ್ದರು. ಏಕ ನ್ಯಾಯಾಧೀಶರ ಪೀಠ ಇದಕ್ಕೆ ಸಾಕ್ಷಿ ಇಲ್ಲವೆಂದು ಅದನ್ನು ವಜಾ ಮಾಡಿತ್ತು. ಇದರ ವಿರುದ್ಧ ವಿಭಾಗೀಯ ಪೀಠಕ್ಕೆ ಅರ್ಜಿ ಹಾಕಿದ್ದ ಜಲಾಲುದ್ದೀನರ ಅರ್ಜಿಯನ್ನು ಆಲಿಸಿದ ವಿಭಾಗೀಯ ಪೀಠ ಹರ್ಯಾಣ ಸರಕಾರ ಮತ್ತು ಸಿಬಿಐಗೆ ನೋಟೀಸ್ ಜಾರಿ ಮಾಡಿದೆ.





ಸಿಪಿಸಿ 19ನೇ ಮಹಾಧಿವೇಶನ

ಚೀನಿ ಗುಣಲಕ್ಷಣಗಳಿಗೆ ಅನುಗುಣವಾಗಿ ಸಮಾಜವಾದ ವ್ಯವಸ್ಥೆಯ ರೂಪಾಂತರದತ್ತ ದಾಪುಗಾಲು

ಚೀನಾ ಕಮ್ಯೂನಿಸ್ಟ್ ಪಕ್ಷದ (ಸಿಪಿಸಿ) 19ನೇ ಮಹಾಧಿವೇಶನ ಅಕ್ಟೋಬರ್ 18 ರಿಂದ 24 ರವರೆಗೆ ಬೀಜಿಂಗ್‌ನಲ್ಲಿ ಯಶಸ್ವಿಯಾಗಿ ನಡೆದಿದೆ. "ನಮ್ಮ ಮೂಲ ಮಹತ್ವಾಕಾಂಕ್ಷೆಗಳಿಗೆ ನಿಷ್ಠವಾಗಿರಿ ಮತ್ತು ಮೂಲ ಉದ್ದೇಶಗಳ ಈಡೇರಿಕೆಗಳಿಗಾಗಿ ದೃಢವಾಗಿರಿ; ಚೀನಿ ಗುಣಲಕ್ಷಣಗಳೊಂದಿಗಿನ ಸಮಾಜವಾದದ ಬಾವುಟವನ್ನು ಎತ್ತಿ ಮುನ್ನಡೆಯಿರಿ; ಎಲ್ಲಾ ಆಯಾಮಗಳಲ್ಲಿಯೂ ಸುಮಾರಾದ ಸಮೃದ್ಧ ಸಮಾಜವನ್ನು ನಿರ್ಮಿಸುವಲ್ಲಿ ನಿರ್ಣಾಯಕ ವಿಜಯವನ್ನು ಗಳಿಸುವತ್ತ ಮಹತ್ತರವಾದ ಯಶಸ್ವಿಗೆ ಶ್ರಮವಹಿಸಿ; ಮತ್ತು ಚೀನಾದ ರಾಷ್ಟ್ರೀಯ ಪುನರ್ ರಚನೆಯ ಕನಸನ್ನು ನನಸಾಗಿಸಲು ಜಾಗರೂಕತೆಯಿಂದ ಕಾರ್ಯ ನಿರ್ವಹಣೆ ಮಾಡಿ" ಎಂಬುದು ಸಿಪಿಸಿ ಯ 19 ನೇ ಮಹಾಧಿವೇಶನದ ಥೀಮ್ ಆಗಿತ್ತು.

ಸುಮಾರು 8.9 ಕೋಟಿ ಪಕ್ಷದ ಸದಸ್ಯರನ್ನು ಪ್ರತಿನಿಧಿಸುವ 2,287 ಪ್ರತಿನಿಧಿಗಳು ಈ ರಾಷ್ಟ್ರೀಯ ಕಾಂಗ್ರೇಸ್ ನ ಅಧಿವೇಶನದಲ್ಲಿ ಪಾಲ್ಗೊಂಡಿದ್ದರು. ಪಕ್ಷದ ಸಂವಿಧಾನದ ನಿಯಮಗಳಂತೆ, ನಾಮ ನಿರ್ದೇಶನ, ಸಂಘಟನಾ ವಿಮರ್ಶೆ ಮತ್ತು ಕಠಿಣವಾದ ಅರ್ಹತಾ ವಿಧಾನಗಳ ಮೂಲಕ ಈ ಪ್ರತಿನಿಧಿಗಳು ಆಯ್ಕೆಗೊಂಡಿದ್ದರು. ಸಂವಿಧಾನವು ಪ್ರತಿಪಾದಿಸಿರುವಂತೆ, ಐದು ವರ್ಷಗಳಿಗೂ ಹೆಚ್ಚು ಕಾಲ ಪಕ್ಷದಲ್ಲಿದ್ದು, ಪಕ್ಷ ಮತ್ತು ರಾಜಕೀಯ ಸಮಗ್ರತೆ ಮತ್ತು ಸ್ವಚ್ಛ ಕೆಲಸದ ಶೈಲಿಯನ್ನು ಹೊಂದಿರುವ ಪಕ್ಷದ ಸದಸ್ಯರು ಮಾತ್ರ ಮಹಾದಿ ಮುಂಚೆಯೇ ಉತ್ಪಾದನೆ ಮೂಲಕ ಆಯ್ಕೆಯಾದವರಾಗಿದ್ದಾರೆ.

ಮುಂಚೂಣಿ ಉತ್ಪಾದನಾ ಕ್ಷೇತ್ರಗಳಲ್ಲಿ ತೊಡಗಿದ್ದು ಅಲ್ಲಿಂದ ಆಯ್ಕೆಯಾದ .ಒಟ್ಟು 771 ಪ್ರತಿನಿಧಿಗಳು ಅಂದರೆ ಒಟ್ಟು ಪ್ರತಿನಿಧಿಗಳ ಶೇ. 33.7 ರಷ್ಟು ಇದ್ದರು. ಇದು 18 ನೇ ಮಹಾಧಿವೇಶನಕ್ಕೆ ಹೋಲಿಸಿದರೆ, ಶೇ. 3 ರಷ್ಟು ಹೆಚ್ಚಾಗಿದೆ. ಇವರಲ್ಲಿ 198 ಕಾರ್ಮಿಕರು ಅಥವಾ ವಲಸಿಗ ಕಾರ್ಮಿಕರು, 86 ರೈತರು ಮತ್ತು 283 ವೃತ್ತಿಪರ ತಾಂತ್ರಿಕ ಸಿಬ್ಬಂದಿಗಳಾಗಿದ್ದರು. ಈ ಮಹಾಧಿವೇಶನದಲ್ಲಿ ಒಟ್ಟು ಪ್ರತಿನಿಧಿಗಳ ಪೈಕಿ ಶೇ. 24.1 ರಷ್ಟು ಮಹಿಳೆಯರು, ಶೇ. 11.5 ರಷ್ಟು ಜನಾಂಗೀಯ ಅಲ್ಪ ಸಂಖ್ಯಾತರ ಗುಂಪುಗಳು ಇದ್ದವು. ಮಹಾಧಿವೇಶನದಲ್ಲಿ ದೇಶದ 55 ಜನಾಂಗೀಯ ಅಲ್ಪ ಸಂಖ್ಯಾತ ಗುಂಪುಗಳನ್ನು 43 ಜನ ಪ್ರತಿನಿಧಿಸಿದ್ದರು.

ಪ್ರತಿನಿಧಿಗಳ ವಯಸ್ಸು 51.8 ಆಗಿತ್ತು. 55 ವರ್ಷಕ್ಕಿಂತ ಕಡಿಮೆಯಿದ್ದವರು ಶೇ 70.6 ರಷ್ಟಿದ್ದರು. 1978 ರ (ಅಂದರೆ 'ಸುಧಾರಣೆ ಮತ್ತು ಮುಕ್ತ ಮಾರುಕಟ್ಟೆ') ನಂತರ ಸಿಪಿಸಿ ಸೇರಿದ್ದವರು ಒಟ್ಟು ಶೇ. 87.8 ರಷ್ಟಿದ್ದರು. 416 ಪ್ರತಿನಿಧಿಗಳು ಜನವರಿ 2000 ರ ನಂತರ ಸಿಪಿಸಿ ಸೇರಿದವರು. ಒಟ್ಟಾರೆಯಾಗಿ ಈ ವಿವರಣೆಯಿಂದ ಯುವ ಪೀಳಿಗೆ ಸಿಪಿಸಿಗೆ ಸೇರ್ಪಡೆಯಾಗಿರುವುದು. ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗಿದೆ ಎಂಬುದನ್ನು ದೃಢಪಡಿಸುತ್ತದೆ.

ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲೂ ಗಮನಾರ್ಹ ಪ್ರಗತಿ

ಪ್ರಧಾನ ಕಾರ್ಯದರ್ಶಿಯಾದ ಕ್ಸಿ ಜಿಂಪಿಂಗ್ ಅವರು ಮಹಾಧಿವೇಶನಕ್ಕೆ ನೀಡಿದ ವರದಿಯಲ್ಲಿ, 2012 ರಲ್ಲಿ 18 ನೇ ಮಹಾಧಿವೇಶನದ ನಂತರದ ಅವಧಿಯಲ್ಲಿ ಚೀನಾದ ಆರ್ಥಿಕತೆಯು 7.2 ಶೇಕಡಾ ಸರಾಸರಿ ವಾರ್ಷಿಕ ದರದಲ್ಲಿ ಬೆಳೆದಿದೆ ಎಂದು ತಿಳಿಸಿದ್ದಾರೆ. ಚೀನಾದ ಒಟ್ಟು ದೇಶಿಯ ಉತ್ಪನ್ನವು (ಜಿಡಿಪಿ) 54 ರಿಂದ 80 ಸಾವಿರ ಶತಕೋಟಿ 'ಯುವಾನ್'(ಚೀನಿ ನಾಣ್ಯ)ಗೆ ಹೆಚ್ಚಳಗೊಂಡಿದೆ. ಹಾಗೆಯೇ, ವಿಶ್ವದ ಎರಡನೆಯ ಅತಿದೊಡ್ಡ ಆರ್ಥಿಕತೆಯಾಗಿ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ. ಜಾಗತಿಕ ಆರ್ಥಿಕ ಬೆಳವಣಿಗೆಯಲ್ಲಿ ಚೀನಾದ ಪಾಲು ಶೇ.30 ಕ್ಕಿಂತಲೂ ಹೆಚ್ಚಾಗಿದೆ. 6 ಕೋಟಿ ಹೆಚ್ಚು ಜನರ ಬಡತನ ತೊಡೆದು ಹಾಕಿದೆ. ಬಡತನದ ಅನುಪಾತವನ್ನು ಶೇ. 10.2 ರಿಂದ ಶೇ. 2 ಕ್ಕೆ ಕಡಿಮೆ ಮಾಡಿದೆ. ಉದ್ಯೋಗವು ಸ್ಥಿರವಾದ ಬೆಳವಣಿಗೆಯನ್ನು ದಾಖಲಿಸಿದೆ. ಪ್ರತಿ ವರ್ಷವು ಸರಾಸರಿ 1.3 ಕೋಟಿ ನಗರ ಉದ್ಯೋಗಗಳು ಸೃಷ್ಟಿಯಾಗುತ್ತಿವೆ. ಅಂತೆಯೇ, ಶೈಕ್ಷಣಿಕ ಅವಕಾಶಗಳ ವಿಸ್ತರಣೆಯಲ್ಲಿ, ನಗರ ಮತ್ತು ಗ್ರಾಮೀಣ ನಿವಾಸಿಗಳಿಗೆ ಸಬ್ಸಿಡಿ ಕೊಡಲಾದ ವಸತಿ ಯೋಜನೆಗಳನ್ನು ನಿರ್ಮಿಸುವಲ್ಲಿ, ಸಾಮಾಜಿಕ ಭದ್ರತಾ ವ್ಯವಸ್ಥೆಯನ್ನು ಒದಗಿಸುವುದರಲ್ಲಿ ಪ್ರಗತಿ ಆಗಿದೆ. ಸಾರ್ವಜನಿಕ ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು ಐದು ವರ್ಷಗಳ ಅವಧಿಯಲ್ಲಿ ಉತ್ತಮಗೊಂಡಿರುವುದನ್ನು ವರದಿಯು ಪ್ರಸ್ತಾಪಿಸಿದೆ. ಈ ಎಲ್ಲ ಬೆಳವಣಿಗೆಗಳು – ಜಾಗತಿಕ ಆರ್ಥಿಕತೆಯ ನಿಧಾನಗತಿಯ ಚೇತರಿಕೆ ಮತ್ತು ಆಗಾಗ್ಗೆ ಪ್ರಾದೇಶಿಕ ಸಂಘರ್ಷಗಳ – ಅಂದರೆ ಒಟ್ಟಾರೆ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಆಗಿದೆ. ಈ ಎಲ್ಲಾ ಪ್ರಗತಿ ಆಂತರಿಕ ಬಳಕೆ–ಬೇಡಿಕೆಗಳ ಹೆಚ್ಚಳದ ಮೇಲೆ ಆಧಾರಿತವಾಗಿದೆ ಎಂದು ವರದಿ ತಿಳಿಸಿದೆ.

ವರದಿಯು ಚೀನಾದ ಕಮ್ಯೂನಿಸ್ಟ್ ಪಕ್ಷದ ನಾಯಕತ್ವದಲ್ಲಿ ಹಾಗೂ ಪಕ್ಷದ ಸದಸ್ಯರಲ್ಲಿ ದೃಡವಾದ ನಂಬಿಕೆಯನ್ನು ವ್ಯಕ್ತಪಡಿಸಿದೆ. ಆರ್ಥಿಕ ಸಮೃದ್ಧಿ ಮತ್ತು ಸಮಾಜವಾದಿ ಚೀನಾವು ಒಂದು ದೇಶವಾಗಿ ಮಾಡಿದ ಪ್ರಗತಿಯನ್ನು ವರದಿ ದೃಡಿಕರಿಸಿದೆ. ಚೀನಿಯರ ಈ ರಾಷ್ಟ್ರ ತುಂಬ ಕಾಲದಿಂದ ಅಸ್ತಿತ್ವದಲ್ಲಿದ್ದು, ಇಲ್ಲಿಯುವರೆವಿಗೂ ಮಹತ್ತರವಾದ ರೂಪಾಂತರವನ್ನು ಸಾಧಿಸಿದೆ. ಶ್ರೀಮಂತವಾಗಿ ಬೆಳೆದು ಪ್ರಬಲವಾಗಿದೆ. ನವ ರೂಪ ಪಡೆದು ಯೌವನ ಪಡೆದು ಅದ್ಭುತ ಭವಿಷ್ಯವನ್ನು ಅಳವಡಿಸಿಕೊಂಡು ಬಂದಿದೆ.

21 ನೇ ಶತಮಾನದಲ್ಲಿ ಚೀನಾದ ವೈಜ್ಞಾನಿಕ ಸಮಾಜವಾದವು ಸಂಪೂರ್ಣ ಚೈತನ್ಯವನ್ನು ಹೊಂದಿದೆ. ಹಾಗೆಯೇ ಚೀನಿ ಗುಣಲಕ್ಷಣಗಳೊಂದಿಗಿನ ಸಮಾಜವಾದದ ಬಾವುಟ ಹೆಚ್ಚು ಎತ್ತರದಲ್ಲಿ ಹಾರಾಡುತ್ತಿದೆ. ಉತ್ತಮ ಅಭಿವೃದ್ಧಿಯ ಮಾರ್ಗ, ಸಿದ್ಧಾಂತದ ಬದ್ಧತೆ, ಅದರ ವ್ಯವಸ್ಥೆ ಮತ್ತು ಚೀನಿ ಗುಣಲಕ್ಷಣಗಳೊಂದಿಗಿನ ಸಮಾಜವಾದದ ಸಂಸ್ಕೃತಿಯು ಅಭಿವೃದ್ಧಿಯೊಂದಿಗೆ ಹೊಂದಿಕೊಂಡಿರುವುದು – ಇವೆಲ್ಲವೂ ಅದಕ್ಕೆ ಕಾರಣ. ಇದರಿಂದಾಗಿ, ಇತರೆ ಅಭಿವೃದ್ಧಿ ಶೀಲ ದೇಶಗಳು ಆಧುನಿಕತೆ ಸಾಧಿಸಲು ಹೊಸ ಜಾಡನ್ನು ಹಿಡಿಯುವುದು ಮಾತ್ರವಲ್ಲದೆ ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಅಭಿವೃದ್ಧಿಯನ್ನು ಬಯಸುವ ಇತರೆ ದೇಶಗಳು ಚೀನಾದ ವಿವೇಕ ಮತ್ತು ವಿಧಾನವನ್ನು ಅನುಸರಿಸಲು ಹೊಸ ಮಾದರಿ ಕಟ್ಟಿಕೊಟ್ಟಿದೆ ಎಂದು ವರದಿಯು ಗುರುತಿಸಿದೆ. ಆಧುನಿಕ ಸಮಾಜವಾದ ರಾಷ್ಟ್ರವನ್ನಾಗಿ ನಿರ್ಮಿಸಲು ಎಲ್ಲ ಪ್ರಯತ್ನಗಳನ್ನೂ ಮುಂದುವರಿಸುತ್ತಿದೆ. ಚೀನಾದ ಎಲ್ಲಾ ಜನಾಂಗೀಯ ಗುಂಪುಗಳ ಜನರು ಒಟ್ಟಿಗೆ ದುಡಿಮೆ ಮಾಡುವ ಹಾಗೂ ಉತ್ತಮ ಜೀವನ ಸೃಷ್ಟಿಸಲು ಮತ್ತು ಅಂತಿಮವಾಗಿ ಎಲ್ಲರಿಗೂ ಸಾಮಾನ್ಯ ಸಮೃದ್ಧಿಯನ್ನು ಸಾಧಿಸುವ 'ಒಂದು ಹೊಸ ಯುಗ' ಇದು. ಚೀನಾ ಮಾನವ ಕುಲಕ್ಕೆ ಹೆಚ್ಚಿನ ಕೊಡುಗೆಗಳನ್ನು ಕೊಡುವುದರಲ್ಲಿ ಕೇಂದ್ರಕ್ಕೆ ಬರಲಿದೆ ಎಂದು ವರದಿ ವಿಮರ್ಶಿಸಿದೆ.

ಇನ್ನೂ ಸಮಾಜವಾದಿ ನಿರ್ಮಾಣದ ಪ್ರಾಥಮಿಕ ಹಂತದಲ್ಲಿದೆ

ವರದಿಯು ಚೀನಾದಲ್ಲಿ ಸಮಾಜವಾದದ ಹಂತದ ಬಗ್ಗೆ ಸ್ಪಷ್ಟಗೊಳಿಸಿದೆ. ಸಿಪಿಸಿಯ ಮೌಲ್ಯ ಮಾಪನದ ಪ್ರಕಾರ, ಚೀನಾ ಇನ್ನೂ ಸಮಾಜವಾದಿ ನಿರ್ಮಾಣದ ಪ್ರಾಥಮಿಕ ಹಂತದಲ್ಲಿದೆ ಎಂದಿದೆ. ಕಳೆದ ಐವತ್ತು ವರ್ಷಗಳಲ್ಲಿ ಧನಾತ್ಮಕ ಬೆಳವಣಿಗೆಗಳನ್ನು ಗಮನಿಸುವುದರ ಜೊತೆಗೆ, ಕೆಲವು ದೌರ್ಬಲ್ಯಗಳನ್ನು ಹಾಗೂ ಹೆಚ್ಚಿನ ಅಗತ್ಯಗಳನ್ನು ಪೂರೈಸಬೇಕಾದ ಕ್ಷೇತ್ರಗಳನ್ನು ಕೂಡ ವರದಿ ಗುರುತಿಸಿದೆ.

ಅಸಮತೋಲನ ಮತ್ತು ಅಸಮರ್ಪಕ ಅಭಿವೃದ್ಧಿಯಿಂದ ಉಂಟಾದ ಕೆಲವು ತೀವ್ರತರದ ವೈರುಧ್ಯಗಳನ್ನು ಗುರುತಿಸಿರುವ ವರದಿಯು, ಅದಕ್ಕೆ ಪರಿಹಾರವನ್ನು ಸೂಚಿಸಿದೆ. ಅಭಿವೃದ್ಧಿಯ ಗುಣಮಟ್ಟ ಮತ್ತು ಅದರ ಪರಿಣಾಮಗಳು, ಅಗತ್ಯಗಳನ್ನು ನವೀಕರಿಸಲು ಚೀನಾ ದೇಶದ ಸಾಮಾರ್ಥ್ಯವನ್ನು ಮತ್ತಷ್ಟು ಬಲಗೊಳಿಸಲು ವರದಿ ಸೂಚಿಸಿದೆ.



ಅರ್ಥವ್ಯವಸ್ಥೆಯಲ್ಲಿ ಇನಷ್ಟು ಸುಧಾರಣೆಯನ್ನು ಬಯಸುತ್ತಿರುವ ಚೀನಾ ದೇಶವು ತಮ್ಮ ವಾತಾವರಣದ ರಕ್ಷಣೆಗೆ ಹೆಚ್ಚು ಒತ್ತುಕೊಟ್ಟಿದೆ. ಬಡತನದ ನಿವಾರಣೆ ಅಸಾಧರಣ ಕೆಲಸವಾಗಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವಿನ ಅಭಿವೃದ್ಧಿಯಲ್ಲಿ ಮತ್ತು ಆದಾಯ ವಿತರಣೆಯಲ್ಲಿ ಇನ್ನು ದೊಡ್ಡ ಭಿನ್ನತೆಗಳಿವೆ ಎಂಬುದನ್ನು ವರದಿ ಗುರುತಿಸಿದೆ. ಅದರ ಅರ್ಥ ನಮ್ಮ ಜನರಿಗೆ ಉದ್ಯೋಗ, ಶಿಕ್ಷಣ, ಆರೋಗ್ಯ, ವಸತಿ ಮತ್ತು ಹಿರಿಯರ ಆರೈಕೆಯಲ್ಲಿ ಇನ್ನೂ ಅನೇಕ ತೊಂದರೆಗಳನ್ನು ಎದುರಿಸುತ್ತಿದೆ ಎಂಬ ವಾಸ್ತವ ವಿಮರ್ಶೆ ಮಾಡಲಾಗಿದೆ. ಸೈದ್ಧಾಂತಿಕ ಹೋರಾಟ ಇನ್ನೂ ಸಂಕೀರ್ಣ ಸ್ಥಿತಿಯಲ್ಲಿದೆ.

ಉತ್ಪಾದಕ ಶಕ್ತಿಗಳ ಸುಧಾರಣೆ ಗಮನಿಸಿದರೆ, ಸಮಾಜವಾದಿ ನಿರ್ಮಾಣಕ್ಕೆ ತೆಗೆದುಕೊಂಡ ಕ್ರಮಗಳು ಜನರಿಗೆ ಯೋಗ್ಯವಾದ ಜೀವನ ನಡೆಸಲು ಸಾಧ್ಯವಾಗುವಂತೆ ಮಾಡುವಲ್ಲಿ ಕಳೆದ 18ನೇ ಮಹಾಧಿವೇಶನದಿಂದ ಇಲ್ಲಿಯವರೆಗೂ ಮೂಲಭೂತ ಅಗತ್ಯಗಳ ಪೂರೈಸುವ ನಿಟ್ಟಿನಲ್ಲಿ ಸುಧಾರಣೆಯಾಗಿದೆ.

ಪ್ರಧಾನ ವೈರುಧ್ಯ

ಚೀನಾದ ಜನತೆಯ "ಭೌತಿಕ ಮತ್ತು ಸಾಂಸ್ಕೃತಿಕ ಅಗತ್ಯಗಳು ಹೆಚ್ಚು ಪ್ರಗತಿ ಹೊಂದಿವೆಯಾದರೂ ಸಹ, ಅದರ ಜತೆಗೆ ಪ್ರಜಾಪ್ರಭುತ್ವ, ಕಾನೂನಿನ ನಿಯಮಗಳು, ನ್ಯಾಯ, ಭದ್ರತೆ ಮತ್ತು ಉತ್ತಮ ಪರಿಸರದ ನಿಟ್ಟಿನಲ್ಲಿ ಬೇಡಿಕೆಗಳು ಹೆಚ್ಚಾಗಿವೆ." "ಅಸಮತೋಲಿತ ಮತ್ತು ಅಸಮರ್ಪಕ ಅಭಿವೃದ್ಧಿಯು ಉತ್ತಮ ಜೀವನಕ್ಕಾಗಿ ಹೆಚ್ಚುತ್ತಿರುವ ಜನರ ಅಗತ್ಯಗಳಿಗೆ ನಿರ್ಬಂಧ ಹೇರಿದೆ." ಈ ಪ್ರಧಾನ ವೈರುಧ್ಯದ ಪರಿಹಾರ ಪಕ್ಷಕ್ಕೆ ಅತ್ಯಂತ ಆದ್ಯತೆಯದ್ದು. ಇದನ್ನು ವರದಿ ಈ ರೀತಿ ವಿಮರ್ಶೆ ನಡೆಸಿದೆ. "ಸಮಾಜವು ಪ್ರಗತಿ ಹೊಂದುವುದು ವೈರುಧ್ಯಗಳ ಬೆಳವಣಿಗೆಗಳಿಂದಲೇ. ವೈರುಧ್ಯವಿದ್ದಲ್ಲಿ ಹೋರಾಟವಿರುತ್ತದೆ" ಎಂದು ವರದಿ ಹೇಳಿದೆ.

ಈ ವೈರುಧ್ಯಗಳನ್ನು ಬಗೆಹರಿಸಲು ಮತ್ತು ಚೀನಿ ಸಮಾಜವಾದಿ ಸರ್ಕಾರವು ಅನುಷ್ಠಾನಗೊಳಿಸಬೇಕಾದ ಕ್ರಮಗಳನ್ನು ಈ ವರದಿ ಸೂಚಿಸಿದೆ. ಈ ಕ್ರಮಗಳನ್ನು 'ಕ್ಸಿ ಜಿಂಪಿಂಗ್ ಚಿಂತನೆ' ಎಂದು ಹೆಸರಿಸಲಾಗಿದೆ. 'ಕ್ಸಿ ಜಿಂಪಿಂಗ್ ಚಿಂತನೆ' ಪಕ್ಷದ ಸಂವಿಧಾನದಲ್ಲಿ – ಮಾರ್ಕ್ಸ್‌ವಾದ–ಲೆನಿನ್‌ವಾದ, ಮಾವೋ ಝೆಡಾಂಗ್ ಚಿಂತನೆಗಳು, ಡೆಂಗ್ ಕ್ಸಿಯಾಪಿಂಗ್ ಸಿದ್ಧಾಂತ, ಜಿಯಾಂಗ್ ಝೆಮಿನ್ ಅವರ 'ಮೂರು ಪ್ರತಿನಿಧಿತ್ವಗಳು" ಮತ್ತು ಹೂ ಜಿಂಟಾವೊ ಅವರ 'ಅಭಿವೃದ್ಧಿಯ ವೈಜ್ಞಾನಿಕ ಕಣ್ಣೋಟ' – ಗಳ ಜತೆಗೆ ಸೇರಿಕೊಳ್ಳುತ್ತದೆ. ಈ ಹೊಸ ಧೋರಣೆಗಳ ಸೇರ್ಪಡೆಯು "ಮಾರ್ಕ್ಸ್‌ವಾದವನ್ನು ಚೀನಿ ಸನ್ನಿವೇಶಕ್ಕೆ ಅಳವಡಿಸಿಕೊಳ್ಳುವಲ್ಲಿನ ಇತ್ತೀಚಿನ ಸಾಧನೆಗಳನ್ನು ಪ್ರತಿನಿಧಿಸುತ್ತದೆ. ಮತ್ತು ಪಕ್ಷ ಮತ್ತು ಜನತೆಯ ಪ್ರಾಯೋಗಿಕ ಅನುಭವ ಮತ್ತು ಸಾಮೂಹಿಕ ವಿವೇಕಗಳನ್ನು ಒಳಗೊಳ್ಳುತ್ತದೆ – ಎಂದು ವರದಿ ಹೇಳಿದೆ.

ಈ ಕಾರ್ಯಕ್ರಮಗಳನ್ನು ದೃಢಪಡಿಸಲು ವರದಿಯು ಕಾಲಮಿತಿಯನ್ನು ಸೂಚಿಸಿದೆ. 2020 ರಿಂದ 2035 ರವರೆಗಿನ ಮೊದಲ ಹಂತದಲ್ಲಿ ಸಮಾಜವಾದಿ ಆಧುನೀಕರಣವನ್ನು ಸಾಧಿಸಲಾಗುತ್ತದೆ. ಎರಡನೇ ಹಂತದಲ್ಲಿ 2035 ರಿಂದ ಮುಂದಿನ 15 ವರ್ಷಗಳಲ್ಲಿ ಚೀನಾವನ್ನು ಆಧುನಿಕ ಸಮಾಜವಾದಿ ರಾಷ್ಟ್ರವನ್ನಾಗಿ ಅಭಿವೃದ್ಧಿ ಪಡಿಸಿ, 21ನೇ ಶತಮಾನದ ಮಧ್ಯ ಬಾಗದಲ್ಲಿ ಒಂದು ಸಮೃದ್ಧ, ಬಲಿಷ್ಠವಾದ, ಪ್ರಜಾಸತ್ತಾತ್ಮಕ, ಸಾಂಸ್ಕೃತಿಕವಾಗಿ ಸುಧಾರಿತ, ಸಾಮರಸ್ಯ ಮತ್ತು ಸುಂದರ ಪರಿಪೂರ್ಣ ರಾಷ್ಟ್ರವನ್ನಾಗಿ ನಿರ್ಮಿಸುವ ಗುರಿಗಳನ್ನು 19ನೇ ಮಹಾಧಿವೇಶನ ಮುಂದಿಟ್ಟಿದೆ. ಈ ಸವಾಲನ್ನು ಸಮರ್ಥವಾಗಿ ಎದುರಿಸಲು, ಚೀನಿ ಗುಣಲಕ್ಷಣಗಳೊಂದಿಗೆ ಸಮಾಜವಾದವನ್ನು ಎತ್ತಿ ಹಿಡಿಯಲು, ಚೀನಿ ಕಮ್ಯುನಿಸ್ಟ್ ಪಕ್ಷವು ಯಾವಾಗಲೂ ಪ್ರಬಲವಾದ ನಾಯಕತ್ವ ಕೇಂದ್ರವಾಗಿಯೇ ಉಳಿದಿರುತ್ತದೆ ಎಂದು 19ನೇ ಮಹಾಧಿವೇಶನ ನಿರ್ಣಯಿಸಿದೆ. ●

JANASHAKTHI KANNADA VARA PATRIKE December 11-17, 2017 Price: Rs. 10/- Date of Publication: 08 December 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283









ಡಿಸೆಂಬರ್ 6: ರಾಜ್ಯಾದ್ಯಂತ ಕರಾಳ ದಿನ ಆಚರಣೆ

ಡಿಸೆಂಬರ್ 6 ಈ ದೇಶದ ಶೋಷಿತ ಹಾಗು ದಮನಕ್ಕೆ ತುತ್ತಾದ ಜನರಿಗೆ ಬೆಳಕಾಗಿರುವ ಡಾ.ಬಿ.ಆರ್.ಅಂಬೇಡ್ಕರ್‌ರವರು ದೇಹಾಂತವಾದ ದಿನ. ಜಗತ್ತಿನ ಶೋಷಿತ ಜನಗಳ ಪ್ರತಿನಿಧಿಯಾಗಿ ವರ್ಣಭೇದ ಜನಾಂಗೀಯ ನೀತಿಯ ವಿರುದ್ಧ ಹೋರಾಡಿ 26 ವರ್ಷಗಳಿಗೂ ಹೆಚ್ಚು ಸೆರೆವಾಸ ಅನುಭವಿಸಿ ಕಪ್ಪು ಜನಗಳ ಹಕ್ಕುಗಳನ್ನು ಮರುಸ್ಥಾಪಿಸಿದ ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೇಲಾರವರು ನಿಧನರಾದ ದಿನ ಡಿಸೆಂಬರ್ 6. ಅವರ ಆದರ್ಶ ಮತ್ತು ಸ್ಫೂರ್ತಿಯನ್ನು ನೆನೆದು ಶೋಷಿತ ಜನರನ್ನು ಮೇಲೆತ್ತುವ ಕಾರ್ಯಕ್ಕೆ ಮುಂದಾಗುವ ಬದಲು ಆರ್.ಎಸ್.ಎಸ್ ಪ್ರೇರಿತ ಹಿಂದುತ್ವ ಮತಾಂದರು ದೇಶದ ಅಲ್ಪಸಂಖ್ಯಾತರನ್ನು ದಮನಿಸಲು ಆದಿನ 5 ವರ್ಷಗಳ ಹಿಂದೆ ಬಾಬರಿ ಮಸೀದಿಯನ್ನು ಕೆಡವಿದರು. ಈ ದೇಶದ ಮುನ್ನೆಡೆಗೆ ಜಾತಿ–ಮತ–ಧರ್ಮಗಳ ಎಲ್ಲೆ ಮೀರಿ ತಮ್ಮನ್ನು ಅಪ್ಪಿಸಿಕೊಂಡಿರುವ ಅಲ್ಪಸಂಖ್ಯಾತರು ಮತ್ತು ದಲಿತರನ್ನು ಅವಮಾನಿಸಿ ಕೋಮುಸಾಮರಸ್ಯವನ್ನು ಹಾಳು ಮಾಡಿದರು.

ಈ ಕರಾಳ ದಿನದ 25ನೇ ವಾರ್ಷಿಕವನ್ನು ದೇಶಾದ್ಯಂತ ಪ್ರತಿಭಟನೆಯುನ್ನು ಮಾಡುವ ಮೂಲಕ ದೇಶದ ಕೋಮು ಸೌಹಾರ್ದತೆಯುನ್ನು ಎತ್ತಿಹಿಡಿದು ಮತಾಂದರು ಜನರ ಐಕ್ಯತೆ ಹೊಡೆಯುುವ ಹುನ್ನಾರವನ್ನು ಸೋಲಿಸಬೇಕಿದೆ. ಡಾ.ಬಿ.ಆರ್. ಅಂಬೇಡ್ಕರ್‌ರವರ ಆಶಯವನ್ನು ಎತ್ತಿಹಿಡಿಯಲು ಸಂವಿಧಾನದ ನೈಜ ಅಳವಡಿಕೆಯನ್ನು ವಿರೋಧಿಸುವ ಮನುವಾದಿ ಸಿದ್ದಾಂತದ ಪ್ರತಿಪಾದಕರ ನೀತಿಗಳನ್ನು ಹಿಮ್ಮೆಟ್ಟಿಸಲು ಒತ್ತಾಯಿಸಿ, ಅಂದು ರಾಜ್ಯದಾಧ್ಯಂತ ಸಿಪಿಐಎಂ, ಇತರ ಎಡ ಪಕ್ಷಗಳು ಮತ್ತು ಹಲವು ಜನಪರ ಸಂಘಟನೆಗಳು ಸೇರಿ ಪ್ರತಿಭಟನಾ ಸಭೆಯನ್ನು ಹಮ್ಮಿಕೊಂಡಿದ್ದವು.

ಡಿಸೆಂಬರ್ 6 ರಂದು ಕರಾಳ ದಿನವನ್ನು ಆಚರಿಸಿದ ವರದಿಗಳು ಬೆಂಗಳೂರು, ಬಾಗೇಪಲ್ಲಿ, ಹಾಸನ, ರಾಯಚೂರು, ಗಂಗಾವತಿ, ಧಾರವಾಡ, ಹುಣಸೂರು ಗಳಿಂದ ಬಂದಿವೆ. ಧಾರವಾಡದಲ್ಲಿ ಬಹಿರಂಗ ಪ್ರತಿಭಟನೆಗೆ ಅವಕಾಶ ಕೊಡದ್ದರಿಂದ ಸಭೆಯೊಂದನ್ನು ನಡೆಸಲಾಯಿತು ಎಂದು ವರದಿಯಾಗಿದೆ.

ವಿ. ಜಿ ಭಟ್ ಸಿದ್ಧ ಸೂತ್ರವನ್ನು ಒಪ್ಪದೇ ತಮ್ಮದೇ ಮಾರ್ಗವನ್ನು ಕಂಡುಕೊಳ್ಳಲು ಪ್ರಯತ್ನಿಸಿದ ಕವಿ: ಡಾ. ಎಂ. ಜಿ ಹೆಗಡೆ

"ವಿ. ಜಿ ಭಟ್ಟರು 20ನೇ ಶತಮಾನದ ತೀರ ವಿಶಿಷ್ಟ ಹಾಗೂ ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟ ಕವಿ. ಅವರ ವೈಶಿಷ್ಟ್ಯವೆಂದರೆ ಯಾವುದೇ ಪಂಥವನ್ನು ಸಿದ್ಧ ಸೂತ್ರವನ್ನು ಒಪ್ಪದೇ ತಮ್ಮದೇ ಮಾರ್ಗವನ್ನು ಕಂಡುಕೊಳ್ಳಲು ಅವರು ಪ್ರಯತ್ನಿಸಿದರು. ನವೋದಯ, ಪ್ರಗತಿಶೀಲ, ನವ್ಯ ಮೊದಲಾದ ಕಾವ್ಯ ಮಾರ್ಗಗಳು ಅವರನ್ನು ತಮ್ಮ ನೇರಕ್ಕೆ ಬಗ್ಗಿಸಿಕೊಳ್ಳಲು ಯತ್ನಿಸಿದವು. ಆದರೆ ಭಟ್ಟರು ಇದಕ್ಕೆ, ತಪ್ಪು ಹಾಕದೇ ತಮ್ಮದೇ ಮಾರ್ಗದಲ್ಲಿ ನಡೆದರು. ಸ್ವಾಭಿಮಾನಿ, ಸಂಕೋಚದ ಸ್ವಭಾವದವರೂ ಆಗಿದ್ದ ಅವರು ರಂಗದಿಂದ ಕೊಂಚ ದೂರ ನಿಂತು ರಂಗದ ಮೇಲಿನ ಆಗುಹೋಗುಗಳನ್ನು ವಿಮರ್ಶಾತ್ಮಕವಾಗಿ ನೋಡಿದರು. ತನ್ನ ಬದುಕು ಹಾಗೂ ಸಾಹಿತ್ಯ ಸೃಷ್ಟಿ ಎರಡರಲ್ಲೂ ಸ್ವಂತಿಕೆಯನ್ನು ಹಂಬಲಿಸಿದ್ದ ಅವರು ವಿಮರ್ಶಕರು ಹಾಗೂ ಓದುಗರಿಂದ ಬಹುಪಾಲು ನಿರ್ಲಕ್ಷ್ಯಕ್ಕೆ ಒಳಗಾಗಿದ್ದರು. ಕಾವ್ಯದ ವಸ್ತು ಹಾಗೂ ರಚನೆಯಲ್ಲಿ ಸಮಕಾಲೀನ ಇತರ ಕವಿಗಳಿಗಿಂತ ಅವರು ವಿಭಿನ್ನವಾಗಿ ಕಾಣುತ್ತಾರೆ. ವೈಯಕ್ತಿಕ ಬದುಕಿನ ಅವರ ನೋವು, ಕಷ್ಟ, ಕನಸು, ಅನುಭವ ಅವರ ಕಾವ್ಯದಲ್ಲಿ ಕಾಣಬಹುದಾಗಿದ್ದು ಕವನ ಅವರ ತಿಳಿವಳಿಕೆಯ ಬಗೆಯಾಗಿತ್ತು. ತಾವು ನಿರ್ಲಕ್ಷ್ಯಕ್ಕೆ ಒಳಗಾಗಿದ್ದಕ್ಕೆ ಅವರಿಗೆ ಬೇಸರವಿತ್ತು

ನಾಡಿನ ಚಿಂತನ ಪರಂಪರೆಯೊಂದಿಗೆ ಘನಿಷ್ಠ ಸಂಬಂಧ ಹೊಂದಿದ್ದ ಅವರ ಕೃತಿಗಳು ಲಭ್ಯವಾಗಬೇಕು. ಇನ್ನೂ ನಾಲ್ಕೇ ವರ್ಷಗಳಲ್ಲಿ ನಡೆಯಲಿರುವ ಅವರ ಜನ್ಮಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಸಾಧ್ಯವಾಗುತ್ತದೆ." ಎಂದು ಡಾ. ಎಂ. ಜಿ. ಹೆಗಡೆ ಹೇಳಿದರು. ಅವರು ಹೊನ್ನಾವರದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಚಿಂತನ ಉತ್ತರ ಕನ್ನಡದ ಆಶ್ರಯದಲ್ಲಿ ಭಾನುವಾರ ಇಲ್ಲಿ ನಡೆದ 'ವಿ.ಜಿ. ಭಟ್ ಸಾಹಿತ್ಯಾವಲೋಕನ' ವಿಚಾರ ಗೋಷ್ಠಿಯನ್ನು ಅವರು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಮಂಡಳಿಯ ಸದಸ್ಯರಾದ ಡಾ.



ಶ್ರೀಧರ ಬಳಗಾರ "ವಿ.ಜಿ. ಭಟ್ ತಾವು ಅನುಭವಿಸಿದ ಸಂಕಷ್ಟವನ್ನು ಸಕಾರಾತ್ಮಕವಾಗಿ ಸ್ವೀಕರಿಸಿ ಅದನ್ನು ಕಾವ್ಯವಾಗಿಸಿದರು. ನವೋದಯದಿಂದ ನವ್ಯಕ್ಕೆ ಹೊರಳುವ ಸಂದರ್ಭದ ಉತ್ಕಟ ಕವಿಯಾದ ಅವರು, ನವ್ಯರು ಕೊಟ್ಟ ಪ್ರಭುತ್ವದ ಲಕ್ಷಣಗಳನ್ನು ನಿರಾಕರಿಸಿದರು. ಕವಿಯನ್ನು ಸಾಮಾನ್ಯ ಪ್ರಜೆಯಾಗಿ ಪರಿಗಣಿಸಿ ಕಾವ್ಯವನ್ನು ಸಾಮಾನ್ಯರ ಸಂವಾದವಾಗಿಸಿದರು" ಎಂದು ಹೇಳಿದರು. ಸಾಹಿತ್ಯ ಅಕಾಡೆಮಿ ಪ್ರಾದೇಶಿಕ ಕಾರ್ಯದರ್ಶಿ ಎಸ್.ಪಿ. ಮಹಾಲಿಂಗೇಶ್ವರ ಸ್ವಾಗತಿಸಿದರು. ಚಿಂತನ ಜಿಲ್ಲಾ ಸಂಚಾಲಕ ಪ್ರಾಸ್ತಾವಿಕ ಮಾತನಾಡಿದರು. ಶ್ರೀಪಾದ ಭಟ್ ಮತ್ತು ಮಾಧವಿ ಭಂಡಾರಿ ಕೆರೆಕೋಣ ವಿ.ಜಿ. ಭಟ್ ಅವರ ಆಯ್ದ ಕವನಗಳನ್ನು ವಾಚಿಸಿದರು. ವಿಠ್ಠಲ ಭಂಡಾರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಿರಣ ಭಟ್ ಕಾರ್ಯಕ್ರಮ ನಿರ್ವಹಿಸಿದರು.

ನಂತರ ನಡೆದ ಗೋಷ್ಠಿಯಲ್ಲಿ ವಿ. ಜಿ ಭಟ್ಟರು ಕನ್ನಡ ಕಾವ್ಯ ಪರಂಪರೆಯೊಂದಿಗೆ ಹೊಂದಿದ್ದ ಸಂಬಂಧವನ್ನು ವಿಶ್ಲೇಷಿಸಿದ ಚಿಂತಾಮಣಿ ಕೊಡ್ಲಕೆರೆಯವರು "ವಿ.ಜಿ. ಭಟ್ಟರು ತಮ್ಮ ಆರಂಭದ ಸಂಕಲನಗಳಲ್ಲಿ ಪ್ರತಿಕ್ರಿಯಾತ್ಮಕವಾದ ಕಾವ್ಯವನ್ನು ಬರೆದರು ಹಾಗೂ ನವೋದಯದ ಕಾವ್ಯದ ಆದರ್ಶಗಳನ್ನು ವಿಡಂಬಿಸಿದರು ಎಂದು ಹೇಳಿದರು. ಆದರೆ ಮುಂದೆ ಅವರು ಸ್ವತಂತ್ರ ಕಾವ್ಯಮಾರ್ಗವನ್ನು ಕಂಡುಕೊಂಡರು. ಈ ಮಾರ್ಗದಲ್ಲಿ ದೇಶದ ವಿವಿಧ ಚಿಂತನೆ ಪರಂಪರೆಗಳೊಂದಿಗೆ ಅವರಿಗೆ ಸಂವಾದ ಸಾಧ್ಯವಾಯಿತು" ಎಂದು ಅಭಿಪ್ರಾಯಪಟ್ಟರು.

'ವಿ ಜಿ ಭಟ್ ಅವರ ಕಾವ್ಯದಲ್ಲಿ ಪ್ರತಿಭಟನಾ ನೆಲೆಗಳು' ಕುರಿತು ಮಾತನಾಡಿದ ಡಾ. ರಂಗನಾಥ ಕಂಟನಕುಂಟೆಯವರು ವಿ. ಜಿ ಭಟ್ಟರ ವಿಡಂಬನೆಯ ಪ್ರತಿಭಟನೆಯ ನೆಲೆಗಳನ್ನು ವಿವರಿಸಿದರು. "ಸಾಂಸ್ಥಿಕ ಧರ್ಮ, ಹದಗೆಟ್ಟ ರಾಜಕೀಯ ಪರಿಸ್ಥಿತಿ, ಶಿಕ್ಷಣ ವ್ಯವಸ್ಥೆ, ಇವುಗಳನ್ನು ವಿ.ಜಿ ಭಟ್ಟರ ಕಾವ್ಯ ವಿಮರ್ಶಿಸಿತು. ಕಡೆಯವರೆಗೂ ತಮ್ಮ ವಿಡಂಬನೆಯ ಮೊನಚನ್ನು ಸಾಮಾಜಿಕ ಕಳಕಳಿಯನ್ನು ಅವರ ಕಾವ್ಯ ಉಳಿಸಿಕೊಂಡಿದ." ಎಂದರು.

ವಿ. ಜಿ ಭಟ್ಟರ 'ಮರಳಿ ಬಂದ ಕವಿತೆ'ಯನ್ನು ಕುರಿತು ಮಾತನಾಡಿದ ಗೀತಾ ವಸಂತ ಅವರು "ಭಟ್ಟರು ಹೇಗೆ ಜಿ.ಕೆ, ಬುದ್ಧ, ಸೂಫಿ ಸಂತರು, ರಮಣ ಮಹರ್ಷಿ ಮೊದಲಾದವರ ಚಿಂತನೆಗಳನ್ನು ತಮ್ಮ ಕಾವ್ಯಲೋಕದಲ್ಲಿ ಮಾರ್ಪಡಿಸಿ ಬಳಸಿಕೊಂಡರು ಹಾಗೂ ಆಧ್ಯಾತ್ಮಿಕ ಹುಡುಕಾಟಕ್ಕೆ ತಮ್ಮ ಕಾವ್ಯವನ್ನು ಮಾಧ್ಯಮವಾಗಿಸಿಕೊಂಡರು ಎಂದು ವಿವರಿಸಿದರು. ಈ ದೃಷ್ಠಿಯಿಂದ ಬೇಂದ್ರೆಯವರೊಂದಿಗೆ ಹೋಲಿಸಬಹುದಾದ ಕವಿ ವಿ.ಜಿ ಭಟ್ಟರು" ಎಂದು ಅವರು ಹೇಳಿದರು.

ವಿ. ಜಿ. ಭಟ್ಟರ ಗದ್ಯ ಕೃತಿಗಳ ಕುರಿತು ಮಾತನಾಡಿದ ಎಂ.ಡಿ. ವಕ್ಕುಂದ ಅವರು "ವಿ. ಜಿ ಭಟ್ಟರ ಪ್ರಾದೇಶಿಕ ಚಿತ್ರಗಳು ನಿಸರ್ಗದ ಬಣ್ಣನೆಗಿಂತ ಮನುಷ್ಯ ಹೃದಯದ ಸೌಂದರ್ಯ ಹಾಗೂ ಕುರೂಪಗಳನ್ನು ಅನಾವರಣಗೊಳಿಸುತ್ತವೆ. ಭಟ್ಟರ ಲಘುಕತೆಗಳು ಅವರ ಕಾವ್ಯಲೋಕದ ವಿಸ್ತರಣೆಗಳಾಗಿವೆ; ಅವುಗಳಲ್ಲಿ ಮಾನವೀಯ ಕಳಕಳಿ ಮಿಡಿದಿದೆ. ನಿಜವಾಗಿಯೂ ಅವರೊಬ್ಬ ಬಂಡಾಯದ ಕವಿ" ಎಂದು ಅವರು ವಿವರಿಸಿದರು.

ಅಧ್ಯಕ್ಷತೆ ವಹಿಸಿದ ರಾಜಪ್ಪ ದಳವಾಯಿ ಮಾತನಾಡಿ "ನವೋದಯ, ನವ್ಯ ಸಾಹಿತ್ಯ ಅವರನ್ನು ಒಳಗೊಳ್ಳಲು ಪ್ರಯತ್ನಿಸಿದರೂ ಅವರೇ ಅದರಿಂದ ಹೊರಗುಳಿಯುತ್ತಾರೆ. ಲಂಕೇಶರು ಅಕ್ಷರ ಕಾವ್ಯದ ಮುನ್ನುಡಿಯಲ್ಲಿ ಮಾಡಿದ ವಿಮರ್ಶೆ ವಿ.ಜಿ ಭಟ್ಟರಿಗೆ ದೊಡ್ಡ ಹೆಸರು ತಂದುಕೊಟ್ಟಿದ್ದನ್ನು ಸ್ಮರಿಸಿದ ಅವರು ವಿ.ಜಿ ಭಟ್ಟರ ಕಾವ್ಯದ ಪೂರ್ಣಪ್ರಮಾಣದ ವಿಮರ್ಶೆ ಸಾಧ್ಯವಾಗಬೇಕು. ವಿ. ಜಿ ಭಟ್ಟರ ಕೃತಿಗಳು ಲಭ್ಯವಾಗಬೇಕು" ಎಂದರು. ವಿದ್ಯಾಧರ ಕಡತೋಕಾ, ಮಾಸ್ತಿ ಗೌಡ ವಿವಿಧ ಗೋಷ್ಠಿಗಳನ್ನು ನೆರವೇರಿಸಿದರು.

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**